# ಸರ್ ಜೇಮ್ಸ್ ಜಾರ್ಜ್ ಫ್ರೇಜರ್

ಡಾ. ವಾಮನ ನಂದಾವರ

ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡೆಮಿ
ಬೆಂಗಳೂರು - ೫೬೦ ೦೦೧.

# ಸರ್ ಜೇಮ್ಸ್ ಜಾರ್ಜ್ ಫ್ರೇಜರ್

ಪ್ರಧಾನ ಸಂಪಾದಕರು

**ಡಾ|| ಎಚ್.ಜೆ. ಲಕ್ಕಪ್ಪಗೌಡ**

ಲೇಖಕರು

**ಡಾ. ವಾಮನ ನಂದಾವರ**

ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡೆಮಿ
ಬೆಂಗಳೂರು

"SIR JAMES GEORGE FRAZER" Written by Dr. Vamana Nandavara, Pub.by M.S.Siddegowda, Registrar, Karnataka Janapada and Yakshagana Academy, Nrupatunga Road, Bangalore - 560 001

Pages vi + 61 Price Rs. 20/-

First Impression : 1997

C Janapada & Yakshagana Academy

ಬೆಲೆ : ರೂ. 20/-

ಪ್ರಕಾಶಕರು :
ಎಂ.ಎಸ್.ಸಿದ್ದೇಗೌಡ
ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ಕೆನರಾ ಫೈನಾನ್ಸ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೧

ಮುದ್ರಣ ಮತ್ತು ಛಾಯಾಕ್ಷರ ಜೋಡಣೆ :

ಪ್ರಗತಿ ಗ್ರಾಫಿಕ್ಸ್, 119, 3ನೇ ತಿರುವು,
ಆರ್.ಪಿ.ಸಿ. ಬಡಾವಣೆ, ಬೆಂಗಳೂರು - 40
ದೂರವಾಣಿ :3409512.

# ಪ್ರಧಾನ ಸಂಪಾದಕರ ಮಾತು

ಹಿಂದೆ ಗ್ರಾಮೀಣ ಜನಾಂಗದ ಸ್ವಯಂಸ್ಫೂರ್ತ ಹಾಗೂ ದಟ್ಟವಾದ ಅನನ್ಯ ಅನುಭವದ್ರವ್ಯ ಕೇಂದ್ರಿತ ಹಾಡು, ಕಥೆ, ಕಲೆ, ಸಂಸ್ಕೃತಿಗಳ ಸೃಷ್ಟಿ ಪ್ರದರ್ಶನ ಪ್ರಸಾರಗಳಲ್ಲಿ ಮಾತ್ರ ಮಗ್ನವಾಗಿದ್ದ ಜಾನಪದ ಇಂದು ಆ ಸೀಮಿತ ಪರಿಧಿಯನ್ನು ದಾಟಿ, ಶೋಧನೆ, ಸಂಶೋಧನೆ, ವಿಶ್ಲೇಷಣೆ ವಿಚಾರ ಪ್ರಯೋಗಗಳ ಗಂಭೀರ ಹಾದಿಗಳಲ್ಲಿ ಕ್ರಮಿಸುತ್ತ ಹೊಸಹೊಸ ಸಿದ್ಧಾಂತಗಳ ಆವಿಷ್ಕಾರ ಹಾಗೂ ಅನ್ವಯಿಕತೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತ ಇತರ ಜ್ಞಾನ ವಿಜ್ಞಾನ ಕ್ಷೇತ್ರಗಳ ಅಂತರ್‌ಶಿಸ್ತೀಯ ಅಧ್ಯಯನವನ್ನು ಧಾರಣ ಮಾಡಿಕೊಳ್ಳುತ್ತ ಜಾನಪದ ಶಾಸ್ತ್ರವಾಗಿ ತ್ರಿವಿಕ್ರಮ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಅದ್ಭುತ ಪ್ರಮಾಣದ ಜಾನಪದ ಸಂಪತ್ತನ್ನು ತನ್ನಲ್ಲಿ ಹುದುಗಿಸಿ ಕೊಂಡಿರುವ ಕರ್ನಾಟಕ ಈ ಹೊತ್ತಿನಲ್ಲಿ ಜಾನಪದದ ಬಗೆಗೆ ಕೇವಲ ಮುಗ್ಧ ಕುತೂಹಲ ಮತ್ತು ಅವಿಚಾರಿತ ಅಭಿಮಾನಗಳನ್ನು ಕನವರಿಸುತ್ತ ಚಿಪ್ಪಿನೊಳಗಣ ಆಮೆಯಾಗಿ ಉಳಿಯುವುದು ಸರ್ವಥಾ ಅಪೇಕ್ಷಣೀಯವಲ್ಲ; ಜಗತ್ತಿನಾದ್ಯಂತ ಈ ಕ್ಷೇತ್ರದಲ್ಲಿ ನಡೆಯುತ್ತಿರುವ ವೈವಿಧ್ಯಮಯ ಚಿಂತನೆ ಹಾಗೂ ಪ್ರಯೋಗಗಳಿಗೆ ತನ್ನನ್ನು ಒಡ್ಡಿಕೊಂಡಾಗ ಮಾತ್ರ ಅದು ತನ್ನ ಅನಂತ ವೈಶಿಷ್ಟ್ಯದ ಅಸಾಧಾರಣ ಅಂತರ್ನಿಹಿತ ನಿಕ್ಷೇಪದ ಸಂಪೂರ್ಣ ಸಾಕ್ಷಾತ್ಕಾರ ಮಾಡಿಕೊಳ್ಳಲು ಮತ್ತು ಮಾಡಿಸಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವಜಾನಪದ ಭೂಮಿಕೆಯಲ್ಲಿ ನಡೆಯುತ್ತಿರುವ ಪ್ರಯೋಗಗಳ ಚಿಂತನೆಗಳ ಮುಖ್ಯ ಫಲಿತಗಳನ್ನು ಕನ್ನಡಕ್ಕೆ ತಂದುಕೊಂಡು ನಮ್ಮ ಪರಂಪರಾಗತ ಜ್ಞಾನಕ್ಕೆ ಹೊಸ ಹೊಳಪನ್ನು ಹರಿತವನ್ನು ವಿಸ್ತಾರವನ್ನು ದೊರಕಿಸಿಕೊಳ್ಳುವುದು ಅನಿವಾರ್ಯವಾಗಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದ್ದು ವಿಶ್ವಪ್ರಸಿದ್ಧ ಜಾನಪದ ವಿದ್ವಾಂಸರನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುತ್ತಿದೆ. ಪ್ರಸ್ತುತ ಕೃತಿ ಇಂಥ ಪ್ರಯತ್ನಗಳಲ್ಲಿ ಒಂದು.

ಸರ್ ಜೇಮ್ಸ್ ಜಾರ್ಜ್ ಫ್ರೇಜರ್ ಆಧುನಿಕ ಮಾನವ ವಿಜ್ಞಾನದ ಸರ್ವಶ್ರೇಷ್ಠ ಪ್ರವರ್ತಕ. ಜಾನಪದದ ಸರ್ವತೋಮುಖ ಪರಿಚಯವನ್ನು ಮಾಡಿಕೊಟ್ಟ ಅದರ ಅನನ್ಯವಾದ ಸೂಕ್ಷ್ಮಾಂಶಗಳನ್ನು ಜಗತ್ತಿನ ಮುಂದಿಟ್ಟ ಖ್ಯಾತ ವಿದ್ವಾಂಸ ಈತ. ಫ್ರೇಜರನ ಕೃತಿಯನ್ನು ಓದದ ಯಾವ ಜಾನಪದ ವಿದ್ವಾಂಸನ ಜ್ಞಾನವು ಅಪರಿಪೂರ್ಣವಾಗುತ್ತದೆ. 'ದಿ ಗೋಲ್ಡನ್ ಬೋ' ಎಂಬ ಆತನ ಕೃತಿ ಜಾನಪದ ಕ್ಷೇತ್ರದ ಒಂದು ಮಹಾನ್ ಕೃತಿ. ಜಾನಪದ, ಧರ್ಮ, ವಿಜ್ಞಾನ, ಪುರಾಣ, ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ

ತಲಸ್ಪರ್ಶಿಯಾದ ಅಧ್ಯಯನ ಮತ್ತು ಸಂಶೋಧನೆ ಈ ಕೃತಿಯಲ್ಲಿ ಅನ್ಯ ದೃಶ್ಯವಾಗಿ ಮೂಡಿ ಬಂದಿದೆ. ಜನಪದರ ಬದುಕಿನ ವಿರಾಟ ಸ್ವರೂಪದಲ್ಲಿ ಅವರ ಜೀವನವನ್ನು ಬಹುಮುಖ್ಯವಾಗಿ ರೂಪಿಸುವ ಆಚರಣೆಗಳು ಮತ್ತು ನಂಬಿಕೆಗಳನ್ನು ಅನನ್ಯವಾದ ರೀತಿಯಲ್ಲಿ ಈ ಮಹಾಲೇಖಕ ಇಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಅತ್ಯಂತ ಶಕ್ತಿಪೂರ್ಣವೂ, ಸುಂದರವೂ ಆದ ಭಾಷೆ, ವಿಜ್ಞಾನ ಮತ್ತು ತತ್ವಜ್ಞಾನಗಳ ಸಮ್ಮೇಳನದ ಆಳವಾದ ಒಳನೋಟ ಇಲ್ಲಿ ತೆರೆದುಕೊಂಡಿರುವುದು ಮಾತ್ರವಲ್ಲದೆ ಈ ಕೃತಿ ಕುಲದೇವತಾರಾಧನೆಯನ್ನು, ಪ್ರಕೃತಿಯ ಆರಾಧನೆಯನ್ನು ಬೈಬಲ್‌ನಲ್ಲಿ ಗರ್ಭೀಕೃತವಾಗಿರುವ ಜಾನಪದೀಯ ಅಂಶಗಳನ್ನು ಅಮರತ್ವದ ಬಗೆಗಿನ ನಂಬಿಕೆ ಹಾಗೂ ಸತ್ತವರ ಪೂಜೆಯನ್ನು ಮನುಷ್ಯ, ದೇವರು ಮತ್ತು ಅಮರತ್ವವನ್ನು ಕುರಿತ ಸಂಗತಿಯನ್ನು ತಿಳಿಸುವ ಹಲವು ಗ್ರಂಥಗಳನ್ನು ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಮೂರು ಕೃತಿಗಳನ್ನು ಈತ ರಚಿಸಿದ್ದಾನೆ. ಫ್ರೇಜರನ ವಿದ್ವತ್ ಕಾಲ ಬದಲಾದರೂ ಆಲೋಚನೆ ವ್ಯತ್ಯಸ್ಥಗೊಂಡರೂ ಜಾನಪದ ಸಂಶೋಧಕರು ಓದಲೇಬೇಕಾದ ಅನಿವಾರ್ಯ ವಿದ್ವತ್ ಗ್ರಂಥಗಳನ್ನು ರಚಿಸುವ ಮೂಲಕ ಈ ಮಹಾವಿದ್ವಾಂಸ ಇಂದು ಕೂಡ ಪ್ರಸ್ತುತನಾಗಿದ್ದಾನೆ. ಇಂಥ ಮಹಾ ಪ್ರತಿಭಾವಂತನು ಮತ್ತು ಮಹಾನ್ ಸಂಶೋಧಕನು ಆದ ಜಾಗತಿಕ ವಿದ್ವಾಂಸನ ಜೀವನ ಹಾಗೂ ಸಾಧನೆಗಳ ಪರಿಚಯವನ್ನು ಡಾ:ವಾಮನ ನಂದಾವರ ಅವರು ಈ ಮೂಲಕ ಸಂಕ್ಷಿಪ್ತವಾದರೂ ಸುಂದರವಾಗಿ ಮತ್ತು ಅಚ್ಚುಕಟ್ಟಾಗಿ ಮಾಡಿಕೊಟ್ಟಿದ್ದಾರೆ.

ಡಾ: ವಾಮನನಂದಾವರ ಅವರು ಕನ್ನಡ ಮತ್ತು ತುಳು ಜಾನಪದ ಕ್ಷೇತ್ರದಲ್ಲಿ ಒಂದು ಮುಖ್ಯ ಹೆಸರು. ಸತತವಾದ ಆಸಕ್ತಿ, ಅಧ್ಯಯನಶೀಲತೆ ಮತ್ತು ಉತ್ಸಾಹಗಳಿಂದ ಅವರು ಈ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಜಗತ್ತಿನ ಪ್ರಮುಖ ಜಾನಪದ ವಿದ್ವಾಂಸರ ಕೃತಿಗಳನ್ನು ಮತ್ತು ಅವರ ಆಲೋಚನೆಗಳನ್ನು ಮನನ ಮಾಡಿರುವ ಇವರು ಅದಕ್ಕೆ ಸಾಕ್ಷಿಯಾಗಿ ಹಲವು ಕೃತಿಗಳನ್ನು ರಚಿಸಿದ್ದಾರೆ. ಇಂತಹ ವಿದ್ವಾಂಸರು ಫ್ರೇಜರನನ್ನು ಕುರಿತ ಈ ಕೃತಿಯನ್ನು ರಚಿಸುವ ಮೂಲಕ ಆ ಮಹಾವಿದ್ವಾಂಸನ ಕೃತಿಗಳ ಅಧ್ಯಯನಕ್ಕೆ ಒಂದು ಗಮನಾರ್ಹ ಪ್ರವೇಶಿಕೆಯನ್ನು ಒದಗಿಸಿಕೊಟ್ಟಿದ್ದಾರೆ. ಇವರಿಗೆ ಅಕಾಡೆಮಿ ಪರವಾಗಿ ಕೃತಜ್ಞತೆಗಳು. ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಪ್ರಗತಿ ಗ್ರಾಫಿಕ್ಸ್‌ನ ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ಧನ್ಯವಾದಗಳು.

ದಿನಾಂಕ : 27.12.1997 ಡಾ॥ ಎಚ್.ಜೆ. ಲಕ್ಕಪ್ಪಗೌಡ
ಬೆಂಗಳೂರು ಅಧ್ಯಕ್ಷರು

# ಅರಿಕೆ

ಆಧುನಿಕ ಮಾನವ ವಿಜ್ಞಾನದ ಪ್ರವರ್ತಕನೆಂದು ಖ್ಯಾತಿಪಡೆದ ಸರ್ ಜೇಮ್ಸ್ ಜಾರ್ಜ್ ಫ್ರೇಜರನ ಕುರಿತಾಗಿ ಒಂದು ಕಿರು ಹೊತ್ತಗೆಯನ್ನು ಬರೆದು ಕೊಡುವಂತೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನನ್ನಲ್ಲಿ ಕೇಳಿಕೊಂಡಾಗ ಈ ವಿದೇಶಿ ವಿದ್ವಾಂಸನ ಕುರಿತು ನಾನು ಅಷ್ಟಾಗಿ ಓದಿಕೊಂಡಿರದಿದ್ದರೂ ಒಪ್ಪಿಕೊಳ್ಳುವ ಧೈರ್ಯ ಮಾಡಿದ್ದೆ. ಈ ಅಡ್ಡಿಯಿಂದಾದರೂ ಓರ್ವ ಶ್ರೇಷ್ಠ ವಿದ್ವಾಂಸನ ಬದುಕು ಮತ್ತು ಸಾಧನೆಗಳನ್ನು ಅರ್ಥಮಾಡಿಕೊಳ್ಳುವ ಸಂದರ್ಭವಾಗುತ್ತದೆ ಎನ್ನುವ ಕಾರಣದಿಂದ ಈ ಕೆಲಸಕ್ಕೆ ನಾನು ಮನಸ್ಸು ಮಾಡಿದೆ.

ಜಾನಪದ ಅಥವಾ ಮಾನವ ವಿಜ್ಞಾನದಂತಹ ಯಾವುದೇ ಅಧ್ಯಯನವಾಗಲಿ, ಸಂಶೋಧನೆಯಾಗಲಿ ಇಂದು ಅಂತಾರಾಷ್ಟ್ರೀಯ ವ್ಯಾಪ್ತಿಯ ಮಹತ್ವವನ್ನು ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಜಾಗತಿಕ ಜಾನಪದ ಅಥವಾ ವಿಶ್ವಪರಂಪರೆಗಳ ಅಧ್ಯಯನಗಳು ವ್ಯಾಪಕವಾಗಿ, ತೌಲನಿಕವಾಗಿ ನಡೆಯಬೇಕಾದ ಅಗತ್ಯವಿದೆ. ಫ್ರೇಜರನ ಮೂಲಕ ಆತನ ಗೋಲ್ಡನ್ ಬೋದಂತಹ ಕೃತಿಗಳ ಪರಿಚಯ ಮಾಡಿಕೊಂಡಾಗ ನಮ್ಮ ಪರಿಸರದ ಸ್ಥಳೀಯ ಪರಂಪರೆಯ ಅಧ್ಯಯನ, ಸಂಶೋಧನೆಗಳಿಗೊಂದು ಹೊಸ ಬಗೆಯ ಆಲೋಚನೆಯ ನೆಲೆ, ವಿಶ್ಲೇಷಣೆಯ ದೃಷ್ಟಿ ಪ್ರಾಪ್ತವಾಗುತ್ತದೆ. ಈ ಕೃತಿಯಲ್ಲಿ ಫ್ರೇಜರನನ್ನು ಆತನ ಉದ್ದೇಶ, ಸಾಧನೆ, ಪ್ರತಿಪಾದನೆಗಳನ್ನು ಪರಿಚಯಿಸುವುದರ ಜೊತೆಗೆ ಆದಿಮಾನವ ಪರಂಪರೆಯ ವಿಶಿಷ್ಟ ಲೋಕದ ದರ್ಶನ ಮಾಡಿಕೊಟ್ಟ ಈ ವಿದ್ವಾಂಸ ಮಾನವಕುಲಶಾಸ್ತ್ರದ ಆಧುನಿಕ ಅಧ್ಯಯನಕ್ಕೆ ನೀಡಿದ ಕೊಡುಗೆಯೇನು ಎನ್ನುವುದನ್ನು ನಿರೂಪಿಸಲು ಪ್ರಯತ್ನಿಸಿದ್ದೇನೆ. ಈ ಹೊತ್ತಗೆಯನ್ನು ಸಿದ್ಧಪಡಿಸುವ ಕಾಲಕ್ಕೆ ಆದಷ್ಟು ಮಟ್ಟಿಗೆ ಫ್ರೇಜರನ ಕೃತಿಗಳನ್ನು ಫ್ರೇಜರನ ಅಧ್ಯಯನ ಕೃತಿಗಳ ಕುರಿತು ವಿದ್ವಾಂಸರು ನಡೆಸಿರುವ ಚರ್ಚೆಗಳನ್ನು, ವ್ಯಾಖ್ಯಾನಗಳನ್ನು ಗಮನಿಸಿದ್ದೇನೆ. ಬಹುಮುಖ್ಯವಾಗಿ ಈ ವಿದ್ವಾಂಸನ ಅಧ್ಯಯನ ವಿಶ್ಲೇಷಣೆಗಳಿಗೆ ಹೊಸ ಚಿಂತನೆಯ ಚಾಲನೆಮಾಡಿಕೊಟ್ಟ ಪ್ರಸಿದ್ಧ ಆಧುನಿಕ ಮಾನವಕುಲಶಾಸ್ತ್ರಜ್ಞ ಬ್ರಾನಿಸ್ಲ ಮ್ಯಾಲಿನೋಸ್ಕಿಯ ಲೇಖನಗಳು ನನಗೆ ನೆರವಾಗಿವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಹೆಚ್ಚು ಕಡಿಮೆ ಮೂರು ದಶಕಗಳ ಹಿಂದೆ ಜಾನಪದ

ಅಧ್ಯಯನಕ್ಕೆ ಚಿಗುರು ಮೀಸೆ ಹುಟ್ಟಿ ನವೋತ್ಸಾಹ ತುಂಬಿಕೊಂಡ ಕಾಲಕ್ಕಾಗಲೇ ಫ್ರೇಜರನಂತಹ ವಿದ್ವಾಂಸನ 'ಗೋಲ್ಡನ್ ಬೋ'ವನ್ನು ಕನ್ನಡದಲ್ಲಿ ಬಹಳಷ್ಟು ಸಮರ್ಥವಾಗಿ ಮತ್ತು ಸಮಗ್ರವಾಗಿ ಪರಿಚಯ ಮಾಡಿಕೊಟ್ಟಿರುವ ಪ್ರೊ.ತೀ.ನಂ. ಶಂಕರನಾರಾಯಣ ಅವರ ಜಾನಪದ ಮೈಲಿಕಲ್ಲುಗಳು ಕೃತಿ ನನಗೆ ಬಹಳಷ್ಟು ಸಹಾಯ ಮಾಡಿದೆ. ಅವರಿಗೆ ನಾನು ಋಣಿಯಾಗಿದ್ದೇನೆ.

ಫ್ರೇಜರನಂತಹ ಓರ್ವ ಅನನ್ಯ ಮತ್ತು ಅಸಾಮಾನ್ಯ ವಿದ್ವಾಂಸನ ಕುರಿತು ಬರೆಯಲು ಅವಕಾಶಮಾಡಿಕೊಟ್ಟ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಪ್ರೊ.ಹೆಚ್.ಜೆ. ಲಕ್ಕಪ್ಪಗೌಡರಿಗೂ, ರಿಜಿಸ್ಟ್ರಾರ್‌ರವರಾದ ಶ್ರೀ ಸಿದ್ದೇಗೌಡರಿಗೂ ಅಕಾಡೆಮಿಯ ಸರ್ವಸದಸ್ಯರಿಗೂ ನನ್ನ ಕೃತಜ್ಞತೆಗಳು. ಈ ಕೃತಿಯನ್ನು ಬರೆಯಲು ಪ್ರೇರಣೆ ನೀಡಿದ ಪ್ರಸಿದ್ಧ ಜಾನಪದ ವಿದ್ವಾಂಸ ದಿ|| ಜೀ.ಶಂ.ಪರಮಶಿವಯ್ಯ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತಿದ್ದೇನೆ. ಫ್ರೇಜರನ ಕೃತಿಗಳನ್ನು ಮುಖ್ಯವಾಗಿ 'ಗೋಲ್ಡನ್‌ಬೋ'ದ ಸಂಪುಟಗಳನ್ನು ಒದಗಿಸಿಕೊಟ್ಟಿರುವ ಉಡುಪಿ ಎಂ.ಜಿ.ಎಂ.ಕಾಲೇಜಿನ ಗ್ರಂಥಪಾಲಕರಿಗೂ ಪ್ರೊ. ಅಮೃತ ಸೋಮೇಶ್ವರರಿಗೂ ನಾನು ಆಭಾರಿಯಾಗಿದ್ದೇನೆ.

ಡಾ. ವಾಮನ ನಂದಾವರ

ಮಂಗಳೂರು

೧೧.೯.೧೯೯೭.

# ಸರ್ ಜೇಮ್ಸ್ ಜಾರ್ಜ್ ಫ್ರೇಜರ

(೧೮೫೪ - ೧೯೪೧)

## ಹುಟ್ಟು - ಬೆಳವಣಿಗೆ - ಸಾಧನೆ :

ಮಾನವ ಕುಲಶಾಸ್ತ್ರಜ್ಞನಾಗಿ ಬಹುದೊಡ್ಡ ಹೆಸರು ಮಾಡಿದ್ದ ಸರ್ ಜೇಮ್ಸ್ ಜಾರ್ಜ್ ಫ್ರೇಜರ್ ಇಂಗ್ಲಾಂಡ್ ದೇಶದವನು. ಹುಟ್ಟಿದ್ದು ಬೆಳೆದದ್ದು ಸ್ಕಾಟ್‌ಲೆಂಡಿನಲ್ಲಿ. ಬುದ್ಧಿಸಾಧನೆಗಳಿಂದ ಅಸಾಧಾರಣ ವ್ಯಕ್ತಿತ್ವ ಗಳಿಸಿದ್ದು ಇಂಗ್ಲಾಂಡಿನಲ್ಲಿ. ಶೈಕ್ಷಣಿಕ ರಂಗದಲ್ಲಿ ಸಾಮಾಜಿಕ ಮಾನವ ಶಾಸ್ತ್ರಜ್ಞನೆಂದೇ ಪ್ರಸಿದ್ಧನಾದವನು. ಆದರೂ ಜಾನಪದ ಮತ್ತು ಮಾನವಕುಲಶಾಸ್ತ್ರಗಳಿಗೂ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡವನು. ಕೇಂಬ್ರಿಡ್ಜ್, ಲಿವರ್‌ಪೂಲ್ ವಿಶ್ವವಿದ್ಯಾನಿಲಯಗಳಲ್ಲಿ ಸಾಮಾಜಿಕ ಮಾನವಶಾಸ್ತ್ರದ ಪ್ರಾಧ್ಯಾಪಕನಾಗಿದ್ದವನು. ಹಲವು ಶ್ರೇಷ್ಠ ಕೃತಿಗಳನ್ನು ನೀಡಿದವನು. ಅವುಗಳಿಗಾಗಿ ಗಣನೀಯ ಗೌರವ ಪ್ರಶಸ್ತಿಗಳನ್ನು ಪಡೆದವನು. ನೈಟ್‌ಹುಡ್ ಪದವಿಗಳಿಸಿದವನು. ಬಹಳಷ್ಟು ವಿದ್ವಾಂಸರ ಮೇಲೆ ಪ್ರಧಾನವಾಗಿ ಸಾಂಸ್ಕೃತಿಕ ಮಾನವ ಶಾಸ್ತ್ರಜ್ಞರ ಮೇಲೆ ಗಾಢವಾದ ಪ್ರಭಾವ ಬೀರಿದವನು.

ಇಂಗ್ಲಾಂಡಿನ ಆಂಗ್ಲ ವಿಶ್ವವಿದ್ಯಾನಿಲಯದಲ್ಲಿದ್ದರೂ ಹೆಚ್ಚು ಪ್ರಸಿದ್ಧಿ ಪಡೆಯದೆ ಖಾಸಗಿ ಬದುಕನ್ನು ಬದುಕಿದ ವಿದ್ವಾಂಸ ಫ್ರೇಜರ. ಬಹುಕಾಲದವರೆಗೆ ಆತ ಅಧ್ಯಾಪನ ಕೆಲಸದಲ್ಲಿ ಮುಂದುವರಿಯಲೂ ಇಲ್ಲ. ತೀರ ತಡವಾಗಿ ಎಂದರೆ ತನ್ನ ನಲವತ್ತೈದನೆಯ ವಯಸ್ಸಿನಲ್ಲಿ ವಿಧವೆಯೋರ್ವಳನ್ನು ಮದುವೆಯಾದವನು. ಹದ್ದುಬದ್ದಿಲ್ಲದ ಸರಳವಾದ ಜೀವನ ಈ ದಂಪತಿಯದ್ದಾಗಿತ್ತು. ಆದರೆ ಅವರಿಗೆ ಮಕ್ಕಳಿರಲಿಲ್ಲ. ಫ್ರೇಜರನಿಗೆ

ಜಗತ್ತಿನಾದ್ಯಂತ ಜನರೊಡನೆ ಪತ್ರವ್ಯವಹಾರವಿದ್ದರೂ ಆತ ಇಂಗ್ಲಾಂಡಿನಿಂದ ಗ್ರೀಸ್ ಹೊರತು ಇತರ ಯಾವುದೇ ದೇಶಗಳಿಗೆ ಪ್ರಯಾಣ ಬೆಳೆಸಿರಲಿಲ್ಲ. ಫ್ರೇಜರನ ಖಾಸಗಿ ಕಾರ್ಯದರ್ಶಿ ಮತ್ತು ಆತ್ಮಚರಿತ್ರೆಕಾರ ಹೇಳುವಂತೆ ಆತನ ಬದುಕು ಏಕತಾನತೆಯದು. ಒಂದೇ ಒಂದು ಬೆಳವಣಿಗೆಯೆಂದರೆ ಅವನ ಬದುಕಿನ ಘಟನೆಗಳಲ್ಲಿ ಮುಖ್ಯವಾಗಿ ಪುಸ್ತಕಗಳ ಪಟ್ಟಿಮಾತ್ರ ಕಾಣಿಸಿಕೊಳ್ಳುತ್ತದೆ. ಆದರೆ ಆ ಪುಸ್ತಕಗಳಲ್ಲಿ "ಗೋಲ್ಡನ್ ಬೋ" ಇಡೀ ಜಗತ್ತನ್ನೇ ಬೆರಗುಗೊಳಿಸಿದೆ.

ಜಾನಪದ, ಪುರಾಣ, ಧರ್ಮ, ವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ಆಳವಾಗಿ ಅಭ್ಯಾಸ ನಡೆಸಿ ಅಂತಹ ಕ್ಷೇತ್ರಗಳ ಕುರಿತು ಸಮಗ್ರ ತಿಳುವಳಿಕೆ ಮೂಡಿಸಲು ಈ ಮೇರುಕೃತಿಯ ನಿರ್ಮಾಣದಲ್ಲಿ ಫ್ರೇಜರ ತನ್ನನ್ನು ಪೂರ್ಣವಾಗಿ ತೊಡಗಿಸಿಕೊಂಡದ್ದು ಹೌದು. ನಂಬಿಕೆಗಳನ್ನು ಆಚರಣೆಗಳನ್ನು ವಿಶ್ಲೇಷಣೆ ನಡೆಸಲು ಜನಪದರ ಬದುಕನ್ನು ಗ್ರಹಿಸಿಕೊಳ್ಳಲು ಈ ಮೂಲಕ ಒಂದು ರಹದಾರಿ ಹಾಕಿಕೊಟ್ಟದ್ದು ಹೌದು.

## ಫ್ರೇಜರನ ಕೃತಿಗಳು

### The Golden Bough : A Study in Comparative Religion

1890ರಲ್ಲಿ ಮೊತ್ತ ಮೊದಲಾಗಿ ಎರಡು ಸಂಪುಟಗಳಲ್ಲಿ ಈ ಕೃತಿ ಪ್ರಕಟವಾಯಿತು. ಲಂಡನ್; ಮೆಕ್ಮಿಲನ್ ಕಂಪೆನಿ ಪ್ರಕಟಿಸಿದ್ದ ಈ ಕೃತಿಯನ್ನು ಮತ್ತೆ 1891ರಲ್ಲಿ 'ಏವೆನೆಲ್ ಬುಕ್ಸ್' ಕಂಪೆನಿ ಮರುಪ್ರಕಟಗೊಳಿಸಿದೆ. 'ದಿ ಗೋಲ್ಡನ್ ಬೋ'; 'ದಿ ರೂಟ್ಸ್ ಆಫ್ ರಿಲಿಜಿಯನ್ ಆಂಡ್ ಫೋಕ್‌ಲೋರ್ ವಿದ್ 100 ಇಲ್ಲಸ್ಟ್ರೇಶನ್ಸ್' ಎನ್ನುವ ಹೆಸರಿನಲ್ಲಿ ಒಂದೇ ಸಂಪುಟವಾಗಿ ಪ್ರಕಟಗೊಂಡ ಈ ಗ್ರಂಥದ ಸ್ವಾಮ್ಯ 'ಕ್ರೌನ್ ಪಬ್ಲಿಷರ್ಸ್, ಇಂಕ್' ಸಂಸ್ಥೆಯದು. ಈ ಆವೃತ್ತಿಯಲ್ಲಿ ಫ್ರೇಜರ ಜಗತ್ತಿನಾದ್ಯಂತ ಸಂಗ್ರಹಿಸಿದ ಆತನ ಸಮಕಾಲೀನ ನಿಸರ್ಗ ಪ್ರೇಮಿಗಳ ಕಲಾವಿದರ ಸೊಗಸಾದ ಮತ್ತು ಅಪೂರ್ವವಾದ ಚಿತ್ರಗಳಿವೆ. ಈ ಕೃತಿ ತನ್ನ ಶಕ್ತಿಶಾಲಿಯಾದ ಮತ್ತು ಸುಂದರವಾದ ಭಾಷೆಯಿಂದಾಗಿ ದೇಶ ಕಾಲಗಳ ಅಂತರವಿದ್ದರೂ ಅದರ ಆಳ ಮತ್ತು ಒಳನೋಟಗಳಿಗಾಗಿ ಜಾಗತಿಕ ಮನ್ನಣೆ ಪಡೆದಿದೆ.,

Totemism and Exogamy :

ಕುಲದೇವತಾರಾಧನೆಯ ಉಗಮ, ವಿಕಾಸ ಹಾಗೂ ಭಿನ್ನ ಗೋತ್ರ ವಿವಾಹದೊಡನೆ ಇರುವ ಸಂಬಂಧಗಳ ಮತ್ತು ಸಾಮಾಜಿಕ ನಂಬಿಕೆಗಳ ಕುರಿತಾಗಿ ಅತ್ಯಂತ ಆಳವಾಗಿ ಮತ್ತು ವಿಸ್ತಾರವಾಗಿ ಅಧ್ಯಯನ ನಡೆಸಿರುವ ಗ್ರಂಥವಿದು. ಹಾಗೆ ನೋಡಿದರೆ ಫ್ರೇಜರ್ ಸಂಗ್ರಹದ ಅನೇಕ ವಿಷಯಗಳೇ ಇಂದು ಮೂಲಭೂತ ಆಧಾರಗಳಾಗಿ ಮಾನವ ಕುಲ ಶಾಸ್ತ್ರ ಮತ್ತು ಜಾನಪದ ಕ್ಷೇತ್ರಗಳಲ್ಲಿ ಚರ್ಚೆಗೊಳ್ಳುತ್ತಿರುವುದು.

Worship of Nature :

ಇದು ಎರಡು ಸಂಪುಟಗಳಲ್ಲಿದೆ. ಪ್ರಕೃತಿಯ ವಿವಿಧ ಘಟಕಗಳಾದ ಆಕಾಶ, ಸೂರ್ಯ, ಭೂಮಿ, ನೀರು, ಬೆಂಕಿ, ಗಾಳಿ, ನಕ್ಷತ್ರ, ಸಸ್ಯ, ಪ್ರಾಣಿ ಇವುಗಳ ಪೂಜೆ, ಆರಾಧನೆ, ವಿವಿಧ ದೇಶಗಳಲ್ಲಿ ವಿವಿಧ ಕ್ರಮಗಳಲ್ಲಿ ಆದಿಮಾನವರಲ್ಲಿ ಮತ್ತು ನಾಗರಿಕ ಜನಮನಗಳಲ್ಲಿ ಹೇಗೆ ನಡೆಯುತ್ತದೆ ಎಂಬ ಬಗೆಗೆ ಈ ಕೃತಿಯಲ್ಲಿ ತಳಸ್ಪರ್ಶಿಯಾಗಿ ಫ್ರೇಜರ ಚರ್ಚೆ ನಡೆಸಿದ್ದಾನೆ.

Folklore In Old Testament :

ಬೈಬಲ್‌ನ ಹಳೆಯ ಒಡಂಬಡಿಕೆ ಹಾಗೂ ಜಾನಪದ ಕ್ಷೇತ್ರದಲ್ಲಿ ಫ್ರೇಜರನಿಗಿದ್ದ ವಿದ್ವತ್ತು ಈ ಕೃತಿಯ ಮೂರು ಸಂಪುಟಗಳಲ್ಲಿ ಹೊರಹೊಮ್ಮಿದೆ. ಧರ್ಮಗಳ ತೌಲನಿಕ ಅಧ್ಯಯನದಲ್ಲಿ ಐತಿಹ್ಯಗಳ ಹಾಗೂ ನ್ಯಾಯ ಶಾಸ್ತ್ರದ ಕ್ಷೇತ್ರದಲ್ಲಿ ಈ ಕೃತಿ ಒಂದು ಸಾಕ್ಷಿ ಗ್ರಂಥವಾಗಿದೆ.

Belief In Immortality and the Worship of the Dead :

ವಿವಿಧ ದೇಶಗಳ ಪರಂಪರೆಗಳ, ನಂಬಿಕೆಗಳ ಸಂಗ್ರಹ ಮತ್ತು ಅವುಗಳಿಗೆ

ಸಂಬಂಧಿಸಿದ ಫ್ರೇಜರನ ಪ್ರಮೇಯಗಳು, ಪ್ರತಿಪಾದನೆಗಳು ಈ ಗ್ರಂಥದಲ್ಲಿವೆ. ಮೂರು ಸಂಪುಟಗಳಲ್ಲಿ ವಿಸ್ತರಿಸಿಕೊಂಡಿರುವ ಅಧ್ಯಯನ ಕೃತಿಯಿದು.

Psyche Task :

ವಿವಿಧ ಪದ್ಧತಿಗಳ ಮೇಲೆ ಆಗಿರುವ ಜನಪದ ನಂಬಿಕೆಗಳ ಪ್ರಭಾವವನ್ನು ಈ ಗ್ರಂಥ ಸಾದರಪಡಿಸುತ್ತದೆ.

Man God and Immortality :

ತನ್ನ ಎಲ್ಲ ಕೃತಿಗಳ ಸಾರಸಂಗ್ರಹವನ್ನು ಒಂದೆಡೆ ಒಂದುಗೂಡಿಸಿರುವ ಕೆಲಸವನ್ನು ಈ ಕೃತಿಯಲ್ಲಿ ಕಾಣಬಹುದು. ಸಾಂಸ್ಕೃತಿಕ ಮಾನವಶಾಸ್ತ್ರ ಮತ್ತು ಜಾನಪದಕ್ಕೆ ಸಂಬಂಧಿಸಿದಂತೆ ಫ್ರೇಜರನ ವಿಚಾರಧಾರೆಯ ವ್ಯಾಪ್ತಿ ಮತ್ತು ವಿಸ್ತಾರವನ್ನು ಇಲ್ಲಿ ಗಮನಿಸಬಹುದು.

Garnered Sheaves :

ಫ್ರೇಜರನ ಬರಹಗಳು, ಭಾಷಣಗಳು, ಚರ್ಚೆ-ವಿಮರ್ಶೆಗಳು ಈ ಸಂಪುಟದಲ್ಲಿ ದಾಖಲಾಗಿವೆ.

The Killing of the Khozan Kings :

ಕಾಜಾರ ಅರಸನನ್ನು ಕೊಲ್ಲುವ ಒಂದು ವ್ಯವಸ್ಥೆಯ ಕುರಿತು ಹಿರಿಯ ಅರಬ ಪ್ರಯಾಣಿಕರಿಂದ ಸಂಗ್ರಹಿಸಿದ ವಿಚಾರಗಳಿಗೆ ಸಂಬಂಧಿಸಿದ ಕೃತಿಯಿದು.

The Mackil Ethnological Expedition to Central Africa

ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಫ್ರೇಜರನ ಕೃತಿಗಳು ಮುಖ್ಯವಾಗಿ ಮೂರು.

Goryan's Head and other Literary Essay's
Letters of William Cowpes
Essays of Joseph Addition.

ಫ್ರೇಜರ ತನ್ನ ಪ್ರಧಾನ ವಿಷಯಕ್ಕೆ ಬೇಕಾದ ಪೂರಕ ಮಾಹಿತಿಗಳನ್ನು ಜಗತ್ತಿನ ವಿವಿಧ ಭಾಗಗಳಿಂದ ಸಂಗ್ರಹಿಸಿದ್ದಾನೆ. ಆದ್ದರಿಂದಲೇ ಒಂದು ಸಣ್ಣ ಪ್ರಬಂಧವಾಗ ಬಹುದಾಗಿದ್ದ ಕೃತಿ ಆಫ್ಟರ್ ಮಾತ್ ಎನ್ನುವ ಅನುಬಂಧವೂ ಸೇರಿದಂತೆ ಹದಿಮೂರು ಸಂಪುಟಹಳ ಬೃಹತ್ ಕೃತಿಯಾಗಿ ಬೆಳೆದು ಬಂತು.

ಫ್ರೇಜರನ ಈ ಅಧ್ಯಯನ ಕೃತಿ ಇಂದು ಮಾನವ ವಿಜ್ಞಾನವಾಗಲಿ, ಜಾನಪದ ಪುರಾಣ, ವಿಜ್ಞಾನ, ಧರ್ಮವಾಗಲೀ ಇಂತಹ ಯಾವುದೇ ಕ್ಷೇತ್ರದಲ್ಲಿಯಾಗಲಿ ನಡೆದಿರಬಹುದಾದ ವೈಜ್ಞಾನಿಕ ಸಂಶೋಧನೆಗಳಿಗೆ ಒಂದು ಪ್ರೇರಣೆ. ಅಧ್ಯಯನ ಸಿದ್ಧಾಂತಗಳು ಒಲವುಗಳು ಇಂದು ಬದಲಾಗಿರಬಹುದು. ಫ್ರೇಜರನ ಎಷ್ಟೋ ಗ್ರಹಿಕೆಗಳು ಇಂದು ಪ್ರಸ್ತುತವಲ್ಲದಿರಬಹುದು; ಆತನ ವಾದಗಳು ಪ್ರತಿಪಾದನೆಗಳು ಇಂದು ಹಳೆಯದಾಗಿರಬಹುದು. ಆದರೆ ಕುಲದೇವತಾ ಪದ್ಧತಿಗಳನ್ನು ವಿಧಿ ನಿಷೇಧಗಳನ್ನು, ವಿವಿಧ ದೇಶಗಳ ವಿವಿಧ ಜನಾಂಗಗಳ ಸಾಂಸ್ಕೃತಿಕ ಪರಂಪರೆಗಳನ್ನು ಸಮಗ್ರವಾಗಿ ಮೊತ್ತಮೊದಲು ಅಧ್ಯಯನಮಾಡಿ ವಸ್ತು ವಿಶ್ಲೇಷಣೆ ನಡೆಸುವ ದೊಡ್ಡ ಪ್ರಮಾಣದ ಕೆಲಸ ಫ್ರೇಜರನಿಂದಾಗಿದೆ ಎನ್ನುವುದನ್ನು ಮರೆಯಲಾಗದು.

## ಸಾಧನೆಯ ಬೆನ್ನ ಹಿಂದೆ

ಪ್ರತಿಯೊಬ್ಬ ಗಂಡಸಿನ ಸಾಧನೆ ಮತ್ತು ಯಶಸ್ಸಿನ ಹಿಂದೆಯೂ ಒಬ್ಬಾಕೆ ಹೆಣ್ಣಿರುತ್ತಾಳೆ. ಎನ್ನುವುದನ್ನು ನಾವು ಒಪ್ಪಿಕೊಂಡಾಗಿದೆ. ಫ್ರೇಜರನ ಪಾಲಿಗೂ ಇದು ಸತ್ಯ. ಗೋಲ್ಡನ್ ಬೋ ಕೃತಿಯನ್ನು ಜನಪ್ರಿಯವೂ, ಜನಸಾಮಾನ್ಯವೂ ಆಗುವಂತೆ ರೂಪಿಸಿದ

ಕೀರ್ತಿ ಆತನ ಹೆಂಡತಿಯದು. ಮೂಲಗ್ರಂಥದಿಂದ ಆಕೆ ಅನೇಕ ಸ್ವಾರಸ್ಯ ಭಾಗಗಳನ್ನು ಸಂಗ್ರಹಿಸಿ ಚಿನ್ನದ ಕೊಂಬೆಯ ಹಾಳೆಗಳು 'ಲೀವ್ಸ್ ಫ್ರಂ ದಿ ಗೋಲ್ಡನ್‌ಬೋ' ಎನ್ನುವ ಹೆಸರಿನಲ್ಲಿ ಮತ್ತೊಂದುಗ್ರಂಥವನ್ನು ಸಂಪಾದಿಸಿದ್ದಾಳೆ. ಅದು 1924ರಲ್ಲಿ ಪ್ರಕಟವಾಗಿದೆ. ಈ ಗ್ರಂಥದ ಮುನ್ನುಡಿಯಲ್ಲಿ ಆಕೆ ಸ್ಪಷ್ಟಪಡಿಸಿಕೊಂಡಂತೆ ಅದು ಉಪದೇಶ ಕೃತಿಯಲ್ಲ. ಮನೋರಂಜನೆಯೇ ಮುಖ್ಯ ಗುರಿಯಾಗಿರುವ ಕೃತಿ.

## ಶೋಧನೆಯ ಹೊಸ ಒಲವು ಮತ್ತು ಗ್ಯಾಸ್ಟರನ ಪರಿಷ್ಕರಣೆ

ಗೋಲ್ಡನ್ ಬೋ ಆ ಬಳಿಕ ಪರಿಷ್ಕಾರ ಪಡೆದಿದೆ. ತಿಯೋಡರ್ ಎಚ್.ಗ್ಯಾಸ್ಟರ್ ಎಂಬಾತ 'ದಿ ನ್ಯೂ ಗೋಲ್ಡನ್ ಬೋ' (1959) ಎಂಬ ಪರಿಷ್ಕೃತ ಗ್ರಂಥವನ್ನು ಪ್ರಕಟಿಸಿದ್ದಾನೆ. ಸಂಶೋಧನೆಯ ಹೊಸ ಒಲವುಗಳನ್ನು ಒಪ್ಪಿಕೊಂಡಾಗ ಹೇಗೆ ಹಳತು ಎನ್ನಬಹುದಾದ ಅಂಶಗಳು ಸಹಜವಾಗಿಯೇ ಅಪ್ರಸ್ತುತವಾಗುತ್ತವೋ ಹಾಗೆಯೇ ಅಂತಹ ಹಲವು ಭಾಗಗಳನ್ನು ಇಲ್ಲಿ ಕೈಬಿಡಲಾಗಿದೆ. ಆದರೆ ಮೂಲ ಉದ್ದೇಶಕ್ಕೆ ಭಂಗ ಬಾರದ ಹಾಗೆ ನೋಡಿಕೊಳ್ಳಲಾಗಿದೆ. ಫ್ರೇಜರನ ಪ್ರತಿಯೊಂದು ಅಭಿಪ್ರಾಯಕ್ಕೂ ಹೊಸದೃಷ್ಟಿಯಿಂದ ಪರಿಶೀಲನೆ ನಡೆಸಿ ಟಿಪ್ಪಣಿ ಬರೆಯಲಾಗಿದೆ. ಜಾನ್ ಕ್ಯಾನಿಂಗ್ ಎಂಬಾತ ಸಂಪಾದಿಸಿರುವ (1960) ಹಂಡ್ರಡ್ ಗ್ರೇಟ್ ಬುಕ್ಸ್ ಎಂಬ ಸಂಕಲನದಲ್ಲಿ ಗೋಲ್ಡನ್ ಬೋ ಸೇರಿರುವುದು ಗಮನಾರ್ಹವಾಗಿದೆ. (ನೋಡಿ: ಟಿ.ಎನ್.ಎಸ್.ಎನ್. 1973, 573-74)

## ಚಿನ್ನದ ಕೊಂಬೆಯ ಹಾಸು ಬೀಸು

ಸರ್ ಜೇಮ್ಸ್ ಫ್ರೇಜರನ ದಿ ಗೋಲ್ಡನ್ ಬೋ (The Golden Bough) 1890ರಲ್ಲಿ ಮೊತ್ತಮೊದಲು ಪ್ರಕಟವಾಯಿತು. ಇದರ ಅಂತಿಮ ಪರಿಷ್ಕರಣದಿಂದಾಗಿ ಇದು ವಿಸ್ತೃತಗೊಂಡು 12 ಸಂಪುಟಗಳಲ್ಲಿ ಪ್ರಕಟಗೊಂಡಿತು. ಆತನ ಪತ್ನಿ ಈ ಸಂಪುಟಗಳಿಂದ ಆಯ್ಕೆಗೊಳಿಸಿ ಪ್ರಕಟಿಸಿದ 'ಲೀವ್ಸ್ ಫ್ರಂ ದಿ ಗೋಲ್ಡನ್ ಬೋ' ಎನ್ನುವ

ಕೃತಿಯೂ ಸೇರಿದಂತೆ ಒಟ್ಟಿಗೆ 13 ಮಹಾಸಂಪುಟಗಳಲ್ಲಿ ಗೋಲ್ಡನ್ ಬೋ ವ್ಯಾಪಿಸಿಕೊಂಡಿತೆನ್ನಬಹುದು.

ಆಧುನಿಕ ಮಾನವ ಶಾಸ್ತ್ರದ ಸ್ಥಾಪಕರಲ್ಲಿ ಪ್ರಮುಖ ಹೆಸರು ಪಡೆದ ಪ್ರೊ.ಬ್ರಾನಿಸ್ಲಾ ಮ್ಯಾಲಿನೋಸ್ಕಿ ಫ್ರೇಜರನ ಕೃತಿಗಳನ್ನು ಆಳವಾಗಿ ಅಧ್ಯಯನ ನಡೆಸಿ ಹೊಸ ಚಿಂತನೆಗಳಿಗೆ ದಾರಿಮಾಡಿಕೊಟ್ಟಿರುವುದನ್ನು ಇಲ್ಲಿ ಉಲ್ಲೇಖಿಸಲೇಬೇಕು. ತನ್ನ Magic[1], Science and Religion ಗ್ರಂಥದಲ್ಲಿ ಫ್ರೇಜರನ ಕೃತಿಗಳಲ್ಲಿ ಮುಖ್ಯವಾಗಿ 'ಗೋಲ್ಡನ್ ಬೋ'ದ ವಿವಿಧ ಮಗ್ಗುಲುಗಳನ್ನು ವಿಮರ್ಶಿಸಿ ಚರ್ಚಿಸಿರುವುದನ್ನು ಗಮನಿಸಬೇಕು. ಫ್ರೇಜರನ ವಾದ ಸಿದ್ಧಾಂತಗಳನ್ನು ಆದಿಮಾನವ ಮತ್ತು ಆತನ ಧರ್ಮ (Primitive[2] Man and His Religion), ಆದಿಮ ಮನಸ್ಸು ಮತ್ತು ಪುರಾಣ (Myth in Primitive Psychology) ಮೊದಲಾದ ಲೇಖನಗಳಲ್ಲಿ ಬಹು ಸೂಕ್ಷ್ಮವಾಗಿ ಚರ್ಚಿಸಲಾಗಿದೆ.

ಹೊಸತಲೆಮಾರಿನ ಖ್ಯಾತ ಜಾನಪದ ವಿದ್ವಾಂಸ ಪ್ರೊ.ತೀನಂ.ಶಂಕರನಾರಾಯಣ ಅವರು ತಮ್ಮ ಜಾನಪದ ಮೈಲಿಕಲ್ಲುಗಳು ಕೃತಿಯಲ್ಲಿ ಫ್ರೇಜರನ ಗೋಲ್ಡನ್ ಬೋ ಗ್ರಂಥದ ಮೂಲ ಸಂಪುಟಗಳನ್ನು ಶೋಧಿಸಿ ಸಮಗ್ರವಾದ ಅಧ್ಯಯನ ನಡೆಸಿ, ಅವುಗಳಿಗೆ ಸಂಬಂಧಿಸಿದ ಆಧಾರಗ್ರಂಥಗಳನ್ನು ವಿವರವಾಗಿ ಅಭ್ಯಾಸ ನಡೆಸಿದ್ದಾರೆ. ಬಹುಶಃ ಕನ್ನಡದಲ್ಲಿ ಫ್ರೇಜರನನ್ನೂ ಆತನ ಅಧ್ಯಯನ ಗ್ರಂಥಗಳನ್ನು ಮೊತ್ತಮೊದಲಾಗಿ ಪರಿಚಯ ಮಾಡಿಕೊಟ್ಟ ಹಿರಿಮೆ ಗರಿಮೆ ಈ ವಿದ್ವಾಂಸರಿಗೆ ಸಲ್ಲುತ್ತದೆ.

ಮಾನವ ಜ್ಞಾನದ ಪರಿಧಿಯನ್ನು ವಿಸ್ತರಿಸಿದ, ಅಜ್ಞಾತ ಜ್ಞಾನ ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲಿ ಜನತೆಯ ಕಣ್ಣು ತೆರೆಯಿಸಿದ ಪ್ರಪಂಚದ ಉತ್ಕೃಷ್ಟ ಕೃತಿಗಳಲ್ಲಿ ಖ್ಯಾತ ಮಾನವ ಶಾಸ್ತ್ರಜ್ಞರಾದ ಸರ್ ಜೇಮ್ಸ್ ಜಾರ್ಜ್ ಫ್ರೇಜರ್ ಅವರ 'ಗೋಲ್ಡನ್ ಬೋ' ಕೃತಿಸಂಪುಟವೂ ಸಹ ಒಂದು. ಗಾತ್ರದಲ್ಲಿ ಮಾತ್ರವಲ್ಲದೆ ಗುಣದಲ್ಲಿಯೂ ಬೆಲೆಬಾಳುವ ಕೃತಿ ಇದು. ವಿದ್ವತ್ ಪ್ರಪಂಚದಲ್ಲಿ ಮಾತ್ರವಲ್ಲದೆ ಜನಸಾಮಾನ್ಯ ಪ್ರಪಂಚದಲ್ಲೂ ಈ ಕೃತಿ ಪರಿಚಿತವಾಗಿದೆ. ಸಾಂಸ್ಕೃತಿಕ ಮಾನವಶಾಸ್ತ್ರದ ಪ್ರಮುಖ ಕೃತಿಯಾಗುವುದರ

ಜೊತೆಯಲ್ಲಿಯೇ ಜಾನಪದ ಕ್ಷೇತ್ರದಲ್ಲೂ ತುಂಬ ಮಹತ್ವವುಳ್ಳ ಕೃತಿ ಎನಿಸಿದೆ. (ತೀ.ನಂ.ಶಂಕರನಾರಾಯಣ 1970, 36-37).

## ಫ್ರೇಜರನ ಮೇಲೆ ಪ್ರಭಾವ ಬೀರಿದ ವಿದ್ವಾಂಸರು.

ಧರ್ಮ, ಮಾಂತ್ರಿಕತೆ, ಬಲಿ ಪದ್ಧತಿ, ರಾಜತ್ವದ ಉಗಮ, ವಿಧಿ-ನಿಷೇಧಗಳು, ಫಲಶಕ್ತಿ ವಿಧಿಗಳು ಮತ್ತು ಆ ಸಂಬಂಧವಾದ ದೇವತೆಗಳು, ಹಬ್ಬಗಳು, ವಿವಿಧ ದೇವತೆಗಳ ಮೂಲವಿಚಾರಗಳು ಮೊದಲಾದವುಗಳಿಂದ ಫ್ರೇಜರ ವಿಸ್ತಾರವಾದ, ವಿದ್ವತ್‌ಪೂರ್ಣ ಅಧ್ಯಯನ ನಡೆಸಿದ್ದಾನೆ. ಇಂತಹ ವಿಶಿಷ್ಟ ಅಧ್ಯಯನ ಸಂದರ್ಭದಲ್ಲಿ ಅನೇಕ ವಿದ್ವಾಂಸರ ನೆರವು ಪಡೆದಿದ್ದಾನೆ. ಅಂತಹವರಲ್ಲಿ W. Mannhardt ಪ್ರಮುಖನೆನಿಸಿಕೊಳ್ಳುತ್ತಾನೆ. ಒಂದು ಅರ್ಥದಲ್ಲಿ ಫ್ರೇಜರನಿಗೆ ವೈಜ್ಞಾನಿಕ ಅಧ್ಯ ಯನದ ಮಾರ್ಗದರ್ಶನ ದೊರೆತದ್ದೇ ಈತನಿಂದ ಎನ್ನಬಹುದು. ಗುಡ್ಡಗಾಡು ಜನರ ಮತ್ತು ರೈತರ ಧರ್ಮದ ಕುರಿತು ಮುಖ್ಯವಾಗಿ ಮರಗಳಿಗೆ, ಕೃಷಿ ಬೆಳೆಗಳಿಗೆ ಸಂಬಂಧಪಟ್ಟ ಆಚರಣೆಗಳ ಕಡೆಗೆ Mannhardt ವಿಶೇಷವಾಗಿ ಗಮನಹರಿಸಿದ್ದ. ಯುರೋಪ್ ಖಂಡದಲ್ಲಿ ಮೌಖಿಕವಾಗಿ ಮಾಹಿತಿ ಸಂಗ್ರಹ ಮಾಡಿದವನು ಈತ. ಜೊತೆಗೆ ಮುದ್ರಿತ ಪ್ರಶ್ನೆಗಳನ್ನು ವಿತರಿಸುವ ಮೂಲಕ ಜನಪದ ಸಾಹಿತ್ಯವನ್ನು ಶೋಧಿಸಿ ತೆಗೆದವನು. ಮುಂದೆ ಈ ಸಾಹಿತ್ಯವನ್ನು ಗ್ರಂಥಮಾಲೆಯಾಗಿ ಪ್ರಕಟಿಸಿ ಜನಮೆಚ್ಚುಗೆಗಳಿಸಿದವನು. ಆದರೆ ಆರೋಗ್ಯ ಕೆಟ್ಟುದರಿಂದ ಈ ಕೆಲಸವನ್ನು ಪೂರ್ಣಗೊಳಿಸಲು ಸಾಧ್ಯವಾಗದೆ ಹೋದವನು. ಆದರೆ ಆತ ಹಾಕಿಕೊಂಡಿದ್ದ ಯೋಜನೆ ಅತ್ಯಂತ ವ್ಯಾಪಕವಾಗಿತ್ತು. ಅಕಾಲಮರಣದಿಂದಾಗಿ Mannhrdtನ ಹೆಚ್ಚಿನ ಸಂಗ್ರಹಗಳು ಅಪ್ರಕಟವಾಗಿಯೇ ಉಳಿದುವು. ಆತನ ಹಸ್ತಪ್ರತಿಗಳು ಬರ್ಲಿನ್ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಸಂರಕ್ಷಿಸಲ್ಪಟ್ಟಿವೆ.

ಅಧ್ಯಯನಕ್ಕಾಗಿ, ಸಂಗ್ರಹಕ್ಕಾಗಿ Mannhrdt ಪಟ್ಟ ಶ್ರಮ, ಮಾಡಿದ ತ್ಯಾಗ ಇವುಗಳ ಬೆಲೆಯನ್ನು ಅರಿತುಕೊಂಡರೆ ಈ ಹಸ್ತಪ್ರತಿಗಳ ಪರಿಶೀಲನೆ ಪುನರವಲೋಕನ ನಡೆಯಬೇಕು. ಆತ ಬಳಸಿಕೊಳ್ಳದಿರುವ ಸಂಗ್ರಹ ಭಾಗಗಳನ್ನು ಪ್ರಕಟಿಸಿ ಜಗತ್ತಿಗೆ ನೀಡಬೇಕು ಎನ್ನುವ ಅಭಿಪ್ರಾಯವನ್ನು ಫ್ರೇಜರ ತನ್ನ 'ಗೋಲ್ಡನ್ ಬೋ'ದ ಮುನ್ನುಡಿಯಲ್ಲಿ

ವ್ಯಕ್ತಪಡಿಸಿದ್ದಾನೆ. ಆತನ ನಾಲ್ಕೈದು ಪ್ರಮುಖ ಗ್ರಂಥಗಳನ್ನು ಅಲ್ಲಿ ಉಲ್ಲೇಖಿಸಿದ್ದಾನೆ.

ಫ್ರೇಜರ ಸ್ಮರಿಸಿಕೊಂಡ ಇನ್ನೋರ್ವ ವಿದ್ವಾಂಸನೆಂದರೆ W. Robertson. ಫ್ರೇಜರ ತೆಗೆದುಕೊಂಡ ಕ್ರಾಂತಿಕಾರಕ ಯೋಜನೆಗಳಿಗೆಲ್ಲ Robertson Smith ಮೂಲಕಾರಣ. ವ್ಯವಸ್ಥಿತ ವೈಜ್ಞಾನಿಕ ಅಧ್ಯಯನಕ್ಕೂ ಈತ ಪ್ರೇರಣೆ ನೀಡಿದವನು. ಈತನ ಅಪಾರವಾದ ಪಾಂಡಿತ್ಯಕ್ಕೆ ಫ್ರೇಜರ ಮಾರು ಹೋದವನು. ಆತನ ವ್ಯಾಪಕವಾದ ಮತ್ತು ಆಶಾದಾಯಕ ಕಲ್ಪನೆಗಳು ಅದಕ್ಕಿಂತಲೂ ಮುಖ್ಯವಾಗಿ ಆತನ ತಾಳ್ಮೆಗೆಡದ ದಯಾದೃಷ್ಟಿ ಮೊದಲಾದವುಗಳಿಂದ ಫ್ರೇಜರ ಬಹಳಷ್ಟು ಪ್ರಭಾವಿತನಾದವನು. Robertson ವಾದಗಳು, ವಿಚಾರಗಳು, ಗ್ರಹಿಕೆಗಳು, ತೀರ್ಮಾನಗಳು ಕೆಲವೊಮ್ಮೆ ಚರ್ಚಾಸ್ಪದವೆನಿಸಿಕೊಂಡಿದ್ದರೂ ಫ್ರೇಜರನ ಮೇಲೆ ಆತ ಗಾಢ ಪ್ರಭಾವ ಬೀರಿದವನು. ಈ ಕಾರಣದಿಂದಲೇ ಇರಬೇಕು ಫ್ರೇಜರ ತನ್ನ ಕೃತಿಯನ್ನು 'To my Friend William Robertson Smith in Gratitude and Admiration' ಎಂದುಕೊಂಡು ಅವನಿಗೆ ಅರ್ಪಿಸಿರುತ್ತಾನೆ.

ಬಲಿ ಪದ್ಧತಿಯ ಕುರಿತು Robertson ತನ್ನ ವಿಚಾರಗಳನ್ನು 'Sacrifice' ಎನ್ನುವ ಪ್ರಬಂಧದಲ್ಲಿ ದಾಖಲಿಸಿದವನು. ಇದೇ ಬರೆಹ ಬೆಳವಣಿಗೆ ಪಡೆದು 'The Religion of the Semites' ಎನ್ನುವ ಕೃತಿಯಲ್ಲಿ ಬೆಳಕು ಕಂಡಿತು. ಧರ್ಮದ ಕುರಿತಾಗಿ ನಡೆದಿರುವ ಚಾರಿತ್ರಿಕ ಅಧ್ಯಯನದಲ್ಲಿ ಇದೊಂದು ಹೊಸಮಾರ್ಗ. ಬಲಿ ಅರ್ಪಿಸುವ ಹಿನ್ನೆಲೆಯ ಫ್ರೇಜರನ ಕಲ್ಪನೆಯೇ ಮತ್ತು ಅದರ ಕೇಂದ್ರ ಗ್ರಹಿಕೆಯೇ Roberston ನಿಂದ ಎರವಲು ಪಡೆದುದು. ತನ್ನ ಅಧ್ಯಯನದ ಅನೇಕ ಸಂಗತಿಗಳ ತಿದ್ದುಪಡಿ ಬದಲಾವಣೆಗಳ ಸಂದರ್ಭಗಳಲ್ಲಿ ಫ್ರೇಜರ Robertson ನ ಅಮೂಲ್ಯ ಸಲಹೆಗಳನ್ನು ಪಡೆದುಕೊಂಡವನು.

ಪ್ರಾಚೀನ ಸಮಾಜಗಳ ಚರಿತ್ರೆಯ ಬಗೆಗೆ ತನಗೆ ಆಸಕ್ತಿ ಹುಟ್ಟಲು E.B.Tylorನ ಅಧ್ಯಯನ ಗ್ರಂಥಗಳೇ ಕಾರಣ ಎನ್ನುತ್ತಾನೆ ಫ್ರೇಜರ. ಇವು ಫ್ರೇಜರನ ಮನೋರಂಗದಲ್ಲಿ ವಿಶ್ವದರ್ಶನದ ಅನುಭವ ಮಾಡಿ ಕೊಟ್ಟವುಗಳು. ಫ್ರೇಜರ ತನ್ನ ಅಧ್ಯ ಯನ ಮಾರ್ಗದಲ್ಲಿ

ಇಟ್ಟ ದೈತ್ಯ ಹೆಜ್ಜೆಯಿದು. ಇದಕ್ಕೆ ಮೂಲ ಕಾರಣ Robertson Smith ಎಂಬುದನ್ನು ಆತ ಉಲ್ಲೇಖಿಸಿದ್ದಾನೆ.

ಫ್ರೇಜರನಿಗೆ ಮೂಲ ಸಾಮಗ್ರಿಗಳ ಆಧಾರಗಳನ್ನು ಪೂರೈಸಿಕೊಟ್ಟು ಸಹಕರಿಸಿದವರಿದ್ದಾರೆ. ಅಂತಹವರಲ್ಲಿ 'G.A. Wilken of Leyden' ಪ್ರಮುಖ ನಾಗಿರುತ್ತಾನೆ. ಆತ ಫ್ರೇಜರನಿಗೆ 'Dutch East Indis' ಕುರಿತು ಮೂಲ ಸಾಮಗ್ರಿಗಳ ಆಧಾರಗಳನ್ನು ಒದಗಿಸಿಕೊಟ್ಟವನು. ಪಿಟ್ಸ್‌ಲಿಗೋದ Rev walter Gregorನ ಜೊತೆ ನಡೆಸಿದ ಅಪೂರ್ವವೆನಿಸುವ ಮಾತುಕತೆಗಳು, ಸಂವಾದಗಳು, ಸಸ್ಯಶಾಸ್ತ್ರ ಸಂಬಂಧ ಪ್ರಶ್ನೆಗಳಿಗೆ Francis Darwin ನೀಡಿರುವ ಉತ್ತರಗಳು 'ಗೋಲ್ಡನ್ ಬೋ'ದ ಒಟ್ಟು ಸ್ವರೂಪಕ್ಕೆ ಕಾರಣವಾಗಿವೆ. 'ಗೋಲ್ಡನ್ ಬೋ'ದ ರಕ್ಷಾಕವಚ ಪ್ರೊ. ಜೆ. ಹೆಚ್. ಮಿಡ್ಲ್‌ಟನ್‌ನ ಕಲ್ಪನೆಯದು. ಟರ್ನರ್ ಎಂಬಾತನ ಚಿತ್ರಗಳು 'ಗೋಲ್ಡನ್ ಬೋ'ವನ್ನು ಜನಪ್ರಿಯಗೊಳಿಸಿದ್ದುಂಟು. ಹಾಗಾಗಿಯೇ 'Who doesnot know Turners' Picture of the Golden Bough? ಎನ್ನುವ ಮಾತೂ ಜನಪ್ರಿಯವಾಗಿದೆ. ಕ್ಯಾಂಬ್ರಿಡ್ಜ್ ವಿಶ್ವವಿದ್ಯಾಲಯದ ಗ್ರಂಥಾಲಯದ A. Rogers ಪದಕೋಶ (Index)ವನ್ನು ಸಂಯೋಜಿಸಿ ಫ್ರೇಜರನಿಗೆ ಸಹಕರಿಸಿದ್ದಿದೆ.

## ಸಂಕ್ಷಿಪ್ತ ಸಂಪುಟದ ಚೌಕಟ್ಟು

'ಗೋಲ್ಡನ್ ಬೋ'ದ 12 ಸಂಪುಟಗಳು ಎನ್ನುವುದು ಆರಂಭದ ಎರಡು ಸಂಪುಟಗಳೇ ಬೆಳೆದು ವಿಸ್ತಾರಗೊಂಡು ಆದುವುಗಳು ಎಂದಾದರೆ ಈ ಎಲ್ಲ ಸಂಪುಟಗಳ ಒಂದು ಸಂಗ್ರಹ ಆವೃತ್ತಿಯು ಮತ್ತೆ ಪ್ರಕಟವಾಗಿದೆ. ಈ ಆವೃತ್ತಿಯು ವಿಶೇಷವಾಗಿ ವಿಚಾರವಾದಿಗಳಿಗಾಗಿ ಹೆಚ್ಚು ಸೇರ್ಪಡೆ ಮತ್ತು ಬದಲಾವಣೆಗಳಿಲ್ಲದೆ ಪ್ರಕಟವಾಯಿತು. ಆದರೆ 1922ರ ನವಂಬರದಲ್ಲಿ ಪ್ರಕಟವಾದ ಈ ಸಂಕ್ಷಿಪ್ತ ಸಂಪುಟ 1923ರ ಜನವರಿ, 1924ರ ಫೆಬ್ರವರಿ, 1925ರ ಏಪ್ರಿಲ್, 1929ರ ಜನವರಿ, 1932ರ ಜನವರಿ ಹೀಗೆ ಅನೇಕಾವೃತ್ತಿಗಳನ್ನು ಕಂಡಿದೆ. 'ದಿ ಗೋಲ್ಡನ್ ಬೋ ಎ ಸ್ಟಡಿ ಇನ್ ಮ್ಯಾಜಿಕ್ ಆಂಡ್ ರಿಲಿಜಿಯನ್' ಎನ್ನುವ ಹೆಸರಿನಲ್ಲಿ ಗ್ರೇಟ್ ಬ್ರಿಟನ್ ಪ್ರಕಟಿಸಿತು.

ಒಟ್ಟು 715 ಪುಟಗಳ ಡೆಮ್ಮಿ ಅಷ್ಟದಳ ಗಾತ್ರದ ಈ ಸಂಪುಟದಲ್ಲಿ 69 ಅಧ್ಯಾಯಗಳಿವೆ. ಮೂಲಕೃತಿಯ ಎರಡು ಸಂಪುಟಗಳೂ ಅದೇ ಗಾತ್ರದಲ್ಲಿದ್ದು ಒಟ್ಟು 425 ಪುಟಗಳನ್ನು ಹಾಗೂ ನಾಲ್ಕು ಪ್ರಧಾನವಾದ ಅಧ್ಯಾಯಗಳನ್ನು ಪಡೆದಿವೆ. ಅವು ಹೀಗಿವೆ.

೧. ದಿ ಕಿಂಗ್ ಆಫ್ ದಿ ಗಾಡ್

೨. ದಿ ಪೆರಿಲ್ಸ್ ಆಫ್ ದಿ ಸೋಲ್

೩. ಕಿಲ್ಲಿಂಗ್ ದಿ ಗಾಡ್

೪. ದಿ ಗೋಲ್ಡನ್ ಬೋ

ಈ ಅಧ್ಯಾಯಗಳು ಒಟ್ಟು 30 ವಿಭಾಗಗಳನ್ನು ಪಡೆದಿವೆ. ಫ್ರೇಜರ ತನ್ನ 'ಗೋಲ್ಡನ್ ಬೋ' ಗ್ರಂಥದಲ್ಲಿ ವಿಶೇಷ ಮಹತ್ವ ನೀಡಿ ಅಧ್ಯಯನ ನಡೆಸಿರುವ ಕೆಲವು ವಿಷಯಗಳು.

ಕಾಡಿನ ರಾಜ, ಡಯಾನ ಮತ್ತು ವರ್ಬಿಯಸ್ ದೇವತೆಗಳು, ಆರ್ಟಿಮಿಸ್ ಮತ್ತು ಹಿಪ್ಪೋಲಿಟಸ್, ಅರ್ಚಕ ರಾಜ, ಮಾಟ ಮತ್ತು ಧರ್ಮ, ಮಾಂತ್ರಿಕತೆ ಮತ್ತು ನಿಸರ್ಗದ ನಿಯಂತ್ರಣ, ಮಾಂತ್ರಿಕ ರಾಜ, ದೇವಮಾನವರ ಅವತಾರಗಳು, ಪ್ರಕೃತಿ ಮತ್ತು ರಾಜರುಗಳು, ವೃಕ್ಷಾರಾಧನೆ, ಆಧುನಿಕ ಯುರೋಪಿನಲ್ಲಿ ವೃಕ್ಷಾರಾಧನೆಯ ಅವಶೇಷಗಳು, ಸಸ್ಯ ಸಮೃದ್ಧಿಯ ಪರಿಕಲ್ಪನೆ ಮತ್ತು ಲೈಂಗಿಕತೆ, ಪವಿತ್ರ ಮದುವೆ, ದೇವರುಗಳ ಮದುವೆ, ಫಲವಂತಿಕೆಯ ದೇವತೆ ಡಯಾನಾ, ರೋಮಿನ ರಾಜರು, ಪ್ರಾಚೀನ ಲ್ಯಾಟಿಯಮ್ ಸಾಮ್ರಾಜ್ಯದ ಉತ್ತರಾಧಿಕಾರಿ, ಓಕ್ ವೃಕ್ಷದ ಆರಾಧನೆ, ರಾಜಪದವಿಯ ಹೊಣೆಗಾರಿಕೆ, ಆತ್ಮ ಮತ್ತು ಆಪತ್ತುಗಳು, ನಿಷಿದ್ಧಗಳು, ಪವಿತ್ರ ರಾಜನ ಹತ್ಯೆ, ತಾತ್ಕಾಲಿಕ ರಾಜರು, ರಾಜಪುತ್ರನ ಬಲಿ, ಆತ್ಮದ ಮರು ಹುಟ್ಟು, ವೃಕ್ಷದೇವತೆಗಳ ಹತ್ಯೆ, ಅಡೋನಿಸ್ ದೇವತೆಯ ಪುರಾಣ-ಆಚರಣೆ, ಅಟ್ಟಿಸ್ ದೇವತೆಯ ಪುರಾಣ-ಆಚರಣೆ, ಅಡೋನಿಸ್ ಕೃಷಿ ದೇವತೆಯಾಗಿ, ಅಟ್ಟಿಸ್ ದೇವತೆಯ ಮಾನವ ಪ್ರಾತಿನಿಧ್ಯ, ಪಾಶ್ಚಾತ್ಯ ಮತ್ತು ಪ್ರಾಚೀನ ಧರ್ಮ, ಓಸರಿಸ್ ಪುರಾಣ-ಆಚರಣೆ, ಐಸಿಸ್, ಓಸರಿಸ್ ಮತ್ತು ಸೂರ್ಯ, ಡಯೋನಿಯಸ್, ಡೆಮೆಟರ್ ಮತ್ತು ಪರ್ಸಫೋನ್ ದೇವತೆಗಳು, ಉತ್ತರ ಯುರೋಪಿನ

ಧಾನ್ಯ ದೇವತೆ ಮತ್ತು ಪೋಷಕ ದೇವತೆ, ವಿವಿಧ ದೇಶಗಳ ಧಾನ್ಯ ದೇವತೆಗಳು, ಧಾನ್ಯ ದೇವತೆಯಾಗಿ ಪ್ರಾಣಿಗಳು, ಪ್ರಾಚೀನ ಸಸ್ಯ ದೇವತೆಗಳಾಗಿ ಪ್ರಾಣಿಗಳು, ಪಾವಿತ್ರ ಪ್ರಾಣಿಗಳ ಬಲಿ, ಬೇಟೆಗಾರರು ಮತ್ತು ಕಾಡು ಮೃಗಗಳು, ಪ್ರಾಣಿ ಬಲಿಯ ವಿಧಗಳು ಮಾರಿಯ ಉಚ್ಚಾಟನೆ, ಊರಮಾರಿಯ ಉಚ್ಚಾಟನೆ, ಶಿಷ್ಟ ಪರಂಪರೆಯಲ್ಲಿ ಬಲಿಪಶುಗಳು ಮತ್ತು ಮಾನವ ಬಲಿಪಶುಗಳು ಸ್ವರ್ಗ ಭೂಮಿಗಳ ನಡುವೆ ಯುರೋಪಿನ ಕೆಂಡೋತ್ಸವಗಳು, ಮಾನವಯಜ್ಞ, ಬೋಳುತನ ಮತ್ತು ಬಂದನಿಕೆ, ಜನಪದ ಕಥೆಗಳಲ್ಲಿ ಆತ್ಮಗಳು.

ಫ್ರೇಜರನೇ ಹೇಳಿಕೊಂಡ ಹಾಗೆ ಆತ ಬರೆಯಲು ತೊಡಗಿದ ಸಂದರ್ಭದಲ್ಲಿ ಗೋಲ್ಡನ್ ಬೋ ಎನ್ನುವುದು ಹೀಗೆ ಭೂಮವಾಗಿ ಬೆಳೆಯುತ್ತದೆ ಎನ್ನುವುದನ್ನು ಕನಸಿನಲ್ಲಿಯೂ ಊಹಿಸಿರಲಿಲ್ಲ. ಏನಿದ್ದರೂ ಓದುವ, ಓದಿ ಗ್ರಹಿಸಿಕೊಳ್ಳುವ ದೃಷ್ಟಿಯಲ್ಲಿ ಈ ಸಂಪುಟಗಳು ತೊಡಕು ತಂದೊಡ್ಡುವುದು ಸಹಜವೇ. ಹಾಗಾಗಿಯೇ ಈ ಸಂಪುಟಗಳ ಒಂದು ಸಂಕ್ಷಿಪ್ತ ಕೃತಿ ಅಪೇಕ್ಷಣೀಯವಾಗಿತ್ತು. ಈ ಕೆಲಸವೂ ಮುಂದೆ ಸಾಧ್ಯವಾಗಿದೆ.

ಒಟ್ಟಿನಲ್ಲಿ ಹೇಳುವುದಿದ್ದರೆ ಮುಂದಿನ ವಿದ್ವಾಂಸರು ಜೊತೆಜೊತೆಯಲ್ಲೇ 'ಗೋಲ್ಡನ್ ಬೋ' ಸಂಪುಟಗಳ ಪರಿಷ್ಕಾರ, ಅವುಗಳ ಮರುವಿಮರ್ಶೆ, ಈ ಗ್ರಂಥ ತನ್ನ ಮಿತಿ-ವ್ಯಾಪ್ತಿಯಲ್ಲಿ ನೀಡಿದ ಒಳನೋಟಗಳು ಮುನ್ನೋಟಗಳು ಈ ನೆಲೆಯಲ್ಲಿ ಚಿಂತನೆ ನಡೆಸಿದ್ದುಂಟು.

## ಅಧ್ಯಯನಕ್ಕೆ ಸಿಕ್ಕಿದ ಹೊಸದಿಕ್ಕು

ಮನುಕುಲದ ಬದುಕಿನ ವಿಕಾಸದಲ್ಲಿ ಹೊಸ ಭೂಖಂಡಗಳ ಮತ್ತು ದ್ವೀಪಗಳ ಅನ್ವೇಷಣೆ ಮತ್ತು ಶೋಧನೆಗಳು ಮಹತ್ವದ ಕೊಡುಗೆಗಳನ್ನು ನೀಡಿವೆ. ಇಂತಹ ಅನ್ವೇಷಣೆ ಮತ್ತು ಶೋಧನೆಗಳಲ್ಲಿ ಯುರೋಪಿನ ಅನೇಕ ಉತ್ಸಾಹೀ ಸಾಹಸಿಗಳು ತಮ್ಮನ್ನು ತೊಡಗಿಸಿಕೊಂಡರು. ಏಷ್ಯಾ, ಆಫ್ರಿಕಾ, ಆಸ್ಟ್ರೇಲಿಯಾ, ಅಮೇರಿಕಾ ಹಲವು ಭೂಭಾಗಗಳು, ಶಾಂತಸಾಗರದ ಹಲವು ದ್ವೀಪಗಳು ಹೀಗೆ ಹೊಸ ಭೂಖಂಡಗಳ ಶೋಧನೆಗೆ ಇವರು ಕಾರಣರಾದರು. ಇಂತಹ ಅನ್ವೇಷಣೆ ಮತ್ತು ಶೋಧನೆಗಳು

ಮಾನವ ಪರಂಪರೆಯ ವ್ಯಾಪ್ತಿಗೆ ಅವಕಾಶ ಮಾಡಿಕೊಟ್ಟುವು. ಜೊತೆಯಲ್ಲೇ ಪಾರಂಪರಿಕ ಮಾನವಶಾಸ್ತ್ರದ ಅಧ್ಯಯನಕ್ಕೆ ಹೊಸ ದಿಕ್ಕನ್ನು ತೋರಿಸಿಕೊಟ್ಟುವು. ಆದರೆ ಈ ಅನ್ವೇಷಕರು ಮತ್ತು ಶೋಧಕರು ತಮ್ಮ ದೇಶದ ಪರಂಪರೆಗಿಂತ ಭಿನ್ನವಾದ ಮತ್ತು ವಿಲಕ್ಷಣವಾದ ಪರಂಪರೆಗಳನ್ನು ಗುರುತಿಸಿಕೊಂಡದ್ದು ಮುಂದಿನ ತಲೆಮಾರಿಗೆ ಹೊಸ ಒಲವುಗಳನ್ನು ಮೂಡಿಸಿಕೊಟ್ಟಿತು. ಅಂತಹ ಪ್ರದೇಶಗಳಿಗೆ ಕ್ರೈಸ್ತ ಮತಪ್ರಸಾರ ಮಾಡಲು ಹೊರಟ ಕ್ರೈಸ್ತ ಮಿಶನರಿಗಳು ಆಯಾ ಪ್ರದೇಶಗಳ ಜನರ ಧರ್ಮ ನಂಬಿಕೆ-ನಡವಳಿಕೆಗಳ ಬಗೆಗೆ ಕುತೂಹಲ ಕೆರಳಿಸಿ ಕೊಂಡದ್ದಂತೂ ನಿಜ. ಇನ್ನೊಂದೆಡೆ ತಾವು ಕಂಡುಕೊಂಡ ವಿಚಾರಗಳನ್ನು ಬರವಣಿಗೆಯಲ್ಲಿ ದಾಖಲಿಸುವ ಕೆಲಸವೂ ನಡೆಯಿತು. ಇದಕ್ಕೆ ಸಮಾನಾಂತರವಾಗಿಯೇ ಪ್ರವಾಸಿಗರನೇಕರ ಅನುಭವ ಮಾಹಿತಿ ಟಿಪ್ಪಣಿಗಳು ಮುಂದೆ ಪ್ರಕಟಗೊಳ್ಳುವಂತಾದುವು. ಇಂತಹ ಬರಹಗಳು ತಲೆಮಾರಿನ ವಿದ್ವಾಂಸರನ್ನೂ ಸೆಳೆದುವು. ಆದಿಮ ಪರಂಪರೆಯೆನ್ನುವುದು ನಾಗರಿಕರೆಂದುಕೊಂಡವರ ಸಂಸ್ಕೃತಿಗಿಂತ ಬಹಳಷ್ಟು ಭಿನ್ನ ಎನ್ನುವ ಅಂಶವೂ ಪ್ರಕಟವಾಗತೊಡಗಿತು. ಆದಿಮ ಜನರ ಇಂತಹ ಭಿನ್ನ ಪರಂಪರೆಗಳ ಅಧ್ಯಯನಗಳಲ್ಲಿ ವಿದ್ವಾಂಸರನೇಕರು ಆಸಕ್ತಿ ತಳೆದರು.

## ಟೈಲರನ ಸರ್ವಚೇತನವಾದ

ಅಲ್ಲಲ್ಲಿ ಅಷ್ಟಷ್ಟು ಇಲ್ಲಿಲ್ಲಿ ಇಷ್ಟಿಷ್ಟು ಎನ್ನುವ ಹಾಗೆ ಮಾಹಿತಿಗಳ ಸಂಗ್ರಹಕಾರ್ಯ ನಡೆದಿದ್ದರೂ 18ನೆಯ ಹಾಗೂ 19ನೆಯ ಶತಮಾನಗಳಲ್ಲಿನ ಈ ಸಂಗ್ರಹಗಳೆಲ್ಲ ಒಂದು ವ್ಯವಸ್ಥಿತ ರೀತಿಯಲ್ಲಿ ಕ್ರೋಢೀಕರಣಗೊಂಡಿರಲಿಲ್ಲ. ಆದರೆ ಇವೆಲ್ಲವನ್ನೂ ಉಳಿಸಿಕೊಂಡು ಬಳಸಿಕೊಂಡು ವಿಶೇಷ ರೀತಿಯಲ್ಲಿ ಅಧ್ಯಯನ ನಡೆಸಿದ ಕೀರ್ತಿ ಸಾಂಸ್ಕೃತಿಕ ಮಾನವಶಾಸ್ತ್ರಜ್ಞನಾದ ಜೆ.ಜಿ. ಫ್ರೇಜರ್ ವಿದ್ವಾಂಸನಿಗೆ ಅದಕ್ಕಿಂತಲೂ ಮೊದಲಾಗಿ ಇ.ಬಿ.ಟೈಲರನಿಗೆ ಸಲ್ಲುತ್ತದೆ. ಆದಿಮ ಪರಂಪರೆಯನ್ನು (Primitive Culture) ಎರಡು ಸಂಪುಟಗಳಲ್ಲಿ ಪ್ರಕಟಿಸಿದ ಇ.ಬಿ. ಟೈಲರ್ (1871) ಸಾಂಸ್ಕೃತಿಕ ಮಾನವಶಾಸ್ತ್ರದ ಪಿತಾಮಹನೆನಿಸಿಕೊಳ್ಳುತ್ತಾನೆ. ಆದಿಮ ಧರ್ಮ (Primitive Religion)ದ ಸಾರವನ್ನು ಟೈಲರ್ ಸರ್ವಚೇತನವಾದ (Animism) ಎಂದು ಕರೆದ. ಅವನ ವಾದದಂತೆ ಯಾವುದೇ ಪ್ರಾಪಂಚಿಕ ವ್ಯವಹಾರಕ್ಕೆ ಅವ್ಯಕ್ತಚೇತನ ಮೂಲ ಕಾರಣವಾಗಿರುತ್ತದೆ. ಆದಿಮ ಜನರು

ತಪ್ಪು ತಿಳುವಳಿಕೆಯಿಂದ ಆದರೆ ಬಲವಾಗಿ ನಂಬಿಕೊಂಡ ಸ್ಥಿತಿಯಲ್ಲಿ ತಮ್ಮದೇ ಆದ ವ್ಯಾಖ್ಯಾನಗಳಿಗೆ, ಭ್ರಮೆ-ಭ್ರಾಂತಿಗಳಿಗೆ, ಬುದ್ಧಿಗ್ರಹಣ ಸ್ಥಿತಿಗೆ ಅಡ
ಸ್ವಭಾವಗಳಿಗೆ ಒಳಗಾಗಿದ್ದರು. ಈ ಕಾರಣದಿಂದಲೇ ಶರೀರಕ್ಕೂ ಆತ್ಮಕ್ಕೂ ಅಂತರವನ್ನು ಕಂಡುಕೊಳ್ಳಲಾಯಿತು. ಈ ಆತ್ಮ ಎನ್ನುವುದು ಸಾವಿನ ಬಳಿಕವೂ ಅಸ್ತಿತ್ವ ಪಡೆದಿರುತ್ತದೆ, ಕನಸುಗಳಲ್ಲಿ ಕಾಣಿಸಿಕೊಳ್ಳುತ್ತದೆ. ನೆನಪಿನಿಂದ ಇರುವವರ ಜೊತೆ ಸುಳಿದಾಡುತ್ತಿರುತ್ತದೆ, ಆಗಾಗ ಗೋಚರಿಸುತ್ತದೆ, ಮತ್ತು ಮಾನವ ಉದ್ದೇಶಗಳ ಗುರಿಗಳ ಮೇಲೆ ಪ್ರಭಾವ ಬೀರುತ್ತದೆ ಎನ್ನುವುದನ್ನು ನಂಬಿಕೊಂಡಿತ್ತು. ಇದು ದೆವ್ವಗಳ ಅಸ್ತಿತ್ವವನ್ನು ಒಪ್ಪಿಕೊಳ್ಳುವುದಕ್ಕೆ ಕಾರಣವಾಯಿತು. ಟೈಲರನ ಅವಲೋಕನಗಳು ತೀರ ಸಂಕುಚಿತ ಆಧಾರಗಳದ್ದು ಎಂಬುದಾಗಿ ವಿದ್ವಾಂಸರ ಟೀಕೆಗೆ ಗುರಿಯಾಯಿತು. ಮಾನವನ ಅನೇಕ ಪ್ರವೃತ್ತಿಗಳನ್ನು ಸರ್ವಚೇತನ ಎನ್ನುವ ವಾದದಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಯಾಕೆಂದರೆ ಆಮೇಲಿನ ಸಂಶೋಧನೆಗಳು ತಿಳಿಸಿದಂತೆ ಬುಡಕಟ್ಟು ಜನಾಂಗಗಳು ಮೀನುಗಾರಿಕೆ, ತೋಟಗಾರಿಕೆಯಂತಹ ಸಹಜ ಪ್ರವೃತ್ತಿಗಳಲ್ಲಿ ಆಸಕ್ತವಾಗಿರುತ್ತವೆಯೇ ಹೊರತು ಕನಸು ಭ್ರಮೆಗಳಲ್ಲಿ ಅಲ್ಲ (Malinowski, 1948, 18).

## ಟೈಲರನ ವಾದ ಕಾಣಿಸಿದ ಶೋಧ

ಟೈಲರನ ಈ ವಾದಗಳಿಗೆ ತಮ್ಮ ವಿದ್ವತ್‌ಪೂರ್ಣ ಹಾಗೂ ಸಮರ್ಥ ಲೇಖನಗಳ ಮೂಲಕ ಸಾಂಸ್ಕೃತಿಕ ಮಾನವ ಶಾಸ್ತ್ರಜ್ಞರನೇಕರು ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಅಂತಹವರಲ್ಲಿ ಜೇಮ್ಸ್ ಫ್ರೇಜರ ಮೊದಲನೆಯವನಾಗಿದ್ದು ಸಾಕಷ್ಟು ವ್ಯಾಪಕವಾದ ಚೌಕಟ್ಟುಗಳನ್ನು ಒದಗಿಸಿಕೊಟ್ಟಿರುತ್ತಾನೆ. ಫ್ರೇಜರ್ ಆದಿಮ ಜನರ ಧರ್ಮದ ವಿಚಾರದಲ್ಲಿ ಮೂರು ಮುಖ್ಯ ಸಂಗತಿಗಳನ್ನು ಕಂಡುಕೊಂಡ. ಅವುಗಳನ್ನು ಹೀಗೆ ಸಂಗ್ರಹಿಸಿಕೊಡಬಹುದು.

೧. ಮಾಟ ಅಥವಾ ಮಾಂತ್ರಿಕತೆ (Magic) ಮತ್ತು ಅದರ ಸಂಬಂಧಗಳು ಹಾಗೂ ವಿಜ್ಞಾನ.

೨. ಕುಲಲಾಂಛನ (Totimism) ಮತ್ತು ಪ್ರಾಚೀನ ನಂಬಿಕೆ ವಿಶ್ವಾಸಗಳ ಸಾಮಾಜಿಕ ಅಂಶಗಳು.
೩. ಫಲವಂತಿಕೆ (Fertility)ಯ ಮತ್ತು ಕೃಷಿ ಸಂಬಂಧ ಸಂಸ್ಕೃತಿಗಳು.

ಫ್ರೇಜರ ತನ್ನ ಮೇರುಕೃತಿಯಾದ ಗೋಲ್ಡನ್ ಬೋದಲ್ಲಿ ಆದಿಮ ಜನರ ಮಾಟ ವಿದ್ಯೆಗೆ ಸಂಬಂಧಿಸಿ ಸಮಗ್ರ ಚಿಂತನೆ ನಡೆಸಿದ್ದಾನೆ. ಫ್ರೇಜರನ ಪ್ರಕಾರ ಸರ್ವಚೇತನವಾದ ಅಥವಾ ಆಕ್ರಮಣಶೀಲ ನಂಬಿಕೆ (Dominating belief) ಇವು ಆದಿಮ ಸಂಸ್ಕೃತಿಯಲ್ಲಿನ ಕೇವಲ ನಂಬಿಕೆಯಾಗಿರದೆ ಪ್ರಾಚೀನ ಮಾನವ ಇವೆಲ್ಲಕ್ಕಿಂತಲೂ ನಿಸರ್ಗದ ಸಂಗತಿಗಳನ್ನು ತನ್ನ ಪ್ರಾಯೋಗಿಕ ಉದ್ದೇಶಗಳಿಗಾಗಿ ನಿಯಂತ್ರಿಸಿದ್ದ ಮತ್ತು ನೇರವಾಗಿ ವಿಧಿ ಹಾಗೂ ಮಂತ್ರ ಗಳ ಮೂಲಕ ಪ್ರಕೃತಿ, ಪ್ರಾಣಿ, ಸಸ್ಯ ಮೊದಲಾದುವು ಗಳನ್ನು ತನ್ನ ಅಧೀನಪಡಿಸಿಕೊಂಡಿದ್ದ. ಕಾಲಕ್ರಮೇಣ ಆತ ತನಗಿಂತ ಶ್ರೇಷ್ಠ ಎಂದುಕೊಂಡ ದೆವ್ವ ಪ್ರೇತಗಳನ್ನೂ, ಹಿರಿಯರ ಆತ್ಮಗಳನ್ನೂ, ದೇವರುಗಳನ್ನೂ ಒಪ್ಪಿಕೊಂಡ. ಇದಕ್ಕೆ ಆತನಿಗೆ ನಿಸರ್ಗದ ಬಗೆಗಿನ ಭಯವೂ ಕಾರಣವಾಗಿತ್ತು.

## ಮಾಟ - ಧರ್ಮ - ವಿಜ್ಞಾನ

ಒಂದೆಡೆ ನೇರ ಹತೋಟಿ, ಮತ್ತೊಂದೆಡೆ ಮಹಾಶಕ್ತಿಗಳ ಮೇಲಿನ ಭಯ ಮತ್ತು ಅವುಗಳನ್ನು ಒಲಿಸಿಕೊಳ್ಳಲು ಮಾಂತ್ರಿಕತೆ ಆತನಿಗೆ ಮುಖ್ಯವೆನಿಸಿತು. ಫ್ರೇಜರ ಮಾಂತ್ರಿಕತೆ ಮತ್ತು ಧರ್ಮ - ಇವುಗಳ ನಡುವಣ ವ್ಯತ್ಯಾಸಗಳನ್ನು ಸ್ಪಷ್ಟಪಡಿಸಿದ್ದಾನೆ. ನಿಸರ್ಗದ ಮೇಲೆ ನೇರವಾಗಿ ತನ್ನ ವರ್ಚಸ್ಸು ಬೀರುವ ಮನುಷ್ಯನ ಪ್ರವೃತ್ತಿ ಮತ್ತು ಧೈರ್ಯ ಇವುಗಳ ಮೇಲೆ ಮಾಂತ್ರಿಕತೆ ಕೆಲಸ ಮಾಡುತ್ತದೆ. ಜೊತೆಗೆ ಅವುಗಳನ್ನು ಹತೋಟಿಯಲ್ಲಿಡುವ ನಿಯಮಗಳನ್ನು ಬಲ್ಲವನಾಗಿದ್ದರೆ ಅವು ವಿಜ್ಞಾನಕ್ಕೆ ಆವರಣ. ಕೆಲವು ವಿಷಯಗಳ ಮೇಲೆ ಮಾನವನಿಗಿರುವ ಮಹತ್ವವನ್ನು ಒಪ್ಪಿಕೊಂಡ ಮಾಂತ್ರಿಕತೆಯಿಂದಲೂ ಎತ್ತರಕ್ಕೆ ಏರಿದ ವಿಜ್ಞಾನದ ಜೊತೆಗೆ ಸ್ವತಂತ್ರವಾಗಿ ಉಳಿದುಕೊಂಡ ಮಾಂತ್ರಿಕತೆ ಮುಂದೆ ಈ ವಿಜ್ಞಾನಕ್ಕೆ ಸೋತು ಅದರ ಅಧೀನವಾಯಿತು.

ಪೂರ್ವಸರ್ವಚೇತನವಾದ, ಧರ್ಮ ಮತ್ತು ವಿಜ್ಞಾನ ಇವುಗಳಿಗಿಂತ ಬಹಳಷ್ಟು ಭಿನ್ನವಾಗಿದ್ದ ಮಾಟವಿದ್ಯೆಯ ಮುಖ್ಯ ವಿಚಾರಗಳನ್ನು ಈ ರೀತಿ ಸಂಗ್ರಹಿಸಬಹುದು.

ಆದಿಮ ಜನರ ಎಲ್ಲ ನಂಬಿಕೆಗಳ ಮೇಲೂ ಮಾಂತ್ರಿಕತೆ ತನ್ನ ವರ್ಚಸ್ಸು ಬೀರಿದೆ. ಫ್ರೇಜರ ಹೇಳುವ ಧರ್ಮದ, ಕುಲಲಾಂಛನ ಮತ್ತು ಸಾಮಾಜಿಕ ಅಂಶಗಳ ಬಗೆಗೆ ಇತರ ಹಲವು ವಿದ್ವಾಂಸರು ಬೆಳಕು ಚೆಲ್ಲಿದ್ದಾರೆ. ಫ್ರೇಜರನ ಕುಲಲಾಂಛನ ಪದ್ಧತಿ ಒಂದೇ ರಕ್ತ ಸಂಬಂಧದ ಜನರ ಗುಂಪು ಮತ್ತು ಸಹಜ ಅಥವಾ ಕೃತಕ ವಸ್ತುಗಳ ಮಾದರಿ (ಜಾತಿ)ಗಳ ನಡುವೆ ಕಾಣಿಸಿಕೊಳ್ಳುವ ಆತ್ಮೀಯ ಸಂಬಂಧವಾಗಿದೆ. ಕುಲಲಾಂಛನ ಪದ್ಧತಿಯಲ್ಲಿ ಎರಡು ಕವಲುಗಳಿವೆ. ಅದು ಸಾಮಾಜಿಕ ಗುಂಪಿನ ಒಂದು ಮಾದರಿ ಮತ್ತು ನಂಬಿಕೆ ಹಾಗೂ ಆಚರಣೆಗಳ ಒಂದು ಧಾರ್ಮಿಕ ವ್ಯವಸ್ಥೆ. ಧಾರ್ಮಿಕವಾಗಿ ಅದು ಆದಿಮ ಜನರು ತಮ್ಮ ಪರಿಸರಕ್ಕೆ ಸಂಬಂಧಿಸಿದ ಸಂಬಂಧವನ್ನು ಸ್ಥಾಪಿಸಲು ಪಡೆದಿರುವ ಆಸಕ್ತಿಯನ್ನು ವಿವರಿಸುತ್ತದೆ. ಎಲಕ್ಕಿಂತಲೂ ಪ್ರಾಣಿ ಅಥವಾ ಸಸ್ಯವರ್ಗಗಳ ಆದರೆ ಮಾನವ ನಿರ್ಮಿತ ವಿವಿಧ ಜಡವಸ್ತುಗಳ ವಿಶೇಷ ಬಳಕೆಯ ಮೂಲಕ ನಿಯಂತ್ರಿಸುತ್ತದೆ. ಕುಲಲಾಂಛನ ಸಂಪ್ರದಾಯ ಮಾಂತ್ರಿಕತೆ ಮತ್ತು ಅನೇಕ ಪದ್ಧತಿಗಳು ಪ್ರಾಚೀನ ವಿಧಿ ಮತ್ತು ಆಚರಣೆಗಳ ಪ್ರಕ್ರಿಯೆ ಹಾಗೂ ಮಾನಸಿಕ ಅಪೇಕ್ಷೆಗಳ ನಿಕಟ ಸಂಬಂಧ ಪಡೆದಿದೆ. ಅಲ್ಲಿ ಸಾಮಾಜಿಕ ವ್ಯವಸ್ಥೆ ಮತ್ತು ಧಾರ್ಮಿಕ ನಂಬಿಕೆಗಳ ನಡುವೆ ಒಂದು ನಿಕಟ ಸಂಬಂಧ ಬೆಳೆದಿರುತ್ತದೆ.

ಧಾರ್ಮಿಕ (ಮತೀಯ) ವಿಜ್ಞಾನದ ಮುಖ್ಯ ಆಶಯದಂತೆ ಫಲವಂತಿಕೆ ಮತ್ತು ಕೃಷಿಕಾರ್ಯಗಳ ಆಚರಣೆಗಳು ಕಾಡಿನ ವಿಶಿಷ್ಟ ಶಕ್ತಿಗಳಿಗಾಗಿ ಮಾಡಲಾಗುವ ಮತ್ತು ಅರ್ಪಿಸಲಾಗುವ ಹರಕೆಯ ಆಚರಣೆಗಳ ತಂತ್ರಗಳು ಮುಖ್ಯವಾಗುತ್ತವೆ. ಆಕಾಶ ಮತ್ತು ಭೂಮಿ ಹಾಗೂ ಸೂರ್ಯ, ಮಳೆ ಮತ್ತು ಬೆಳೆಗೆ ಸಂಬಂಧಿಸಿದ ಫಲವಂತಿಕೆಯ ಪ್ರಕ್ರಿಯೆಯನ್ನು ನಿಯಂತ್ರಿಸುವುದು ಹಾಗೂ ಹತೋಟಿಯಲ್ಲಿಟ್ಟುಕೊಳ್ಳುವುದು ಮಾಂತ್ರಿಕತೆಯ ಮುಖ್ಯ ಉದ್ದೇಶ. ಒಟ್ಟಿನಲ್ಲಿ ಮಾಂತ್ರಿಕತೆ ಕೃಷಿ ಬೆಳೆಯ ಅಭಿವೃದ್ಧಿಗೆ ಅತ್ಯಂತ ಅಗತ್ಯ ಎಂದು ನಂಬಲಾಗಿತ್ತು.

## ಫ್ರೇಜರನನ್ನು ಕಾಡಿದ ಪ್ರಶ್ನೆ

ಆದಿಮ ಜನರ ನಂಬಿಕೆ ಮತ್ತು ಧರ್ಮದ ಕುರಿತು ಜೆ.ಜಿ.ಫ್ರೇಜರ ಮಾನವ ಶಾಸ್ತ್ರದ ವಿದ್ವಾಂಸನಾಗಿ ಕೆಲವು ವಿಚಾರಗಳನ್ನು ಸಂಗ್ರಹಿಸತೊಡಗಿದ. ಈ ವಿಚಾರಗಳೆಲ್ಲ ಅನೇಕ ಜಿಗುಟು ಸಮಸ್ಯೆಗಳ ಸುತ್ತ ಸಿಕ್ಕುಹಾಕಿಕೊಂಡಿದ್ದುವು. ಅಂತಹ ಹಲವು ಸಮಸ್ಯೆಗಳಲ್ಲಿ ಫ್ರೇಜರನನ್ನು ಆಕರ್ಷಿಸಿದ ಸಮಸ್ಯೆಯೆಂದರೆ ಅರಿಸಿಯನ್ ಅರ್ಚಕನ ವೃತ್ತಿಯ ಹಿನ್ನೆಲೆಯಲ್ಲಿದ್ದ ಒಂದು ಅವರ್ಣನೀಯ ಕಟ್ಟಳೆ. ಈ ಕಟ್ಟಳೆಯ ನಿಯಮದ ಎಳೆ ಹಿಡಿದು ಅದರ ಬೆನ್ನು ಹತ್ತಿ ಫ್ರೇಜರ ನಡೆಸಿದ ಅಧ್ಯಯನಫಲವೇ 'ಗೋಲ್ಡನ್ ಬೋ'. ಪ್ರಾಚೀನ ಇಟಲಿಯನ್ ಅರ್ಚಕತನದ ಮೂಲ ಮತ್ತು ಅರ್ಥಗಳ ಹುಡುಕಾಟಕ್ಕಾಗಿ ಹಾಗೂ ಆಧುನಿಕ ಯುರೋಪಿನ ಒಂದು ಜನಪ್ರಿಯ ಆಚರಣೆ ಮತ್ತು ನಂಬಿಕೆ ಇವನ್ನು ಶೋಧಿಸಲು ಆತ ಬಹುಕಾಲ ಕಳೆಯಬೇಕಾಯಿತು.

'ಗೋಲ್ಡನ್ ಬೋ' ಎಂದರೆ ಚಿನ್ನದಕೊಂಬೆ ಎಂದರ್ಥ. ಇಟಲಿ ದೇಶದಲ್ಲಿನ ಒಂದು ಹಳ್ಳಿಗೆ ನೆಮಿ ಎಂದು ಹೆಸರು. ಅಲ್ಲೊಂದು ಸರೋವರವಿದೆ. ಈ ಸರೋವರದ ಉತ್ತರ ದಂಡೆಯಲ್ಲಿ ಆಲ್ಬನ್ ಪರ್ವತವಿದೆ. ಅದರ ತಪ್ಪಲಿನಲ್ಲಿ ಒಂದು ತೋಪು. ಇದು 'ಡಯನಾ' ಎನ್ನುವ ದೇವತೆಗೆ ಸೇರಿದ್ದು. ಅಲ್ಲಿ ಡಯಾನಾ ದೇವತೆಯ ಅರಾಧನಾ ಕೇಂದ್ರವಿತ್ತು. ಅದೊಂದು ಪ್ರಕೃತಿಯ ಸುಂದರ ತಾಣವೂ ಆಗಿತ್ತು. ಆದರೆ ಡಯಾನಾಳ ಅರ್ಚಕನಾಗುವವನು ಒಂದು ವಿಚಿತ್ರ ಪದ್ಧತಿಯನ್ನು ಅನುಸರಿಸಬೇಕಾಗಿತ್ತು. ಮುಂದೆ ಅರ್ಚಕ ಅಥವಾ ಪೂಜಾರಿಯ ಸ್ಥಾನ ಪಡೆಯಬೇಕಾದವನು ಆದಾಗಲೇ ಅಧಿಕಾರದಲ್ಲಿದ್ದ ಪೂಜಾರಿಯನ್ನು ಕೊಲ್ಲುವುದರ ಮೂಲಕವೇ ಆ ಸ್ಥಾನಕ್ಕೆ ಬರಬೇಕಾಗಿತ್ತು. ಅವನನ್ನು ಮತ್ತೊಮ್ಮೆ ಯಾರಾದರೂ ಕೊಲ್ಲುವವರೆಗೂ ಡಯಾನಾಳ ಗುಡಿಯ ಪೂಜಾರಿಯಾಗಿರುವ ಅವಕಾಶ ಅವನಿಗಿರುತ್ತಿತ್ತು. ಇದೊಂದು ವಿಲಕ್ಷಣ ಪದ್ಧತಿ. ಹಾಗಾಗಿ ನೆಮಿ ಪ್ರದೇಶವೇ ಅತ್ಯಂತ ಭಯಾನಕವಾಗಿರುತ್ತಿತ್ತು. ಅರ್ಚಕನ ಪಾಲಿಗಂತೂ ಕನಸಿನಲ್ಲೂ ಅಪಾಯದ ಗಂಟೆ ಕೇಳಿಸುತ್ತಲೇ ಇರುತ್ತಿತ್ತು. ಹೊಸ ಅರ್ಚಕನೊಬ್ಬ ಬರುತ್ತಾನೆ ಎಂದರೆ ಹಳೆಯ ಅರ್ಚಕನ ಕೊನೆಯಾಗಬೇಕಾಗಿತ್ತು. ಒಬ್ಬ ಅರ್ಚಕನ ಆಗಮನವು ಒಂದು ಸಾವಿನ ಬಳಿಕವೇ ಸಾಧ್ಯವಾಗುತ್ತಿತ್ತು. ಅರ್ಚಕ, ಆತನ ಸಾವು, ಮತ್ತೊಬ್ಬ ಅರ್ಚಕನ ಆಗಮನ

ಈ ಆವರ್ತನ ಪ್ರಕ್ರಿಯೆ ಎನ್ನುವುದು ಇನ್ನೊಂದು ಸಾಂಕೇತಿಕ ಆಚರಣೆಯ ನೇರ ಸಂಬಂಧದಲ್ಲಿ ನಡೆದು ಬರುತ್ತಿತ್ತು. ಪೂಜಾರಿ ಪಟ್ಟದಲಿದ್ದವನನ್ನು ಮುಂದೆ ಪೂಜಾರಿಯಾಗಬಯಸುವಾತ ಕೊಲ್ಲುವ ಮೊದಲು ವಿಧಿಯೊಂದನ್ನು ಆಚರಿಸಬೇಕಾಗಿತ್ತು. ಅದೇ ತೋಪಿನಲ್ಲಿನ ಮರವೊಂದರಲ್ಲಿ ಮೂಡಿ ಬೆಳೆದು ಬರುತ್ತಿದ್ದ ಕೊಂಬೆಯನ್ನು ಆತ ನಿರೀಕ್ಷಿಸಬೇಕಾಗಿದ್ದುದು ಬಂದನಿಕೆಯಂತಹ ಈ ಕೊಂಬೆಯನ್ನು ಕತ್ತರಿಸಿ ತೆಗೆಯುವುದೇ ಆತ ಪೂರೈಸಬೇಕಾಗಿದ್ದ ವಿಧಿ ಆಚರಣೆ. ಈ ಕೊಂಬೆ ವರ್ಜಿಲನ ಈನಿಯಡ್ ಮಹಾಕಾವ್ಯದಲ್ಲಿ ಬರುವ ಗೋಲ್ಡನ್ ಬೋ ಅಥವಾ ಚಿನ್ನದ ಕೊಂಬೆಯನ್ನು ನೆನಪಿಗೆ ತರುವಂತಿತ್ತು. ಫ್ರೇಜರನಿಗೆ ಈ ವಿಚಿತ್ರ ಸಂಪ್ರದಾಯದ ಕುರಿತು ಕುತೂಹಲ ಕೆರಳಿತು. ಅದರ ರಹಸ್ಯವನ್ನು ಶೋಧಿಸುವ ಅಪೇಕ್ಷೆಯಾಯಿತು. ಈ ಕುತೂಹಲ, ಹಂಬಲಗಳೇ ಚಿನ್ನದಕೊಂಬೆಯನ್ನು ಬೆಳೆಸಿದವು. ಚಿನ್ನದ ಕೊಂಬೆಯ ಮೂಲವನ್ನು ಹುಡುಕಾಡ ಹೊರಟವನಿಗೆ ಪ್ರಾಚೀನ ನಾಗರಿಕತೆಗಳ ಧರ್ಮ, ಮಾಂತ್ರಿಕತೆಗಳ ಪರಂಪರೆಗಳ ದರ್ಶನವಾಯಿತು. ಈ ದರ್ಶನವೇ ಮೇರು ಕೃತಿಯನ್ನು ರೂಪಿಸಿತು. ಧರ್ಮ ಮತ್ತು ಜನಪದದ ಮೂಲ ನೆಲೆಗಳನ್ನು ಶೋಧಿಸಲು ಪ್ರಯತ್ನ ನಡೆಸಿರುವುದರಿಂದಲೇ ಈ ಕೃತಿ ನಮಗೆ ಮಹತ್ವದ್ದೆನಿಸುವುದು. ಆ ಮೂಲಕವೇ ಅದು ಆಧುನಿಕ ಸಂಸ್ಕೃತಿಯ ಸ್ವರೂಪವನ್ನೂ ರೂಪಿಸಿದೆ. ಆದಿಮ ಜನರ ಸಂಪ್ರದಾಯಗಳ ಮತ್ತು ಒಟ್ಟು ಜಾನಪದ ಲೋಕದ ಸಮಗ್ರ ಕಲ್ಪನೆ ಫ್ರೇಜರನ ಪ್ರಧಾನ ವಿಷಯವಾಗಿತ್ತು.

## ವಿಸ್ಮಯಕಾರಿ ಅವಲೋಕನ

ನಾಗರಿಕ ಜಗತ್ತಿನ ಕಡೆಗೆ ಮುಖಮಾಡುತ್ತಿದ್ದ ಮಾನವ ಜನಾಂಗದ ಮೊದಲ ಹಂತದ ಆಲೋಚನೆಗಳ, ಸ್ವಭಾವ ಮತ್ತು ವರ್ತನೆಗಳ ಬೆಳವಣಿಗೆಯ ಕುರಿತ ಒಂದು ವಿಸ್ಮಯಕಾರಿ ಅವಲೋಕನವಾಗಿಯೂ ಚಿನ್ನದ ಕೊಂಬೆ ಆಧುನಿಕ ಜಗತ್ತಿಗೆ ಮುಖ್ಯವಾಗುತ್ತದೆ. ಈ ಕಾರಣಕ್ಕಾಗಿಯೇ ಟೆನಿಸನ್, ಲಾರೆನ್ಸ್, ಈಲಿಯೆಟ್ ಇಂತಹವರ ಆಧುನಿಕ ಒಲವುಳ್ಳ ಮತ್ತು ಕ್ರಾಂತಿಕಾರಕ ದೃಷ್ಟಿಯ ಚಿಂತಕರನ್ನು ಈ ಕೃತಿ ಆಕರ್ಷಿಸಿದೆ; ಮಾತ್ರವಲ್ಲ ಅವರ ಮೇಲೆ ಅಷ್ಟೇ ಗಾಢವಾದ ಪ್ರಭಾವ ಬೀರಿದೆ. ಸಿಗ್ಮಂಡ್ ಫ್ರಾಯ್ಡನಂತಹ, ಡಾರ್ವಿನ್ನಂತಹ ವಿಜ್ಞಾನಿಗಳನ್ನೂ ಸೆಳೆದಿದೆ. ಕಾರಣ ಅದು ಮಾನವ

ಶಾಸ್ತ್ರದ ತನ್ನ ಕ್ಷೇತ್ರದ ಮಿತಿಯಿಂದ ಬಹುದೂರ ವ್ಯಾಪಿಸಿತ್ತು. ಹಾಗೆಂದು ಈ ವಿಜ್ಞಾನಿಗಳ ಹಾಗೆ ಆತ ನಮ್ಮ ನಾಲಗೆಗಳ ತುದಿಯಲ್ಲಿಲ್ಲದ ವ್ಯಕ್ತಿಯಾಗಿ ಉಳಿದುಬಿಟ್ಟಿದ್ದಾನೆ. ಪ್ರಾಚೀನ ಇಟಲಿಯ ಪವಿತ್ರವನದಲ್ಲಿ ರಾಜನೋರ್ವನ ಸಾವಿನ ಹೋರಾಟಕ್ಕೆ ಸಂಬಂಧಿಸಿದ ಚಿನ್ನದ ಕೊಂಬೆಯನ್ನು ಒಯ್ಯುವ ಗುಲಾಮನಿಂದ ನಡೆಸಲಾಗುತ್ತಿದ್ದ ಕೊಲೆಯ ಆಚರಣೆಯೊಂದನ್ನು ವಿವರಿಸಲು ತೊಡಗಿದ ಫ್ರೇಜರ ಅಷ್ಟರಲ್ಲೇ ತೃಪ್ತನಾಗದೆ ಈ ಹಿನ್ನೆಲೆಯ ಒಳಹೊಕ್ಕು ಅದರ ಮಿತಿಯನ್ನು ಬಹಳಷ್ಟು ವಿಸ್ತಾರಗೊಳಿಸಿದ.

## ಸ್ವೀಕರಿಸಿದ ಸವಾಲು

ಮಾಂತ್ರಿಕತೆ, ಪವಾಡ, ನಂಬಿಕೆಗಳು ಮತ್ತು ಲೈಂಗಿಕಾಚರಣೆಗಳು, ಆತ್ಮದ ಮತ್ತು ಧರ್ಮದ ಸ್ವಭಾವ, ಪ್ರಾಣಿಬಲಿ, ನರಬಲಿ, ಮೊದಲಾದವುಗಳು ಅರ್ಥ ಸಂಬಂಧಗಳನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಯಶಸ್ಸನ್ನು ಪಡೆದವನು ಫ್ರೇಜರ. ವರ್ಜಿಲನ ವೀರ ಅನಾಸ್ ಕೆಳಲೋಕಕ್ಕೆ ಗಮನಿಸುವಂತಹ ಇನ್ನೊಂದು ಚಿನ್ನದ ಕೊಂಬೆಯ ಐತಿಹ್ಯ ಮತ್ತು ಅದರ ರಹಸ್ಯವನ್ನು ಭೇದಿಸುವ ಪ್ರಯತ್ನವೂ ಆತನ ಆಸಕ್ತಿಯ ವಿಷಯವಾಗಿತ್ತು. ಶತಮಾನಗಳ ಮತ್ತು ಸಂಸ್ಕೃತಿಗಳ ವ್ಯಾಪಕ ವ್ಯಾಪ್ತಿಯಲ್ಲಿ ಆತ ಪುರಾಣಗಳ ಮತ್ತು ಕಥೆಗಳ ರಾಶಿಗಳನ್ನೇ ಶೋಧಿಸಲು ಹೊರಟ ಮತ್ತು ಹಲವು ಸಂಸ್ಕೃತಿಗಳ ನಡುವಣ ಹೋಲಿಕೆಗಳನ್ನು ಪರಿಶೀಲಿಸಿದ.

## ವನದೇವತೆ ಡಯಾನಾ

ನೆಮಿ ಪವಿತ್ರ ತೋಟದಲ್ಲಿ ಡಯಾನಗಳನ್ನು ಆರಾಧಿಸುವದಕ್ಕೆ ಅತ್ಯಂತ ಮಹತ್ವವಿತ್ತು. ಪ್ರಾಚೀನ ಸಂಪ್ರದಾಯದ ಅವಶೇಷವಾಗಿ ಈ ಪದ್ಧತಿ ಬಂದಿರುತ್ತದೆ. ಈ ಪರಂಪರೆಯಲ್ಲಿ ಆಕೆ ವನದೇವತೆಯಾಗಿ ಪೂಜ್ಯಳು. ವನ್ಯಜೀವಿಗಳ ಪಾಲಕಳು. ಬಹುಶಃ ಆ ನೆಲದ ಒಡತಿಯಾಗಿ ಮನೆ ಮಂದಿಗಳ, ಜನಜಾನುವಾರುಗಳ, ಫಲಸಂಪತ್ತುಗಳ ತಾಯಿ. ಗಂಡು ಹೆಣ್ಣುಗಳ ಒಳಿತಿಗೆ ಅವಳ ಹರಕೆಗಳು ಬೇಕು. ತೊಟ್ಟಿಲ ಮಗುವಿನ ತಾಯಿಗೆ ಅವಳ ಕೃಪಾಕಟಾಕ್ಷ ಬೇಕು. ಆಕೆಯ ಇಂತಹ

ಕಾರ್ಯಗಳನ್ನು ಅವಳ ಮತ್ತೊಂದು ಸ್ವರೂಪದ ಎಜಿರಿಯಾ ಹೆಚ್ಚಾಗಿ ನಿರ್ವಹಿಸುತ್ತಾಳೆ. ಎಜಿರಿಯಾ ಹೆಂಗಸರ ಹೆರಿಗೆಗೆ ಸಂಬಂಧಿಸಿದ ಸಂಕಷ್ಟಗಳನ್ನು ದೂರ ಮಾಡುವವಳು. ಆಕೆಯ ಪೂರ್ವಕತೆಯಂತೆ ಹಿಂದೊಮ್ಮೆ ಅವಳು ಪವಿತ್ರ ತೋಟದಲ್ಲಿ ಓರ್ವ ಮುದಿ ರೋಮ್ ದೊರೆಯೊಂದಿಗೆ ಕೂಡಿದವಳು. ಅದೇ ತೋಟದಲ್ಲಿ ಆಕೆಗೆ ಓರ್ವ ಸಂಗಾತಿಯಿದ್ದ. ಆತನೇ ವರ್ಬಿಯಸ್. ಆತ ವೀನಸ್‌ಗೆ ಅಡೋನ್ ಸಂಗಾತಿಯಿದ್ದ ಹಾಗೆ.

## ಅರ್ಚಕ ದೊರೆಗಳು

ನೆಮಿಯಲ್ಲಿ ಡಯಾನಳ ಅರ್ಚಕದೊರೆ ಅಲ್ಲಿನ ರಾಜನಾಗಲು ತನ್ನ ಪೂರ್ವಾಧಿಕಾರಿಯನ್ನು ಏಕೆ ಕೊಲೆಮಾಡಬೇಕಾಗಿತ್ತು? ಈ ಕೃತ್ಯಕ್ಕೆ ಮೊದಲು ಜನಸಾಮಾನ್ಯ ಹಿರಿಯರು ವರ್ಜಿಲನ ಚಿನ್ನದ ಕೊಂಬೆಯೆಂಬುದಾಗಿ ಗುರುತಿಸಿಕೊಂಡ ಹಾಗೆ, ಆತ ನಿರ್ದಿಷ್ಟ ಮರವೊಂದರ ಕೊಂಬೆಯನ್ನು ಏಕೆ ಕೀಳಬೇಕಾಗಿತ್ತು? ಫ್ರೇಜರ ಅರ್ಚಕ ದೊರೆಗಳು ಎನ್ನುವ ಎರಡನೆಯ ಅಧ್ಯಾಯದ ಅರಂಭದಲ್ಲಿ ಈ ಪ್ರಶ್ನೆಗಳನ್ನು ಮುಂದಿಟ್ಟಿದ್ದಾನೆ. ಅವುಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನೂ ಮಾಡಿದ್ದಾನೆ.

## ಪವಿತ್ರ ರಾಜ ಮತ್ತು ಪವಿತ್ರ ರಾಣಿ

ಪ್ರಾಚೀನ ಇಟಲಿ ಗ್ರೀಸ್‌ನಲ್ಲಿ ಅರ್ಚಕನಿಗೆ ರಾಜತ್ವದ ಹೆಸರು ಸಾಮಾನ್ಯವಾಗಿತ್ತು. ರೋಮ್ ಮತ್ತು ಇತರ ಲ್ಯಾಟಿಯಮ್ ನಗರಗಳಲ್ಲಿ ಅರ್ಚಕನೊಬ್ಬ ಬಲಿಪಶು ರಾಜ (Sacrificial King) ಅಥವಾ ಪವಿತ್ರ ವಿಧಿಗಳ ರಾಜ ಎಂದು ಕರೆಸಿಕೊಳ್ಳುತ್ತಿದ್ದ. ಆತನ ಪತ್ನಿಗೆ ಪವಿತ್ರವಿಧಿಗಳ ರಾಣಿ (Queen of the Sacred Rites) ಎಂದು ಹೆಸರಿತ್ತು. ಅಥೆನ್ಸ್ ಗಣರಾಜ್ಯದಲ್ಲಿ ಕೂಡ ರಾಜ್ಯ ಸಂಸ್ಥಿತ ಶಾಖೆಯ ವರ್ಷಾವಧಿಯ ದ್ವಿತೀಯ ದಂಡಾಧಿಕಾರಿ (ನ್ಯಾಯಾಧಿಪತಿ)ಗೆ ರಾಜನೆಂಬುದಾಗಿ ಹೆಸರಿತ್ತು. ಆತನ ಪತ್ನಿಯನ್ನು ರಾಣಿಯೆನ್ನಲಾಗುತ್ತಿತ್ತು. ಇವರಿಬ್ಬರ ಕೆಲಸವೂ ಪವಿತ್ರ ಹಾಗೂ ಧಾರ್ಮಿಕವೆನಿಸಲ್ಪಡುತ್ತಿತ್ತು. ರಾಜವಂಶದ ಅಧಿಕೃತ ಪ್ರತಿನಿಧಿಯ ಸಂಯೋಗದೊಂದಿಗೆ ಇರುತ್ತಿದ್ದ

ಅರ್ಚಕತನದ ಕಾರ್ಯಗಳು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದ್ದ ಸಂಗತಿಯಾಗಿತ್ತು. ಏಷ್ಯಾ ಮೈನರ್ ಮತ್ತು ಇತರ ಕಡೆಗಳಲ್ಲೂ ಈತ ಜನರ ಮತ್ತು ದೇವರ ನಡುವಣ ಓರ್ವ ಮಧ್ಯವರ್ತಿಯಾಗಿರುತ್ತಿದ್ದ. ಸಕಾಲದಲ್ಲಿ ಬೆಳೆಸಲೆಗಳಿಗೆ ಮಳೆ ಗಾಳಿ ಬೆಳಕು ಮೊದಲಾದ ಅವಶ್ಯ ಅಂಶಗಳನ್ನು ತರಿಸಿಕೊಡುವ ಕರ್ತವ್ಯ ಈ ರಾಜನದಾಗಿತ್ತು. ಜಗತ್ತು ಎನ್ನುವ ಪರಿಕಲ್ಪನೆಯು ಸಕಲ ಆಗುಹೋಗುಗಳೂ ಅಪಾಯಕ (Supernatural)ವೆನಿಸಿಕೊಂಡ ಮಧ್ಯವರ್ತಿಗಳಿಂದ ನಡೆಯುತ್ತಿರುತ್ತದೆ ಎಂದು ತಿಳಿಯಲಾಗುತ್ತಿತ್ತು. ಮಾಂತ್ರಿಕತೆಯ ನಿಯಮ ತತ್ವಗಳು ಎಲ್ಲ ಕಾಲಗಳಲ್ಲೂ ಎಲ್ಲ ದೇಶಗಳಲ್ಲೂ ಮೂಢನಂಬಿಕೆಯ ಮಾನವ ಮನಸ್ಸುಗಳಲ್ಲಿ ಕೆಲಸ ಮಾಡುತ್ತಿತ್ತು. ಅಲ್ಲದೆ ಮಾಂತ್ರಿಕತೆಗೆ ಅಂತಹ ಮನಸ್ಸುಗಳ ಮೇಲೆ ಬಲವಾದ ಹಿಡಿತವಿರುತ್ತಿತ್ತು. ಹಾಗಾಗಿ ಮಾಂತ್ರಿಕತೆಯ ಕುರಿತು ಅದಷ್ಟು ಸಮಗ್ರವಾಗಿ ಮತ್ತು ವಿವರವಾಗಿ ತಾನು ನೋಡ ಹೊರಟಿರುವುದು ಎಂಬುದನ್ನು ಫ್ರೇಜರ ಸ್ಪಷ್ಟಪಡಿಸಿಕೊಂಡಿರುವುದನ್ನು ಇಲ್ಲಿ ಉಲ್ಲೇಖಿ ಸಬಹುದು.

## ಫ್ರೇಜರನ ವಾದಗಳಿಗೆ ಸಿಕ್ಕಿದ ಪ್ರತಿಕ್ರಿಯೆ

ಎಡ್ವರ್ಡ್ ಬಿ. ಟೈಲರನ ಸರ್ವಚೇತನವಾದ ಆಧುನಿಕ ವಿದ್ವಾಂಸರ ಟೀಕೆಗೆ ಗುರಿಯಾಗಿದ್ದರೂ ಆದಿಮ ಜನರ ಧರ್ಮದ ಬಗೆಗಿನ ಅತ್ಯಂತ ಮಹತ್ವದ ಹಲವು ವಿಚಾರಗಳನ್ನು ಕೆದಕಿ ಕೆರಳಿಸಿ ಹಾಕಿತು. ಆ ವಿಚಾರಗಳೆಲ್ಲವೂ ಸರ್ವಚೇತನವಾದದ ಚೌಕಟ್ಟಿನೊಳಗೆ ಬರುವ ಸಾಧ್ಯತೆಯನ್ನು ಸಹಜವಾಗಿಯೇ ಮೀರಿದವುಗಳು. ಅಂತಹ ಸಂದರ್ಭಗಳಲ್ಲಿ ಟೈಲರನ ಸರ್ವಚೇತನವಾದದ ಮುಂದುವರಿಕೆಯಾಗಿಯೂ ಹೆಚ್ಚು ಆಳವಾಗಿಯೂ ಇರುವಂತಹ ಆಧುನಿಕ ಮಾನವಶಾಸ್ತ್ರಕ್ಕೊಂದು ವಿಸ್ತೃತ ಹೊರ ನೋಟವನ್ನು ತೋರಿಸಿಕೊಡುವ ಕೆಲಸ ಸರ್ ಜೇಮ್ಸ್ ಫ್ರೇಜರನಿಂದಾಯಿತು. ಒಂದು ಅರ್ಥದಲ್ಲಿ ಮಾಟ ಮತ್ತು ಧರ್ಮ ಇವುಗಳಿಗೆ ಸಂಬಂಧಪಟ್ಟ ವಾದವೆನ್ನುವುದು ಈ ಅವಳಿ ವಸ್ತು ವಿಚಾರಗಳ ಕುರಿತ ಆಧುನಿಕ ಅಲೋಚನೆಗಳಿಗೆ ಹಾಕಿಕೊಟ್ಟ ಮುಕ್ತ ವೇದಿಕೆಯೆನ್ನಬೇಕು. ಜರ್ಮನಿಯ ಪ್ರೋಸ್ (Preuss) ಇಂಗ್ಲಾಂಡಿನ ಮ್ಯಾರೆಟ್ (Marett), ಫ್ರಾನ್ಸಿನ ಎಂ.ಎಂ. ಹಬರ್ಟ್ (M.M. Hubert) ಮತ್ತು ಮಾಸ್

(Mauss) ಮೊದಲಾದ ವಿದ್ವಾಂಸರು ತಮ್ಮ ಸ್ವತಂತ್ರವಾದ ಕೆಲವು ಅಭಿಪ್ರಾಯಗಳನ್ನು ಮುಂದಿಟ್ಟರು. ಅವುಗಳಲ್ಲಿ ಕೆಲವು ಫ್ರೇಜರನ ವಿರುದ್ಧವಾಗಿಯೂ, ಕೆಲವು ಆತನ ಶೋಧಗಳ ಪರವಾಗಿಯೂ ಇದ್ದುವು. ಈ ವಿದ್ವಾಂಸರು ವಿಜ್ಞಾನ ಮತ್ತು ಮಾಟದ ಕುರಿತಾದ ಸ್ಪಷ್ಟ ಪರಿಕಲ್ಪನೆಗಳನ್ನು ಮೂಡಿಸಲು ಶಕ್ತರಾದರು. ಜೊತೆಗೆ ಅವು ಹೇಗೆ ಒಂದಕ್ಕೊಂದು ಭಿನ್ನವಾಗಿವೆ ಎಂಬುದನ್ನು ಪ್ರತಿಪಾದಿಸಿದರು. (ನೋಡಿ : Malinowski 1948, 18, 19)

## ಮಾತೃ ದೇವತೆಯ ಆರಾಧನೆ

ಜಗತ್ತಿನ ಸಂಸ್ಕೃತಿಯ ಕುರಿತು ಅಧ್ಯಯನಕ್ಕೆ ತೊಡಗಿದರೆ ವಿವಿಧ ಜನಾಂಗ ಸಂಸ್ಕೃತಿಗಳಲ್ಲೂ ಮಾತೃ ದೇವತೆಗಳ ಆರಾಧನೆಯು ಸಾಮಾನ್ಯ ಅಂಶವಾಗಿ ಕಂಡು ಬರದಿರದು. ಪ್ರಾಚೀನ ಗ್ರೀಕರು 'ಅಥೆನಾ' ದೇವತೆಯನ್ನೂ ರೋಮನ್ನರು 'ಮಿನರ್ವ' ದೇವತೆಯನ್ನೂ ಮಾತೃ ದೇವತೆಗಳಾಗಿ ಪೂಜಿಸುತ್ತಿದ್ದರು. ಮಿನರ್ವ ಜ್ಞಾನ ಶಕ್ತಿಯ ಅಧಿದೇವತೆಯೂ ಹೌದು; ಕುಲದೇವತೆಯೂ ಹೌದು, ಸಮರ ದೇವತೆಯೂ ಹೌದು. ಗ್ರೀಕಿನ ಆಫ್ರೊಡೈಟಿ, ಆರ್ಟೆಮಿಸ್, ರೋಮಿನ ಡಯಾನ, ವೀನಸ್, ಈಜಿಪ್ಟಿನ ಐಸಿಸ್, ಇರಾನಿನ ಅನೂಹಿತಾ ಮಾತೃದೇವತೆಯ ಸಾಲಿಗೆ ಸೇರುತ್ತವೆ.

ಫ್ರೇಜರ ಹೇಳುವ ಹಾಗೆ ನೆಮಿಯಲ್ಲಿ ನಡೆಯುತ್ತಿದ್ದ ಡಯಾನಳ ಪೂಜೆ ಮುಖ್ಯವಾಗಿ ಆಕೆ ವ್ಯಾಧರ ದೇವತೆ ಎನ್ನುವುದರಿಂದಲೂ, ಸಂತಾನವನ್ನು ಕರುಣಿಸುವ ದೇವತೆ ಎನ್ನುವುದರಿಂದಲೂ ಗರ್ಭಿಣಿ ಸ್ತ್ರೀಯರಿಗೆ ಸುಖಪ್ರಸವ ಕೊಡುವ ದೇವತೆ ಎನ್ನುವುದರಿಂದಲೂ ನಡೆಯುತ್ತಿತ್ತು. ಆಕೆಯ ಪೂಜೆಯಲ್ಲಿ ಅಗ್ನಿಗೆ ಬಹು ಪ್ರಾಮುಖ್ಯವಿರುತ್ತಿತ್ತು. ವರ್ಷದ ಅತ್ಯಂತ ಸುಡುಬೇಸಗೆಯಲ್ಲೂ ವಾರ್ಷಿಕ ಉತ್ಸವ ಸಂದರ್ಭ ಆಕೆಯ ವನದಲ್ಲಿ ಸಾವಿರಾರು ದೀವಟಿಕೆಗಳು ಬೆಳಗಿ ಅಲ್ಲಿಯ ಸರೋವರದಲ್ಲಿ ಪ್ರತಿಬಿಂಬಿಸುತ್ತಿದ್ದುವು. ಅಲ್ಲದೆ ಇಡೀ ಇಟಲಿ ದೇಶದಲ್ಲಿ ಪ್ರತಿ ಮನೆಯಲ್ಲೂ ಆಕೆಯನ್ನು ಕುರಿತಂತೆ ಪೂಜಾದಿಗಳು ನಡೆಯುತ್ತಿದ್ದುವು. ಆಕೆಯನ್ನು ಪೂಜಿಸುತ್ತಿದ್ದ ಪ್ರದೇಶದಲ್ಲಿ ದೊರಕಿರುವ ವಿಗ್ರಹದಲ್ಲಿ ಡಯಾನ ಎತ್ತಿ ಹಿಡಿದ ತನ್ನ ಬಲಗೈಯಲ್ಲಿ ದೀವಟಿಗೆಯನ್ನು

ಹಿಡಿದು ಬರುತ್ತಿದ್ದರು. ಅಲ್ಲದೆ ಆಕೆಗೆ ಹರಕೆ ಹೊತ್ತ ಸ್ತ್ರೀಯರು ತಮ್ಮ ತಮ್ಮ ಹರಕೆ ಸಲ್ಲಿಸುವುದಕ್ಕಾಗಿ ಮುಡಿಯಲ್ಲಿ ಮಾಲೆ ಧರಿಸಿ ಕೈಯಲ್ಲಿ ಪ್ರಜ್ವಲಿಸುವ ಧೀವಟಿಕೆಗಳನ್ನು ಹಿಡಿದು ಬರುತ್ತಿದ್ದರು. (ನೋಡಿ : ಚಿ.ನ.ಮಂಗಳ 1994, 8.9).

## ವನದೇವತೆಗಳು

ನೆಮಿ ಪರ್ವತಾರಣ್ಯದಲ್ಲಿ ಡಯಾನ ಮಾತ್ರ ಒಡತಿಯಾಗಿರಲಿಲ್ಲ. ಅವಳ ಅಧೀನದಲ್ಲಿ ಎಜೀರಿಯಾ ಮತ್ತು ವರ್ಬಿಯಸ್ ದೇವತೆಗಳು ವರ್ಚಸ್ಸು ಬೀರಿದ್ದರು. ಹೆಂಗಸರು ತಮ್ಮ ಮಕ್ಕಳೊಂದಿಗೆ ಇವರಿಗೂ ಹರಕೆ ಸಲ್ಲಿಸುತ್ತಿದ್ದರು. ಈ ಹರಕೆಗಳು ಸಾಮಾನ್ಯವಾಗಿ ಮಕ್ಕಳ ಹೆರಿಗೆ ಸುಲಭವಾಗಿ ನಡೆದ ಸಂಬಂಧವಾಗಿ ಇರುತ್ತಿತ್ತು. ವರ್ಬಿಯಸ್ ಐತಿಹ್ಯ ಪ್ರಕಾರ ಗ್ರೀಕ್ ತರುಣ ವೀರ ಹಿಪ್ಪೋಲಿಟಸ್ ಓರ್ವ ಸುಂದರ ಕಾಯ ಮತ್ತು ಬ್ರಹ್ಮಚಾರಿ. ಆದರೆ ಬೇಟೆಗಾರಿಕೆಯ ವಿದ್ಯೆ ಬಲ್ಲವನು. ತನ್ನಂತೆ ಬೇಟೆಗಾರಿಕೆ ವಿದ್ಯೆಯಲ್ಲಿ ಪರಿಣತೆಯಾಗಿದ್ದ ಹರ್ಟಿಮಿಸ್ ಜೊತೆ ಸದಾ ಹಸುರು ಕಾಡುಗಳಲ್ಲಿದ್ದುಕೊಂಡು ಕ್ರೂರ ಮೃಗಗಳನ್ನು ಬೇಟೆಯಾಡುತ್ತಿದ್ದನು. ಹರ್ಟಿಮಿಸ್ ಡಯಾನಳನ್ನು ಹೋಲುವ ಗ್ರೀಕ್ ದೇವತೆಯಾಗಿದ್ದಳು. ಹಿಪ್ಪೋಲಿಟಸ್ ಸೂರ್ಯನ ಪ್ರತೀಕ. ಆತ ಡಯಾನಳ ಜೊತೆ ಸೇರಿಕೊಂಡವನು. ದೇವಮಾತೆಯ ಜೊತೆ ಹಟ್ಟಿಸ್ ಸೇರಿಕೊಂಡ ಹಾಗೆ. ಮಿನರ್ವ ದೇವತೆಯ ಜೊತೆ ಎರಿಕ್‌ಪೋನಿಯಸ್ ಸೇರಿಕೊಂಡ ಹಾಗೆ. ವೀನಸ್ ಜೊತೆ ಅಡೋನಿಸ್ ಸೇರಿಕೊಂಡ ಹಾಗೆ.

## ಡಯಾನಳ ಪುರಾಣ ಮತ್ತು ಆಚರಣೆ

ಡಯಾನಳ ಕುರಿತು ಇರುವ ಮಿತ್ ಎನ್ನುವುದು ಧಾರ್ಮಿಕಾಚರಣೆಯ ಮಿತಿಯದು ಹೊರತು ಬೇರೆ ನೆಲೆಯದ್ದಲ್ಲ. ಹಿಪ್ಪೋಲಿಟಸನಿಗೆ ಪ್ರತ್ಯೇಕವಾದ ಮತ್ತು ಪ್ರಖ್ಯಾತವಾದ ಒಂದು ಪವಿತ್ರಾರಣ್ಯವಿತ್ತು. ಅದು ಟ್ರೋಜನ್‌ನಲ್ಲಿ ಆತನ ಪೂರ್ವಜರ ಮನೆಗೆ ಸಂಬಂಧಿಸಿತ್ತು. ಈತ ಈಗ ಆರಾಧ್ಯ ವ್ಯಕ್ತಿ. ಆ ಕರಾವಳಿ ತೀರದಲ್ಲಿ ಒಂದು ಗುಡಿ, ಗುಡಿಯಲ್ಲಿ ಅರ್ಚಕ. ಪ್ರತಿವರ್ಷ ಹಿಪ್ಪೋಲಿಟಸನಿಗೆ ಆತನ ಗೌರವಾರ್ಥವಾಗಿ ಬಲಿ

ಸಮರ್ಪಣೆಯ ಜಾತ್ರೆ ನಡೆಯುತ್ತದೆ. ಆತನ ಅಕಾಲಿಕ ಅದೃಷ್ಟದ ಕುರಿತು ಶೋಕಾಚರಣೆ ಇದೆ. ಮದುವೆಯಾಗದ ಕನ್ಯೆಯರು ಕಣ್ಣೀರು ಹಾಕುತ್ತ ಶೋಕಮಂತ್ರ ಪಠಿಸುತ್ತಾರೆ. ಯುವಕ ಯುವತಿಯರು ಮದುವೆಗೆ ಮುನ್ನ ತಮ್ಮ ತಲೆಕೂದಲುಗಳನ್ನು ಆತನ ಗುಡಿಯಲ್ಲಿ ಅರ್ಪಿಸುತ್ತಾರೆ. ಟ್ರೋಜನಿನಲ್ಲಿ ಆತನ ಸಮಾಧಿಯಿದೆ. ಹಿಪ್ಪೋಲಿಟಸನ ಸಂಗಾತಿ ಆರ್ಟೆಮಿಸ್ ಮೊದಲು ಫಲವಂತಿಕೆಯ ದೇವತೆಯಾಗಿದ್ದಳು. ಪ್ರಕೃತಿ ಫಲವತಿ ಯಾಗಬೇಕಿದ್ದರೆ ಆಕೆ ಫಲವತಿಯಾಗಬೇಕು ಮತ್ತು ಗಂಡು ಮಗುವನ್ನು ಪಡೆಯಬೇಕು ಎನ್ನುವುದು ನಂಬಿಕೆ.

ಡಯಾನ ಅರ್ಟೆಮಿಸ್‌ನಂತೆ ಫಲವಂತಿಕೆ ಮತ್ತು ಮಕ್ಕಳ ಹುಟ್ಟಿಗೆ ಕಾರಣಳಾದ ದೇವತೆ. ಹಿಪ್ಪೋಲಿಟಸ್ ನೆಮಿಯಲ್ಲಿ ಪವಿತ್ರಾರಣ್ಯದ ಮೊದಲ ರಾಜ. ಅರಣ್ಯದ ರಾಜರು ಎನ್ನುವ ಹೆಸರಲ್ಲಿ ಡಯಾನಳ ಅಧೀನರಾಗಿದ್ದ ಅರ್ಚಕ ವಂಶದ ಓರ್ವ ಪ್ರಾಗ್ರೂಪಿಯೇ ವರ್ಬಿಯಸ್. ಈ ಅರಣ್ಯದ ರಾಜನಿಗೆ ಅರಣ್ಯಲೋಕದ ಡಯಾನಳೇ ರಾಣಿ. ಆಕೆಯನ್ನು ರಾಜ ದೇವತೆಯಂತೆ ಆರಾಧಿಸುತ್ತಿದ್ದುದು ಮಾತ್ರವಲ್ಲ ತನ್ನ ಮಡದಿಯಂತೆಯೇ ಅಪ್ಪಿಕೊಂಡಿರುತ್ತಿದ್ದನು. ಸುಂದರವಾದ ಆಲ್ಬಾನ್ ಬೆಟ್ಟದ ತಪ್ಪಲಿನ ನುಣುಪಾದ ಹೊಳೆಯುವ ಎಲೆಗಳುಳ್ಳ ಬೀಚ್ ಮರವನ್ನು ಆಲಿಂಗಿಸಿಕೊಳ್ಳುತ್ತಿದ್ದ. ಚುಂಬಿಸುತ್ತಿದ್ದ. ಅದರ ನೆರಳಲ್ಲಿ ಮಲಗುತ್ತಿದ್ದ. ಅದರ ಕಾಂಡಕ್ಕೆ ದ್ರಾಕ್ಷಾರಸ ಸುರಿಯುತ್ತಿದ್ದ. ಆ ಮರವನ್ನು ದೇವತೆಗಾಗಿ ಸ್ವೀಕರಿಸುತ್ತಿದ್ದ. ಡಯಾನ ಬೇಟೆಯ ದೇವತೆ, ವ್ಯಾಧರ ದೇವತೆ, ಸಂತಾನ ದೇವತೆ, ಕಾಡಿನ ರಾಜನ ರಾಣಿ, ಹೀಗೆ ಬಗೆಬಗೆಯಲ್ಲಿ ಜನಪ್ರಿಯ ದೇವತೆಯಾಗಿದ್ದಳು. ಇಂತಹ ಪ್ರಸಿದ್ಧದೇವತೆಯ ಹೆಸರನ್ನು ಜಗತ್ತಿನಾದ್ಯಂತ ಹೆಣ್ಣು ಮಕ್ಕಳಿಗೆ ಇಡುವ ಪದ್ಧತಿ ಇಂದೂ ಇದೆ. ಬ್ರಿಟನಿನ ರಾಜಕುಮಾರಿ ಡಯಾನಾ ಈಚೆಗೆ ಬಹಳಷ್ಟು ಚರ್ಚೆ ಸಮಸ್ಯೆಗಳಿಗೆ ಒಳಗಾಗಿದ್ದಳು. 'ಡಯಾನಾರ ಜೀವನದಲ್ಲಿನ ಹಲವು ವಿಪರ್ಯಾಸಗಳಲ್ಲಿ ಒಂದೆಂದರೆ ಪುರಾತನ ಬೇಟೆಯ ದೇವತೆಯ ಹೆಸರು ಇಡಲ್ಪಟ್ಟ ಹುಡುಗಿ ಆಧುನಿಕ ಯುಗದಲ್ಲಿ ಸ್ವತಃ ಬೇಟೆಗೆ ಈಡಾದರು' (ಅರ್ಲ್ ಸ್ಪೆನ್ಸರ,1977.2)

## ವನ ಮತ್ತು ಜಲದೇವತೆಗಳು

ನೆಮಿ ತೋಪಿನಲ್ಲಿ ಎಜಿರಿಯಾ (Egeria) ಮುಖ್ಯ ಜಲಕನ್ಯೆ (Water nymph) ಯೆನಿಸಲ್ಪಟ್ಟು ಜಲದೇವತೆಯಾಗಿದ್ದಳು. ವನ ಮತ್ತು ಜಲದೇವತೆಗಳಿಗೆ ಮದುವೆ ನಡೆಸುವ ಆಚರಣೆ ನಡೆಯುತ್ತಿತ್ತು. ಈ ಮದುವೆಗೆ 'ಪವಿತ್ರಮದುವೆ' ಎನ್ನಲಾಗುತ್ತಿತ್ತು. ಪವಿತ್ರಮದುವೆ ಭೂಮಿಯ ಫಲವಂತಿಕೆಯನ್ನು ಹೆಚ್ಚಿಸುತ್ತದೆ ಎಂದು ನಂಬಲಾಗುತ್ತಿತ್ತು. ಈ ಆಚರಣೆಯ ಮೇಲೆಯೇ ಮನುಷ್ಯ ಮತ್ತು ಪ್ರಾಣಿಗಳ ಬದುಕು ಅವಲಂಬಿತವಾಗಿತ್ತು. ಪವಿತ್ರಮದುವೆಯ ಗಂಡು ದಿವ್ಯ ಮದುಮಗ ಎನಿಸಲ್ಪಟ್ಟರೆ ಪವಿತ್ರ ಹೆಣ್ಣು ದಿವ್ಯ ಮದುಮಗಳು (Devine bridegroom and bride) ನೆಮಿ ತೋಪಿನಲ್ಲಿ ಕಾಡಿನ ಲೌಕಿಕ ರಾಜ ಮತ್ತು ಕಾಡಿನ ಅಲೌಕಿಕ ರಾಣಿ ಡಯನಾ ಇವರ ಪವಿತ್ರ ಮದುವೆ ಆಚರಣೆ ಆಚರಿಸಲಾಗುತ್ತಿತ್ತು. ಇಲ್ಲಿ ಕೂಡ ಜಲಕನ್ಯೆ ಎಜಿರಿಯಾ ಮಹತ್ವದ ಪಾತ್ರವಹಿಸುತ್ತಿದ್ದಳು. ಆಕೆ ಗರ್ಭಿಣಿ ಸ್ತ್ರೀಯರ ಆರಾಧ್ಯ ದೇವತೆಯೂ ಆಗಿದ್ದಳು. ಇಂತಹ ಆರಾಧನೆಯಿಂದಾಗಿ ಗರ್ಭಿಣಿಯರಿಗೆ ಸುಖಪ್ರಸವವಾಗುತ್ತಿತ್ತು ಎನ್ನುವುದು ಬಹುಮುಖ್ಯವಾದ ನಂಬಿಕೆ.

ಮಾತೃ ದೇವತೆಗಾಗಲಿ, ಗ್ರಾಮದೇವತೆಗಾಗಲಿ ಇಂದಾದರೂ ಕುಟುಂಬದಲ್ಲಿ ಹರಕೆ ಒಪ್ಪಿಸುವವಳು ಹೆಣ್ಣೇ ಆಗಿರುತ್ತಾಳೆ. ವ್ರತ, ಪೂಜೆ, ಸೇವೆ, ಹರಕೆ ಮೊದಲಾದ ಧಾರ್ಮಿಕ ಆಚರಣೆಗಳ ಬಗೆಗೆ ಕುಟುಂಬವೊಂದರ ಹೆಣ್ಣು ಹೆಚ್ಚು ಆಸಕ್ತಿವಹಿಸುತ್ತಿರುವುದಕ್ಕೂ ಮೂಲ ಕಾರಣ ಇದೇ. ಇಲ್ಲೆಲ್ಲ ಗಂಡು ನಿಮಿತ್ತ ಮಾತ್ರನಾಗಿ ವ್ಯವಹರಿಸುತ್ತಾನೆ ಪಾಲುಗೊಳ್ಳುತ್ತಾನೆ ಎಂದರೂ ತಪ್ಪಲ್ಲ. ಎಲ್ಲಕ್ಕೂ ಪ್ರೇರಣೆ ಹೆಣ್ಣು. ಆಕೆಯ ನಿರ್ದೇಶನದಲ್ಲೇ ವಿಧಿ ಆಚರಣೆಗಳು ಮನೆಯಲ್ಲಾಗಲೀ ಗುಡಿಯಲ್ಲಾಗಲೀ ನಡೆಯುವುದನ್ನು ಗಮನಿಸಬಹುದು. ಕುಲ ಸಂತಾನಕ್ಕೆ ಜನ್ಮ ಕೊಡುವುದು, ಪೋಷಿಸುವುದು, ಬೆಳೆಸುವುದು ಮೊದಲಾದುವುಗಳಲ್ಲಿ ಹೆಣ್ಣಿನದು ಗಂಡಿಗಿಂತ ನೇರವಾದ ಮತ್ತು ನಿಕಟವಾದ ಅನುಭವ. ಬದುಕಿನ ಸುಖ ನೆಮ್ಮದಿ, ಕಷ್ಟನಷ್ಟಗಳ ಅನುಭವ ಅದು. ಈ ಅನುಭವದ ಅಭಿವ್ಯಕ್ತಿಯೇ ವ್ಯಥೆಯಾಗಿ ಕಥೆಯಾಗಿ ತಲೆಮಾರುಗಳಿಂದ ಹರಿದು ಬಂದು ವಿಶಿಷ್ಟ ಸಾಹಿತ್ಯವೆನಿಸಿಕೊಂಡಿತು. ಅದು ಪರಂಪರೆಯ ಅನುಭವ. ಮೌಖಿಕ ಸಾಹಿತ್ಯವಾಗಿ

ಸಹಜ ಅಭಿವ್ಯಕ್ತಿಯೆನಿಸಿಕೊಂಡ ಜನಪದ ಸಾಹಿತ್ಯವೆನಿಸಿಕೊಂಡಿತು. ಇನ್ನೊಂದು ಮಾತಿನಲ್ಲಿ ಹೇಳುವುದಿದ್ದರೆ ಜನಪದ ಪರಂಪರೆಯಲ್ಲಿ ಹೆಣ್ಣೇ ಆರಾಧ್ಯಳು ಮತ್ತು ಜಾನಪದ ಭಂಡಾರದ ಸೃಷ್ಟಿಕರ್ತಳು ಹಾಗೂ ಅದರ ಒಡತಿಯಾಗಿದ್ದಾಳೆ. ಇಂತಹ ಆರಾಧ್ಯ ದೇವತೆ ನೆಮಿ ಪವಿತ್ರ ತೋಪಿನ ಡಯಾನಾ ಆಗಿರಬಹುದು; ಜಲಕನ್ಯೆ ಎಜಿರಿಯಾ ಆಗಿರಬಹುದು. ಆಕೆ ದೇಶದೇಶಗಳ ಪ್ರಾದೇಶಿಕ ಭಾಷೆ ಸಂಸ್ಕೃತಿಗಳಿಗನುಗುಣವಾಗಿ ಬೇರೆ ಬೇರೆ ಹೆಸರುಗಳಲ್ಲಿ ಪೂಜಿಸಲ್ಪಡುವ ಮಾತೃದೇವತೆಯಾಗಿದ್ದಾಳೆ. ಭಾರತ ಉಪಖಂಡದಲ್ಲಿ ಗ್ರಾಮದೇವತೆಯಾಗಿದ್ದಾಳೆ. ಆಕೆಗೆ ಪ್ರಾದೇಶಿಕವಾಗಿ ಎಲ್ಲಮ್ಮ, ಮಾರಮ್ಮ, ಭಗವತಿ, ಚಾಮುಂಡಿ, ಮಾಯಾಂಡಾಲ್, ತನ್ನಿಮಾನಿಗ, ಉಳ್ಳಾಲ್ತಿ, ಕಾಳಿ, ದುರ್ಗೆ ಮೊದಲಾದ ಹೆಸರುಗಳಿಂದ ಪೂಜಿಸಲ್ಪಡುತ್ತಾಳೆ.

ಇಂತಹ ವನದೇವತೆ, ಜಲದೇವತೆಗಳ ಕುರಿತ ಪುರಾಣಗಳು ಆಯಾ ದೇಶಗಳಲ್ಲಿ, ಪ್ರದೇಶಗಳಲ್ಲಿ ಜನಪ್ರಿಯವಾಗಿವೆ. ಅನೇಕ ವೇಳೆ ಸ್ತ್ರೀ ದೇವತೆಗೆ ಸಂಬಂಧಿಸಿ ಪುರುಷದೇವತೆ ಮಹತ್ವ ಪಡೆದುಕೊಂಡಿರುವುದುಂಟು. ಅಂತಹ ಗಂಡು ದೇವತೆಗಳಲ್ಲಿ ಎಡೋನಿಸ್ ಒಂದು. ಪ್ರಾರಂಭದಲ್ಲಿ ಬ್ಯಾಬಿಲೋನಿಯಾ ಮತ್ತು ಸಿರಿಯಾ ದೇಶಗಳಲ್ಲಿ ಪೂಜಿಸಲ್ಪಡುತ್ತಿದ್ದ ಈ ದೇವತೆಯನ್ನು ಕ್ರಿ.ಪೂ. ಏಳನೆಯ ಶತಮಾನದಲ್ಲಿ ಗ್ರೀಕರು ಎರವಲಾಗಿ ಪಡೆದು ಪೂಜಿಸತೊಡಗಿದರು. ಫ್ರೇಜರ ಎಡೋನಿಸ್ ದೇವತೆಯ ಪುರಾಣವನ್ನು ಸಂಗ್ರಹಿಸಿರುತ್ತಾನೆ. ಈ ಪುರಾಣದಂತೆ ಆತ ಓರ್ವ ತರುಣವೀರ. ಆಫ್ರೋಡೈಟ್ ಸ್ತ್ರೀ ದೇವತೆಯ ಪ್ರಿಯಕರ. ಒಂದು ಬಾರಿ ಆಫ್ರೋಡೈಟ್ ದೇವತೆ ತನ್ನ ಪ್ರಿಯಕರನನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಪರ್ಸಿಫೋನ್ ಸ್ತ್ರೀದೇವತೆಗೆ ನೀಡಿ ಇಟ್ಟುಕೊಂಡಿರಲು ಕೊಟ್ಟಿದ್ದಳು. ಆದರೆ ಹೆಣ್ಣಾದ ಆಕೆಯೇ ಎಡೋನಿಸನನ್ನು ನೋಡಿ ಮೋಹಗೊಂಡಳು. ಈ ಮೋಹ ಗಾಢವಾಗಿ ಆತನನ್ನು ಆಫ್ರೋಡೈಟಳಿಗೆ ಹಿಂದಿರುಗಿ ಕೊಡಲು ಹೋಗಲೇ ಇಲ್ಲ. ಹೀಗಾಗಿ ಒಬ್ಬ ಪ್ರಿಯಕರನಿಗಾಗಿ ಇಬ್ಬರು ಹೆಣ್ಣುಗಳು ಜಗಳಾಡುವ ಪ್ರಮೇಯ ಒದಗಿ ಬಂತು. ಆದರೆ ಜ್ಯೂಸ್ ದೇವತೆ ಇವರ ಜಗಳವನ್ನು ಬಗೆಹರಿಸಿ ವರ್ಷದ ಅರ್ಧಭಾಗ ಕೆಳಲೋಕದಲ್ಲಿ ಪರ್ಸಿಫೋನ ಜತೆಯೂ, ಉಳಿದರ್ಧ ಭಾಗ ಮೇಲು ಲೋಕದಲ್ಲಿ ಆಫ್ರೋಡೈಟಳೊಂದಿಗೆ ಇರುವಂತೆ ನಿಯಮ ಹಾಕಿದ. ಆದರೆ ಒಮ್ಮೆ ಕೆಳಲೋಕದಲ್ಲಿದ್ದಾಗ ಕರಡಿಯೊಂದನ್ನು ಬೇಟೆಯಾಡುತ್ತಿರಲು ಅದು

ಆತನನ್ನು ಕೊಂದಿತು. ಇದರಿಂದ ಆಪ್ರೋಡೈಟ್ ನಷ್ಟ ಅನುಭವಿಸಬೇಕಾಯಿತು. (ನೋಡಿ: ತೀ.ನಂ. ಶಂಕರನಾರಾಯಣ 1970, 63-64).

## ಚಿನ್ನದ ಕೊಂಬೆ ಬಯಸಿದ ವ್ಯಾಖ್ಯಾನ

ವಿಶೇಷವಾದ ಸುವರ್ಣವೃಕ್ಷದಿಂದ ಒಬ್ಬಾತ ಚಿನ್ನದ ಕೊಂಬೆಯೊಂದನ್ನು ಕೆಳಗೆ ಎಳೆಯುವುದರಲ್ಲಿ ಜಯಶೀಲನಾದರೆ ನೆಮಿಯ ಪವಿತ್ರಾರಣ್ಯದ ರಾಜನನ್ನು ವಧಿಸಲು ಹೋರಾಡುವ ಅವಕಾಶ ಪಡೆದುಕೊಳ್ಳುತ್ತಾನೆ ಮತ್ತು ಆ ಅರಣ್ಯದ ಮುಂದಿನ ರಾಜನಾಗುತ್ತಾನೆ. ಆದರೆ ಫ್ರೇಜರ ಈ ಚಿನ್ನದ ಕೊಂಬೆಗೂ ವರ್ಜಿಲನ ಮಹಾಕಾವ್ಯವಾದ ಈನಿಯಡಿಗೂ ಇರುವ ಸಂಬಂಧವನ್ನು ಕಂಡುಕೊಂಡ. ಇಲ್ಲಿ ಈ ವೀರನನ್ನು ಒಳಲೋಕ ಪ್ರವೇಶಮಾಡುವಂತೆ ಮಾಡಿದ್ದಲ್ಲದೆ ಅಲ್ಲಿನ ರಹಸ್ಯಗಳನ್ನು ಶೋಧಿಸುವ ಕೆಲಸ ನೀಡಿದ. ಕೊಂಬೆಯನ್ನು ವ್ಯಾಖ್ಯಾನಿಸಿದ. ರಾಜ ಮತ್ತು ಆತನ ಅಸ್ತಿತ್ವಕ್ಕಾಗಿ ಆತ ನಡೆಸುವ ಹೋರಾಟ, ಆತನ ಸಾವು ಮತ್ತು ಪುನರಸ್ತಿತ್ವ ಈ ಸಂಬಂಧವಾಗಿ ಫ್ರೇಜರ ಪುರಾಣ ಮತ್ತು ಆಚರಣೆಗಳ ಸಮಗ್ರ ಜಗತ್ತನ್ನು ತೆರೆದು ತೋರಿಸಿದ. ಆದಿಮ ಜನರ ಪ್ರಾಚೀನ ಗತೇತಿಹಾಸದಿಂದ ತೊಡಗಿ ತನ್ನ ಸಮಕಾಲೀನ ಜನರ ಕಾಲದವರೆಗಿನ ನಂಬಿಕೆ ಆಚರಣೆಗಳ ಬಗೆಗೆ ಅಪಾರ ವಿಷಯಗಳನ್ನು ಸಂಗ್ರಹಿಸಿದ್ದಾನೆ. ದಿಗ್ಭ್ರಮೆ ಹುಟ್ಟಿಸುವ ಹೊಸ ದರ್ಶನ ಮಾಡಿಸಿಕೊಟ್ಟಿದ್ದಾನೆ. ಫ್ರೇಜರ ಕಂಡುಕೊಂಡ ಸಂಪ್ರದಾಯ ಮತ್ತು ನಂಬಿಕೆಗಳಿಗೆ ಸಂಬಂಧಿಸಿದ ನಾಗರಿಕ ಸಮಾಜದ ಸಾಂಸ್ಕೃತಿಕ ಜಗತ್ತು ಆದಿಮ ಜನರ ನಂಬಿಕೆ ಮತ್ತು ಆಚರಣೆಗಳ ಜೊತೆ ಅನೇಕ ಬಗೆಯಲ್ಲಿ ಹೋಲಿಕೆಯುಳ್ಳದಾಗಿರುತ್ತದೆ.

## ಮಾನವ ವಿಜ್ಞಾನದ ಪ್ರವರ್ತಕ

ಜಗತ್ತಿನ ಮೂಲೆ ಮೂಲೆಗಳಲ್ಲಿ ಪ್ರತ್ಯೇಕವಾಗಿ ಉಳಿದಿದ್ದ ಸಂಪ್ರದಾಯ ವಿಜ್ಞಾನಗಳ, ಮತ್ತಿತರ ಅನುಭವಗಳ ಒಂದು ಕ್ರೋಢೀಕರಣ ಆರಂಭದಲ್ಲಿ ಚಿಕ್ಕ ಸ್ವರೂಪದಲ್ಲಿದ್ದರೂ ಮುಂದೆ ಭೂಮವಾಗಿ ಬೆಳೆದು ಮಾನವ ವಿಜ್ಞಾನದ ಒಂದು ಹೊಸ ಬೆಳವಣಿಗೆಗೆ ಪ್ರೇರಣೆ ನೀಡುವ ಕೆಲಸ ಫ್ರೇಜರನಿಂದಾಗಿದೆ. ಆತ ಬಳಸಿಕೊಂಡಿರುವ ಭಾಷೆ, ಅರ್ಥಮಾಡಿ

ಕೊಡುವಲ್ಲಿಯೂ, ಶೈಲಿಯ ದೃಷ್ಟಿಯಲ್ಲಿಯೂ ನಾಜೂಕಾದುದು. ಸೊಗಸಾದುದು. ಮಾನವ ವಿಜ್ಞಾನದ ಪ್ರವರ್ತಕ ಎನ್ನುವ ಕೀರ್ತಿ ಫ್ರೇಜರನಿಗೆ ಸಿಕ್ಕಿದೆ. ಅನಾಗರಿಕ ಜನರಿಂದ ಹಾಗೂ ಆದಿಮ ಜನರ ಸಮುದಾಯಗಳ ಅಧ್ಯಯನ ನಮ್ಮ ಸಮಾಜದ ಮೇಲೆ ಹೊಸ ಬೆಳಕನ್ನು ಬೀರಬಲ್ಲುದು ಎನ್ನುವುದೇ ಫ್ರೆಜರನ ಈ ಅಧ್ಯಯನದ ಸಂದೇಶ ಮತ್ತು ಒಂದು ಕ್ರಾಂತಿಕಾರಕ ಹೆಜ್ಜೆ ಕೂಡ. ಅನ್ಯ ಸಂಸ್ಕೃತಿಗಳ ಕುರಿತು ಆತ ತನ್ನ ಸ್ಪಷ್ಟ ನಿಲುವುಗಳನ್ನು ಇಲ್ಲಿ ಮುಂದಿಟ್ಟಿದ್ದಾನೆ. ತನ್ನ ಸಂಸ್ಕೃತಿಯಿಂದ ಹೊರನಿಂತು ಅವನು ಇತರ ಸಂಸ್ಕೃತಿಗಳನ್ನು ಗಂಭೀರವಾಗಿ ಅಧ್ಯಯನ ನಡೆಸಿದ್ದಾನೆ. ಆದರೆ ಈ ಗುರಿಯನ್ನು ಅವನು ಪೂರ್ಣವಾಗಿ ಮುಟ್ಟದಿರಬಹುದು. ಕೆಲವೊಮ್ಮೆ ಸೋತಿರಲೂಬಹುದು. ಕೆಲವು ಸಂಸ್ಕೃತಿಗಳಲ್ಲಿ ರೂಢಮೂಲವಾಗಿ ಬಂದಿರುವ ಆದರೆ ಆಧಾರವಿಲ್ಲದ ನಂಬಿಕೆಗಳನ್ನು ಅರ್ಥಮಾಡಿಕೊಳ್ಳಲು ಎದುರಾಗುವ ಸಮಸ್ಯೆಗಳಲ್ಲಿ ಫ್ರೇಜರ ನಮಗೆ ನೆರವಾಗುತ್ತಾನೆ. ಒಂದು ಸಂಸ್ಕೃತಿಯಲ್ಲಿ ಶ್ರೇಷ್ಠ ಅಥವಾ ಪವಿತ್ರ ಎನ್ನಬಹುದಾದ ಆಚರಣೆಯೊಂದು ಇನ್ನೊಂದು ಸಂಸ್ಕೃತಿಗೆ ಕೀಳು ಅಥವಾ ಹೇಯವಾಗಿ ತೋರಬಹುದು. ಫ್ರೇಜರನ ಅಧ್ಯಯನದ ನೆರವು ಇಲ್ಲೇ ನಮಗೆ ಮುಖ್ಯವೆನಿಸುವುದು.

## ಸಂಪ್ರದಾಯಗಳ ವಿಶ್ವಕೋಶ

ಸಂಶೋಧನೆಗೆ ಸಂಬಂಧಿಸಿ ಚರ್ಚಿಸುವುದಿದ್ದರೂ ಒಂದು ಚಾರಿತ್ರಿಕ ದಾಖಲೆಯ ನಿರ್ಮಾಣ ಫ್ರೇಜರನಿಂದಾಗಿದೆ. ಜನಪದ ಪರಂಪರೆ, ನಂಬಿಕೆ, ಆಚರಣೆಗಳ ಸಂಪ್ರದಾಯಗಳ ಒಂದು ವಿಶ್ವಕೋಶ 'ಗೋಲ್ಡನ್ ಬೋ' ಎನ್ನುವುದರಲ್ಲಿ ಎರಡು ಮಾತಿಲ್ಲ. ಅದು ಜ್ಞಾನದ ಹೊಸ ಮುಖವನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಿದೆ. ಅರಿವಿನ ನಕಾಶೆಯನ್ನು ವಿಸ್ತರಿಸುವ ಕೆಲಸವನ್ನು ನಿರ್ವಹಿಸಿದೆ. ಬೆಳಕಿಗೆ ಬಾರದ ಜ್ಞಾನದ ಹಲವು ಕ್ಷೇತ್ರಗಳ ಮೇಲೆ ಬೆಳಕು ಹಾಯಿಸಿದೆ ಮತ್ತು ಆ ಮೂಲಕ ಜಗತ್ತಿನ ಕಣ್ಣು ತೆರೆಸಿದೆ. ವಿಶಿಷ್ಟ ಸಾಂಸ್ಕೃತಿಕ ಪ್ರಪಂಚದ ಪರಿಚಯ ಮಾಡಿಕೊಟ್ಟಿರುವ ಉತ್ಕೃಷ್ಟ ಕೃತಿ ಎಂಬುದರಿಂದಲೂ ಇದು ಮುಖ್ಯವಾಗುತ್ತದೆ.

ಗೋಲ್ಡನ್ ಬೋ ಪ್ರಧಾನವಾಗಿ ಪ್ರಭಾವ ಬೀರಿರುವುದು ಮಾನವ ವಿಜ್ಞಾನ

ಮತ್ತು ಜನಪದ ಕ್ಷೇತ್ರಗಳ ಮೇಲೆ. ಒಂದು ಕಾಲದ ಒಂದು ಸಂಸ್ಕೃತಿಯ ವಿಚಾರಗಳು ಮತ್ತು ಕಾರ್ಯಕಾರಣ ನಂಬಿಕೆಗಳು, ಭ್ರಮೆಗಳು ಇಂದು ಇನ್ನೊಂದು ಸಂಸ್ಕೃತಿಗೆ ಅದು ಸಮಕಾಲೀನ ಬದುಕಿಗೆ ಮೂಢನಂಬಿಕೆಗಳಾಗಿ ಕಾಣಿಸಿಕೊಳ್ಳಬಹುದು. ಆದರೆ ಫ್ರೇಜರ ಅನಾಗರಿಕ ಜನರ ಅಧ್ಯಯನಗಳಿಂದ ನಮ್ಮ ಬದುಕಿನ ಮೇಲೆ ಸಾಕಷ್ಟು ಬೆಳಕು ಬೀರುತ್ತದೆ. ಎನ್ನುವುದನ್ನು ಸಾಕ್ಷಿ ದಾಖಲೆಗಳಿಂದ ಈ ಕೃತಿಯ ಮೂಲಕ ಮುಂದಿರಿಸಿದ್ದಾನೆ. ಹಾಗಾಗಿಯೇ ಈ ಕೃತಿ ಪ್ರಕಟವಾಗಿ ಬಂದಾಗ ಅನೇಕ ಸಮಕಾಲೀನ ವಿದ್ವಾಂಸರ, ಆಧುನಿಕ ಚಿಂತಕರ ಗಮನ ಸೆಳೆಯಿತು ಮತ್ತು ಅವರ ಚಿಂತನ ಕ್ರಮವನ್ನೇ ಬದಲಿಸುವ ಸಾಮರ್ಥ್ಯ ಪಡೆಯಿತು.

## ಫ್ರೇಜರನ ಉದ್ದೇಶ - ಸಮಸ್ಯೆಗಳ ಪರಿಹಾರ

ಧರ್ಮ ಮತ್ತು ಪುರಾಣ, ನಂಬಿಕೆ ಮತ್ತು ಮಾಟ ಇವುಗಳ ಸುತ್ತ ಹೆಣೆದಿದ್ದ ಅನೇಕ ಸಂಪ್ರದಾಯಗಳು ಫ್ರೇಜರನ ಗಮನ ಸೆಳೆದಿದ್ದುವು. ಅವುಗಳಲ್ಲಿ ಡಯಾನ ದೇವತೆಯ ಪೂಜಾರಿಯ ಅಧಿಕಾರ ಸ್ಥಾನದ ಹಿಂದಿದ್ದ ವಿಲಕ್ಷಣ ಪದ್ಧತಿಯೊಂದು ಫ್ರೇಜರನಿಗೆ ಬಹಳಷ್ಟು ಮಹತ್ವದ ಸವಾಲಾಗಿ ಕಂಡಿತು. ಈ ಸಂಪ್ರದಾಯದ ವಿಶ್ಲೇಷಣೆಯಲ್ಲಿ ಆತ ಅನುಸರಿಸಿದ ವೈಜ್ಞಾನಿಕ ವಿಧಾನಗಳು ಧರ್ಮ ಮತ್ತು ಪವಾಡಗಳ ವಿಶ್ವರೂಪ ದರ್ಶನವನ್ನೇ ಮಾಡಿಕೊಟ್ಟವು. ನೆಮಿ ಸರೋವರದ ತೋಪಿನಮರದ ಬಂದನಿಕೆಯ ಬಗೆಗೆ ಕುತೂಹಲ ಕೆರಳಿಸಿಕೊಳ್ಳುತ್ತಲೇ ಹೋದಾಗ ಅನೇಕ ಸಮಸ್ಯೆಗಳು ಮುಂದಾದವು. ಈ ಸಮಸ್ಯೆಗಳನ್ನು ಬಿಡಿಸುವುದೇ ಫ್ರೇಜರನ ಪ್ರಧಾನ ಉದ್ದೇಶವಾಯಿತು.

ಡಯಾನ ದೇವತೆಯ ಪೂಜಾರಿಯಾಗ ಬಯಸಿದಾತ ಅಧಿಕಾರದಲ್ಲಿದ್ದ ಪೂಜಾರಿಯನ್ನು ಕೊಂದೇ ಏಕೆ ಆ ಸ್ಥಾನ ಪಡೆಯಬೇಕು? ಇದು ಈ ಸಮಸ್ಯೆಗಳಲ್ಲಿ ಮೊದಲನೆಯದು ಮತ್ತು ಮುಖ್ಯವಾದುದು. ಹೀಗೆ ಪೂಜಾರಿಯನ್ನು ಕೊಲ್ಲುವ ಮೊದಲು ಆ ತೋಪಿನ ಮರವೊಂದರ ಮೇಲೆ ಬೆಳೆಯುತ್ತಿದ್ದ ಕೊಂಬೆಯನ್ನೇಕೆ ಕತ್ತರಿಸಬೇಕು? ಇದು ಮತ್ತೊಂದು ಮಹತ್ವದ ಪ್ರಶ್ನೆ. ಐತಿಹ್ಯಗಳು ಹಾಗೂ ಪುರಾಣಗಳು ವಿವರಿಸುವಂತೆ ವರ್ಜಿಲನ ಏನಿಡ್ ಮಹಾಕಾವ್ಯದ ನಾಯಕ ಏನಿಡನು ಪಾತಾಳಲೋಕಕ್ಕೆ ಹೋಗುವ

ಮೊದಲು ಹಿಡಿದ ವಿಶಿಷ್ಟ ಚಿನ್ನದ ರೆಂಬೆ (ಗೋಲ್ಡನ್ ಬೋ) ಮತ್ತು ಡಯಾನ ದೇವತೆಯ ತೋಪಿನ ಮರದಲ್ಲಿದ್ದ ಕೊಂಬೆ ಇವೆರಡೂ ಒಂದೇ ಎಂದಾದರೆ ಯಾವ ಕಾರಣಗಳಿಗಾಗಿ? ಎನ್ನುವುದು ಮುಂದಿನ ಪ್ರಶ್ನೆ. ಡಯಾನಾ ದೇವತೆಯ ಪೂಜಾರಿಯನ್ನು 'ಕಾಡಿನ ರಾಜ' (ಕಿಂಗ್ ಆಫ್ ದಿ ವುಡ್) ಎಂದು ಕರೆಯಲು ಕಾರಣವೇನು?

ಈ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನವನ್ನು ಫ್ರೇಜರ್ ಮುಂದುವರಿಸದೆ ಉಳಿಯಲಿಲ್ಲ. ಆದರೆ ತೊಡಕೆಂದರೆ ಈ ಸಮಸ್ಯೆಗಳಿಗೆ ಪರಿಹಾರ ಹುಡುಕುವಲ್ಲೆಲ್ಲ ಮತ್ತೆ ಅನೇಕ ಹೊಸ ಸಮಸ್ಯೆಗಳು ಎದುರಾದುವು. ಅವುಗಳಿಗೆ ಉತ್ತರ ಕಂಡುಕೊಳ್ಳದೆ ಮುಂದುವರಿಯುವ ಹಾಗಿರಲಿಲ್ಲ. ಆಗೆಲ್ಲ ಅವುಗಳಿಗೆ ಪೂರಕವಾದ ಅನೇಕ ವಿಚಾರಗಳು ಮುಖ್ಯವಾದುವು. ಧರ್ಮ, ಪವಾಡ, ವಿಧಿನಿಷೇಧಗಳು, ಫಲವಂತಿಕೆಯ ಆಚರಣೆಗಳು, ಮಾಂತ್ರಿಕತೆ, ಪ್ರಾಚೀನ ಕಾಲದ ರಾಜತ್ವದ ಉಗಮ ಮತ್ತು ವಿಕಾಸ ಹೀಗೆ ಒಂದೊಂದು ಅಂಶವೂ ಅರ್ಥವಿವರಣೆಗಳನ್ನು ಬೇಡಿದುವು. ಇಂತಹ ವಿವರಣೆಗಳೇ, ಉದಾಹರಣೆಗಳೇ ಸಂಪುಟಗಳನ್ನು ಹುಟ್ಟುಹಾಕಿದುವು.

ಮಾಟವಿದ್ಯೆ (Magic art) ಅಥವಾ ಪವಾಡಕಲೆಯ ಕುರಿತು ಫ್ರೇಜರ ತನ್ನ ಗೋಲ್ಡನ್ ಬೋ ಕೃತಿಯಲ್ಲಿ ಮಹತ್ವಪೂರ್ಣ ವ್ಯಾಖ್ಯಾನಗಳನ್ನು ಕೊಟ್ಟಿರುತ್ತಾನೆ. ಮಾಟ ಮಂತ್ರವಿದ್ಯೆಗಳ ಕುರಿತ ಫ್ರೇಜರನ ಸಮರ್ಥನೆ ಪ್ರತಿಪಾದನೆಗಳನ್ನು ಆಧುನಿಕ ವಿದ್ವಾಂಸರು ಒಪ್ಪುವುದು ಕಷ್ಟವಾಗಿತ್ತಾದರೂ ಮಾಂತ್ರಿಕತೆಯ ಕುರಿತ ಕೆಲವು ಒಳನೋಟಗಳನ್ನು ಯಾರೂ ಅಲ್ಲಗಳೆಯುವುದಕ್ಕಾಗಲಿಲ್ಲ.

ವಿವಿಧ ದೇಶಗಳಲ್ಲಿ ಆದಿಮ ಜನರು ಅನುಸರಿಸುತ್ತಿದ್ದ ಪ್ರಕೃತಿಯನ್ನೂ ಭೂತ ಪ್ರೇತಾದಿಗಳನ್ನೂ ರಹಸ್ಯರೀತಿಯಲ್ಲಿ ಅಧೀನದಲ್ಲಿಟ್ಟುಕೊಂಡು ಘಟನೆಗಳ ಗತಿಯನು ಮಾರ್ಪಡಿಸಬಹುದೆಂಬ ಮಿಥ್ಯಾಭಿಪ್ರಾಯವುಳ್ಳ ವಿದ್ಯೆಯಾದ ಮಾಟಕಲೆಯ ವಿಧಾನಗಳನ್ನೆಲ್ಲ ಫ್ರೇಜರ ಆಮೂಲಾಗ್ರವಾಗಿ ಅಧ್ಯಯನ ಮಾಡಿರುತ್ತಾನೆ. ಮಾಟಕಲೆಯಲ್ಲಿ ಎರಡು ಪ್ರಭೇದಗಳನ್ನು ಗುರುತಿಸಿರುತ್ತಾನೆ. ಒಂದು ಸದೃಶ ಕ್ರಿಯಾ ಮಾಟಕಲೆ(Homeopathic Magic), ಇನ್ನೊಂದು ಸೋಂಕು ಕ್ರಿಯಾಮಾಟಕಲೆ (Contagious Magic). ಒಂದೊಂದರಲ್ಲಿ ಒಂದೊಂದು ತತ್ವವಿದೆ.

## ಸದೃಶಕ್ರಿಯಾ ಮಾಟಕಲೆ (Homeopathic Magic)

ಮಾಟಕ್ರಿಯೆಯಲ್ಲಿ ಮಾಡಿದ ಕೆಲಸದ ಪರಿಣಾಮ ಉದ್ದೇಶಿತ ವಸ್ತುವಿನ ಮೇಲೆ ಉಂಟಾಗುತ್ತದೆ. (like producers like) ಎನ್ನುವುದೇ ಸದೃಶಕ್ರಿಯಾ ಮಾಟಕಲೆಯ ತತ್ವ. ಒಬ್ಬ ವ್ಯಕ್ತಿಗೆ ಕೇಡು ಮಾಡಬೇಕಾದರೆ ಆತನ ಒಂದು ಪ್ರತಿಕೃತಿ (ಬೊಂಬೆ) ಮಾಡಿ ಅದಕ್ಕೆ ಮುಳ್ಳುಗಳಿಂದ ಚುಚ್ಚಿದರೆ ಉದ್ದೇಶಿತ ವ್ಯಕ್ತಿಗೆ ಮುಳ್ಳು ಚುಚ್ಚಿದಾಗ ಆಗುವ ಪರಿಣಾಮವೇ ಉಂಟಾಗುವುದು. ಬಹುಶಃ ಈ ಉದ್ದೇಶದಿಂದಲೇ ತಮಗೆ ವಿರೋಧಮಾಡುವ ರಾಜಕೀಯ ಮುಖಂಡರದೋ, ಮಂತ್ರಿಗಳದೋ, ಅಧಿಕಾರಿಗಳದೋ ಪ್ರತಿಕೃತಿ ದಹನಮಾಡುವ ಪದ್ಧತಿ ಇನ್ನೂ ಉಳಿದುಬಂದಿರುವುದು.

## ಸಂಪರ್ಕ (ಸೋಂಕು) ಕ್ರಿಯಾಮಾಟಕಲೆ (Contagious magic)

ವ್ಯಕ್ತಿಯ ಸಂಪರ್ಕದಲ್ಲಿದ್ದು ಅನಂತರ ಅವನಿಂದ ಪ್ರತ್ಯೇಕವಾದ ವಸ್ತುವಿನ ಮೇಲೆ ಮಾಟ ಮಾಡಿದಾಗ ಅದರಿಂದ ಉದ್ದೇ ಶಿತ ವ್ಯಕ್ತಿಯ ಪರಿಣಾಮ ಉಂಟಾಗುತ್ತದೆ ಎಂಬ ನಂಬಿಕೆಯ ಮೇಲೆ ಈ ಮಾಟಕಲೆ ರೂಪುಗೊಂಡಿದೆ. ವ್ಯಕ್ತಿಯೊಬ್ಬನ ಉಗುರು, ಕೂದಲು, ಉಗುಳು ಮೊದಲಾದುವನ್ನು ಬಳಸಿಕೊಂಡು ಮಾಟಮಾಡಬಹುದು ಅಥವಾ ವ್ಯಕ್ತಿಯೊಬ್ಬ ಉಟ್ಟು ಇಟ್ಟ ಬಟ್ಟೆಯ ಮೇಲೆ ಮಾಟಮಾಡಿ ಆ ವ್ಯಕ್ತಿಗೆ ಕೇಡು ಮಾಡಬಹುದು. ಹೀಗೆ ಮಾಟಕಲೆ ಸಾದೃಶ್ಯಸೂತ್ರ (Law of similarity) ಮತ್ತು ಸಂಪರ್ಕ ಸೂತ್ರ (Law of contagion)ಗಳನ್ನೊಳಗೊಂಡಿದೆ.

ಕ್ರಿಯೆಯ ಉದ್ದೇಶದ ದೃಷ್ಟಿಯಲ್ಲಿ ಮಾಟಕಲೆಯಲ್ಲಿ ಫ್ರೇಜರ ಮೂರು ವಿಧಗಳನ್ನು ಗುರುತಿಸಿದ್ದಾನೆ. 1. ಶುದ್ಧಮಾಟ (White magic) 2. ದುಷ್ಟಮಾಟ (Black magic) 3. ಉತ್ಪಾದಕಾಮಟ (Productive magic).

**ಶುದ್ಧಮಾಟ (White magic)**

ಒಳ್ಳೆಯ ಉದ್ದೇಶಗಳಿಗಾಗಿ ಮಾಡುವ ಮಾಟ. ಈ ದ್ದೇಶಗಳ ಸಾಧನೆಗಾಗಿ ಶಿಷ್ಟ

ಶಕ್ತಿಗಳನ್ನು ಒಲಿಸಿಕೊಂಡು ಮುಂದುವರಿಯಲಾಗುವುದು.

ದುಷ್ಟಮಾಟ (Black magic)

ಕೆಟ್ಟ ಉದ್ದೇಶಗಳಿಗೆ ಸಂಬಂಧಿಸಿ ಮಾಡುವ ವಾಮಾಚಾರದ ಮಾಟ. ಈ ಉದ್ದೇಶ ಸಾಧನೆಗಾಗಿ ದುಷ್ಟಶಕ್ತಿಗಳನ್ನು ಒಲಿಸಿಕೊಂಡು ಮುಂದುವರಿಯಲಾಗುವುದು.

ಉತ್ಪಾದಕ ಮಾಟ (Productive magic)

ಫಲ ಸಮೃದ್ಧಿಯ ಉದ್ದೇಶದಿಂದ ಫಲಶಕ್ತಿಯನ್ನು ಹೆಚ್ಚಿಸಲು ಮಾಡುವ ಮಾಟ.

ಮಾಟಮಾಡುವ ವಿಧಾನಕ್ಕೆ ಸಂಬಂಧಿಸಿದಂತೆ ಮಾಟವನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. 1. ವಿಧ್ಯರ್ಥಕ ಮಾಟ (Positive magic) 2. ನಿಷೇಧಾರ್ಥಕ ಮಾಟ (Negative magic)

1. ವಿಧ್ಯರ್ಥಕ ಮಾಟ (Positive magic)

ಉದ್ದೇಶಿತ ಗುರಿಸಾಧನೆಗಾಗಿ ಇಂತಹ ಕ್ರಿಯಾಕರ್ಮಗಳನ್ನು ಅನುಸರಿಸು ಎನ್ನುವ ಮಾರ್ಗದರ್ಶನ ದೊರೆಯುವುದಿದ್ದರೆ ಅದು ವಿಧ್ಯರ್ಥಕ ಮಾಟ. ವಿಧ್ಯರ್ಥಕ ನಿಯಮಗಳನ್ನೇ ಮಂತ್ರಗಳೆನ್ನುವುದು.

2. ನಿಷೇಧಾರ್ಥಕ ಮಾಟ (Negative magic)

ಅನಿಷ್ಟ ಪರಿಣಾಮ ಸಂಭವಿಸದಂತೆ ತಡೆಗಟ್ಟಲು ಇಂತಹ ಕೆಲಸಗಳನ್ನು ಮಾಡಬೇಡ ಎಂದು ನಿರ್ದೇಶಿಸುವುದಿದ್ದರೆ ಅದು ನಿಷೇಧಾರ್ಥಕ ಮಾಟವಾಗುವುದು. ನಿಷೇಧಾರ್ಥಕ ನಿಯಮಗಳೇ ನಿಷಿದ್ಧಗಳು ಅಥವಾ ವಿಧಿ ನಿಷೇಧಗಳು.

ದೂರಮನೋದರ್ಶನ(Telepathy)ವನ್ನು ಮತ್ತು ಅದರ ಇರುವಿಕೆಯನ್ನು ಒಪ್ಪಿಕೊಳ್ಳುವುದು ಮಾಟಬಿದ್ಯೆಯ ಮೂಲತತ್ವವಾಗಿದೆ. ತತ್ವಕ್ಕಿಂತಲೂ ಬದುಕಿನ ವ್ಯವಹಾರಗಳ ಪ್ರಾಯೋಗಿಕ ನೆಲೆಗಳಲ್ಲಿ ಅದು ಬಳಕೆಯಾಗುತ್ತಿತ್ತು. ಆದಿಮ ಜನರಲ್ಲಿ ಈ ವಿದ್ಯೆ ವ್ಯಾಪಕವಾಗಿ ಮಹತ್ವ ಪಡೆದಿತ್ತು.

## ಸಾರ್ವಜನಿಕ ಮಾಟಗಾರರು

ಆದಿಮ ಕಾಲದ ಜನರ ಬದುಕಿನಲ್ಲಿ ಮಾಟದ ಬಳಕೆ ತೀರ ಸಾಮಾನ್ಯವಾಗಿತ್ತು. ಗುಡುಗು, ಸಿಡಿಲು, ಮಿಂಚು, ಮಳೆ, ಬಿರುಗಾಳಿ, ಮೊದಲಾದ ನಿಸರ್ಗದ ಶಕ್ತಿಗಳನ್ನು ನಿಯಂತ್ರಿಸಲು ಅವರು ವಿವಿಧ ಬಗೆಯ ಮಾಟಗಳನ್ನು ಮಾಡುತ್ತಲೇ ಬಂದವರು. ಕೌಟುಂಬಿಕ ನೆಲೆಗಳಲ್ಲಿ ಮತ್ತು ಸಾರ್ವಜನಿಕ ನೆಲೆಗಳಲ್ಲಿ ಇವುಗಳ ಬಳಕೆಯಿತ್ತು. ಆದರೆ ಕೌಟುಂಬಿಕ ನೆಲೆಗಿಂತಲೂ ಸಾರ್ವಜನಿಕ ನೆಲೆಗಳಲ್ಲಿ ಮಾಟಗಳು ವ್ಯಾಪಕವಾಗಿ ಬಳಕೆಯಲ್ಲಿದ್ದುವು. ಮೇಲಾಗಿ ಅವು ಸಾರ್ವಜನಿಕ ಹಿತದೃಷ್ಟಿಯ ಉದ್ದೇಶವನ್ನು ಹೊಂದಿದ್ದುವು. ಈ ಕಾರಣದಿಂದಲೇ ಇಂತಹ ಮಾಟ ಸಾರ್ವಜನಿಕ ಮಾಟ (Public magic)ವೆನಿಸಿಕೊಂಡಿತ್ತು. ಇದರ ನಿರ್ವಹಣೆಗಾಗಿ ಸಾರ್ವಜನಿಕ ಮಾಟಗಾರರು (Public magicians) ಇರುತ್ತಿದ್ದರು. ಸಮಾಜದಲ್ಲಿ ಅವರಿಗೆ ಬಹು ಬೇಡಿಕೆಯೂ ಇರುತ್ತಿತ್ತು. ಹಾಗಾಗಿ ಮಾಟಗಾರನೊಬ್ಬ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯೂ ಆಗಿರುತ್ತಿದ್ದ. ಮಾಟಗಾರನೊಬ್ಬನಿಗೆ ಸಮಾಜದ ಜನರ ನೇರ ಸಂಬಂಧದ ಸಂರಚನೆಯ ಸ್ವರೂಪವನ್ನೇ ಆಧಾರವಾಗಿಟ್ಟುಕೊಂಡು ಫ್ರೇಜರ ಆದಿಮ ಜನರಲ್ಲಿ ರಾಜತ್ವದ ಕಲ್ಪನೆ ಹೇಗೆ ಬೆಳೆದು ಬಂತೆಂಬುದನ್ನು ಪ್ರತಿಪಾದಿಸಿದ್ದಾನೆ.

## ಕಾಡಿನ ರಾಜ

ಮಾಟಕ್ಕೆ ಸಂಬಂಧಿಸಿ ಮಾಂತ್ರಿಕ ನಡೆಸುತ್ತಿದ್ದ ಕೆಲವು ಆಚರಣೆಗಳು ಜನಪದ ಬದುಕಿನಲ್ಲಿ ಮಹತ್ವಪಡೆದುಕೊಂಡಂತೆಲ್ಲ ಕ್ರಮೇಣ ಮಾಟಕ್ಕೆ ಧಾರ್ಮಿಕ ಪರಿಕಲ್ಪನೆಯ ಆವರಣ ಸಿಕ್ಕಿತು. ಆಗ ಮಾಟವೇ ಧರ್ಮವಾಗಿ ಪರಿವರ್ತನೆಗೊಂಡು ಮಾಂತ್ರಿಕನ ಕಾರ್ಯವನ್ನು ನಿರ್ವಹಿಸುವವನಿಗೆ ಪಾದ್ರಿ ಅಥವಾ ಅರ್ಚಕ (Priest) ಎನ್ನುವ ಸ್ಥಾನ ಸಿಕ್ಕಿತು. ಆತನಿಗೆ ಮಾಂತ್ರಿಕತೆ ಮತ್ತು ಪೌರೋಹಿತ್ಯ ಎರಡೂ ಕೆಲಸಗಳು ತಿಳಿದಿದ್ದುವು. ಇಂತಹ ಮಾಂತ್ರಿಕ - ಪಾದ್ರಿ ಜನರ ಮೇಲೆ ಸಹಜವಾಗಿಯೇ ತನ್ನ ವರ್ಚಸ್ಸು ಬೀರತೊಡಗಿದ. ಈ ವರ್ಚಸ್ಸಿನಿಂದಾಗಿ ಆತ ಸಮಾಜದಲ್ಲಿ ಅತ್ಯಂತ ಮೇಲ್ಮಟ್ಟದ ಪದವಿಯಾದ ರಾಜತ್ವವನ್ನು ಪಡೆದ. ಹೀಗಾಗಿ ಮಾಂತ್ರಿಕ - ಅರ್ಚಕ - ರಾಜ ಮೂವರ

ಅಧಿಕಾರವೂ ಒಬ್ಬನಲ್ಲಿಯೇ ಕೇಂದ್ರೀಕೃತವಾಯಿತು. ಪ್ರಕೃತಿಯ ವಿವಿಧ ಶಕ್ತಿಗಳನ್ನು ನಿಯಂತ್ರಿಸಲು ಮಾಡಲಾಗುತ್ತಿದ್ದ ಮಾಟ, ದೇವತೆಗಳನ್ನು ಪೂಜಿಸಿ ಸಮಾಜಕಲ್ಯಾಣಕ್ಕಾಗಿ ಒಲಿಸಿಕೊಳ್ಳುತ್ತಿದ್ದ ಕಾರ್ಯ ಇವು ರಾಜನ ಪ್ರಮುಖ ಕರ್ತವ್ಯಗಳೆನಿಸಿಕೊಂಡಿದ್ದು ಮುಂದೆ 'ರಾಜಾ ಪ್ರತ್ಯಕ್ಷದೇವತಾಃ' ಎನ್ನುವಂತೆ ಪೂಜಾರ್ಹನೆನಿಸಿಕೊಂಡನು. ಅರಿಕಿಯಾದ ಪಾದ್ರಿಗೆ 'ಕಾಡಿನ ರಾಜ' (King of the Wood) ಎಂಬ ಹೆಸರು ಈ ಹಿನ್ನೆಲೆಯಲ್ಲಿ ಬಂದಿರಬಹುದು ಎಂಬುದನ್ನು ಫ್ರೇಜರ್ ಚರ್ಚಿಸಿರುತ್ತಾನೆ. ಈ ದೃಷ್ಟಿಯಲ್ಲಿ ಮಾಟ ಮತ್ತು ಧರ್ಮ ಇವುಗಳ ಅರ್ಥವ್ಯತ್ಯಾಸದ ಫ್ರೇಜರ್ ಕಲ್ಪನೆಗಳು ನಮಗೆ ಬಹಳಷ್ಟು ಮುಖ್ಯವಾಗುತ್ತವೆ. ಆ ನಂತರದ ಸಾಂಸ್ಕೃತಿಕ ಮಾನವಶಾಸ್ತ್ರಜ್ಞರು ನಡೆಸಿರುವ ಈ ಸಂಬಂಧವಾದ ಎಲ್ಲ ಚರ್ಚೆಗಳೂ ಫ್ರೇಜರನ ವಾದದ ಮೂಲ ನೆಲೆಯಲ್ಲಿಯೇ ನಡೆದಿದೆ. ಮಾಟದ ತತ್ವದಂತೆ ಮಾನವ ಪ್ರಕೃತಿಯ ಶಕ್ತಿಗಳನ್ನು ನಿಯಂತ್ರಿಸಿ ತನ್ನ ಉದ್ದೇಶಗಳನ್ನು ಸಾಧಿಸಬಲ್ಲ. ಧರ್ಮದ ತತ್ವದ ಪರಿಕಲ್ಪನೆ ಇದಕ್ಕಿಂತ ಭಿನ್ನವಾದುದು. ಪ್ರಕೃತಿಯ ಶಕ್ತಿಯೆನ್ನುವುದು ಎಲ್ಲಕ್ಕಿಂತಲೂ ಮಿಗಿಲಾದುದು. ಮಾನವ ನಿಯಂತ್ರಣವನ್ನು ಅದು ಮೀರಿ ನಿಲ್ಲುತ್ತದೆ. ಅಂತಹ ಶಕ್ತಿಯನ್ನು ಭಕ್ತಿ ಶ್ರದ್ಧೆಗಳಿಂದ ಒಲಿಸಿಕೊಳ್ಳಬೇಕಾಗುತ್ತದೆ. ಮಾಟದ ಯುಗ ಮತ್ತು ಧರ್ಮದ ಯುಗ ಇವು ಒಂದರ ಅನಂತರ ಒಂದು ಬೆಳೆದು ಬಂದುವುಗಳು. ಪ್ರಕೃತಿಯ ರಹಸ್ಯವನ್ನು ಪತ್ತೆಹಚ್ಚಿ ಮಾನವಕುಲಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶ ಮಾಟದ ಬಹುಮುಖ್ಯ ಕಾರ್ಯಗಳಲ್ಲಿ ಒಂದಾಗಿತ್ತು. ಆಧುನಿಕ ಪರಿಕಲ್ಪನೆಯ ವಿಜ್ಞಾನದ ಉದ್ದೇಶವೂ ಇದೇ ಆಗಿದೆ. ಫ್ರೇಜರನ ಪ್ರಕಾರ ಮಾಟ ಮತ್ತು ವಿಜ್ಞಾನ ಧರ್ಮದ ಎರಡು ಕೊನೆಗಳು ಮತ್ತು ಮಿತಿಗಳೂ ಹೌದು. ಅವುಗಳ ಗುರಿ ಸಾಧನೆಗಳಲ್ಲಿ ಸಾಮ್ಯತೆಯಿದೆಯಾದರೂ ಅವೆರಡೂ ಪರಸ್ಪರ ವಿರುದ್ಧ ಮುಖ ಗಳು. ಮಿಥ್ಯಕಲ್ಪನೆಯೇ ನೆಲೆಯಾಗಿರುವ ಮಾಟಕ್ಕೆ ಇಂದು ಅಸ್ತಿತ್ವವಿಲ್ಲ. ಬದಲಾಗಿ ಸತ್ಯ ಕಲ್ಪನೆಯೇ ಆಧಾರ ನೆಲೆಯಾಗಿರುವ ವಿಜ್ಞಾನಕ್ಕೆ ಅಸ್ತಿತ್ವವಿದೆ. ಹೀಗೆ ಮಾಟ - ಧರ್ಮ - ವಿಜ್ಞಾನ ಈ ಅಂಶಗಳನ್ನು ಉದಾಹರಣೆಗಳ ಮೂಲಕ ವಿವರಿಸುವ ಕೆಲಸ ಫ್ರೇಜರನ ಅಧ್ಯಯನದಲ್ಲಿ ಆಗಿದೆ. (ಹೆಚ್ಚಿನ ವಿವರಗಳಿಗೆ ನೋಡಿ : ತೀ.ನಂ. ಶಂಕರನಾರಾಯಣ 1970, 36-96).

## ಪ್ರಜೆಗಳು - ಪಾದ್ರಿ - ರಾಜ

ಜನಸಾಮಾನ್ಯರು (ಪ್ರಜೆಗಳು), ಪುರೋಹಿತರು (ಪಾದ್ರಿ) ಮತ್ತು ರಾಜ ಇವರಿಗಿರುವ ಕಾರ್ಯ ಕರ್ತವ್ಯ ಸಂಬಂಧಗಳು, ಸಾಮಾಜಿಕ ಜವಾಬ್ದಾರಿ, ಸ್ಥಾನ ಮಾನಗಳ ಹಿನ್ನೆಲೆಯಲ್ಲಿ ಹಲವಾರು ನಿಯಮಗಳು, ಕಟ್ಟುಪಾಡುಗಳು ರೂಪುಗೊಂಡುವು. ಈ ಕಟ್ಟುಪಾಡುಗಳು ಪ್ರಜೆಗಳನ್ನು ಮತ್ತು ರಾಜನನ್ನು ಪ್ರತ್ಯೇಕಿಸಿದುವು. ರಾಜನು ಜನಸಾಮಾನ್ಯರ ಜೊತೆ ಬೆರೆಯದಂತೆ, ಸಾಮಾನ್ಯ ಕೆಲಸಗಳನ್ನು ನಿರ್ವಹಿಸದಂತೆ ಕೆಲವು ವಿಧಿ ನಿಷೇಧಗಳೂ ಹುಟ್ಟಿಕೊಂಡು ಪರಂಪರೆಯ ಪದ್ಧತಿಗಳಾಗಿ ಬೆಳೆದುಬಂದುವು. ರಾಜನಾಗಬೇಕಾದವನು ಅನುಸರಿಸಬೇಕಾಗಿದ್ದ ವಿಧಿ ನಿಷೇಧಗಳನ್ನು ಅಧ್ಯಯನ ನಡೆಸಿ ಅವುಗಳು ಆದಿಮ ಜನರಲ್ಲಿ ಯಾವ ಉದ್ದೇಶಕ್ಕಾಗಿ ರೂಪುಗೊಂಡವು ಎಂಬ ಬಗೆಗೆ ಫ್ರೇಜರ ಸಮಗ್ರವಾಗಿ ಅಧ್ಯಯನ ನಡೆಸಿದ್ದುಂಟು. ರಾಜನಿಗೆ ಒದಗಬಹುದಾದ ಆಪತ್ತುಗಳಿಂದ ರಕ್ಷಿಸುವುದೇ ಈ ವಿಧಿ ನಿಷೇಧಗಳ ಮುಖ್ಯ ಉದ್ದೇಶ. ನಿಷಿದ್ಧ ಕ್ರಿಯೆಗಳು (Tabooed acts) ನಿಷಿದ್ಧ ವ್ಯಕ್ತಿಗಳು (Tabooed[4] persons), ನಿಷಿದ್ಧ ವಸ್ತುಗಳು (Tabooed things), ನಿಷಿದ್ಧ ಪದಗಳು (Tabooed words) ಮೊದಲಾದುವುಗಳಿಂದ ರಾಜನನ್ನು ಯಾವಾಗಲೂ ದೂರವಿರಿಸಲಾಗುತ್ತಿತ್ತು.

## ಮರಗಳು ಮತ್ತು ಪೂಜೆ

ನಿಸರ್ಗದ ಶಕ್ತಿಗಳನ್ನು ಪೂಜಿಸುವುದು ಮತ್ತು ಆ ಶಕ್ತಿಗಳನ್ನು ಒಲಿಸಿಕೊಳ್ಳಲು ನಡೆಸುವ ಆಚರಣೆಗಳು ಒಂದೆಡೆಯಿದ್ದರೆ ಪ್ರಕೃತಿಯ ಮರಗಳನ್ನು ಪೂಜಿಸುವುದೂ ಇನ್ನೊಂದೆಡೆ ಆದಿಮ ಜನರ ಸಂಪ್ರದಾಯವಾಗಿತ್ತು. ವೃಕ್ಷಾರಾಧನೆ (The Worship of Trees) ಅತ್ಯಂತ ಮಹತ್ವ ಪಡೆದಿತ್ತು. ಮರಗಳನ್ನು ಪೂಜಿಸಿ ಒಲಿಸಿಕೊಂಡರೆ ಅವು ತಮಗೆ ಉಪಕಾರ ಮಾಡುತ್ತವೆ ಎನ್ನುವ ನಂಬಿಕೆಯೂ ಆ ಕಾಲದ್ದು. ಮರಗಳನ್ನು ಕಡಿಯಬೇಕಾಗಿದ್ದಾಗ ಅವುಗಳಿಗೆ ಬಲಿ ಅರ್ಪಿಸಿ ತೃಪ್ತಿ ಪಡಿಸಲಾಗುತ್ತಿತ್ತು. ಮರವೊಂದರಲ್ಲಿ ಹೂವಾಗದಿದ್ದಾಗ ಅದಿನ್ನು ಪುಷ್ಪವತಿಯಾಗಿಲ್ಲವೆಂದು ತಿಳಿದುಕೊಳ್ಳುತ್ತಿದ್ದರು ಮತ್ತು ಪುಷ್ಪವತಿಯಾಗುವಂತೆ ಮರವನ್ನು ಬೆದರಿಸುವ ಗದರಿಸುವ,

ಕೊಡಲಿಯಿಂದ ಏಟು ಕೊಡುವ, ಗಾಯಮಾಡುವ ವಿವಿಧ ವಿಲಕ್ಷಣ ಆಚರಣೆಗಳನ್ನು ಆದಿಮ ಕಾಲದ ಜನರು ಮಾಡುತ್ತಿದ್ದರು.

## ವೃಕ್ಷಾರಾಧನೆಯ ಪಳೆಯುಳಿಕೆ

ಮರಗಳನ್ನು ಪೂಜಿಸುವ ಆಚರಣೆಗಳು ಇಂದೂ ಹಲವೆಡೆಗಳಲ್ಲಿ ಉಳಿದುಕೊಂಡು ಬಂದಿರುವುದನ್ನು ಗಮನಿಬೇಕು. ಆಲಡೆ, ನಾಗಬನಗಳಲ್ಲಿ ವೃಕ್ಷಗಳಿಗೂ ಧಾರ್ಮಿಕ ಸಂಸ್ಕಾರಗಳು ನಡೆಯುತ್ತಿರುವುದನ್ನು ಕಾಣಬಹುದು. ಇದಕ್ಕೆ ಸಮಕಾಲೀನವಾದ ಒಂದು ನಿದರ್ಶನವನ್ನು ಇಲ್ಲಿ ಉಲ್ಲೇಖಿಸಬಹುದು. "ಕೇರಳದ ಕೋಟ್ಟಯಂ ಜಿಲ್ಲೆಯ ಪೂಂಜಾರ್ ಹಳ್ಳಿಯ ಮೀನಾಕ್ಷಿದೇವಾಲಯದ ಮೊಕ್ತೇಸರ ಶ್ರೀ ಕೈಮುಕ್ಕು ಜಾತವೇದನ್ ನಂಬೂದರಿಯವರು ತಮ್ಮ ದೇವಳದ ಬಳಿ ಬಿದ್ದಿರುವ ಹಳೆಯ ಆಲದ ಮರವೊಂದರ ಅಂತ್ಯಕ್ರಿಯೆಯನ್ನು ವೈದಿಕ ರೀತಿಯಲ್ಲಿ ನಡೆಸಿದ್ದಾರೆ. ನೂರಾರು ವರ್ಷ ಹಿಂದಿನ ಮರ ಅದಾಗಿತ್ತು. ವೇದ ಪುರಾಣೇತಿಹಾಸಗಳಲ್ಲೂ ಆಲದ ಮರಕ್ಕೆ 'ದೈವೀ'ಶಕ್ತಿಯನ್ನು ಆರೋಪಿಸಲಾಗಿದೆ. ಅಂತಹ ಮರವೊಂದು ಬಿದ್ದಾಗ ಅದರ ತಲೆ, ಬುಡ, ನಡುಭಾಗದ ಕೆಲವು ಭಾಗಗಳನ್ನು ತೆಗೆದು ಆ 'ದೇವವೃಕ್ಷ'ದ ಅಂತ್ಯಸಂಸ್ಕಾರ ಮಾಡಲಾಯಿತು. ಎಲ್ಲ ಷೋಡಸ ಸಂಸ್ಕಾರಗಳನ್ನು ಮಾಡಿ ವೈದಿಕ ರೀತಿಯಲ್ಲಿ ಗೌರವಿಸಲಾಯಿತು. ಪರಿಸರ ಕಲುಷಿತವಾಗುತ್ತದೆಂದು ಪೂರ್ಣವಾಗಿ ಆ ಮರವನ್ನು ದಹಿಸಲಿಲ್ಲ. ಅ ಮರ ಇನ್ನೂ ಹಾಗೆಯೇ ಇದೆ. ಅದನ್ನುಪಯೋಗಿಸಿದರೆ ಸಂಕಷ್ಟಗಳು ಒಂದೊಂದರಂತೆ ಎದುರಾಗುತ್ತವೆ ಎಂಬ ನಂಬಿಕೆ ಅಲ್ಲಿಯ ಜನರದ್ದು" (ಎಸ್ಸೆನ್ ಭಟ್, ಸೈಪಂಗಲ್ಲು 1997, 2). ಇಂದು ಕದ್ದು ಮರಗಳನ್ನು ಕಡಿದು ಮಾರಾಟಮಾಡುವ ಕಾಡುಗಳ್ಳರೂ ಇದ್ದಾರೆ. 'ಹಸಿರೇ ಉಸಿರು' ಎಂದು ಸಾರುವ ಪರಿಸರವಾದಿಗಳೂ ಇದ್ದಾರೆ.

## ಮರಗಳ ಮದುವೆ ಮತ್ತು ಲೈಂಗಿಕತೆ

ಮರಗಳಲ್ಲಿ ಗಂಡು ಹೆಣ್ಣುಗಳಿವೆ ಎಂಬುದನ್ನು ಜನಪದರು ಬಹು ಹಿಂದೆಯೇ ತಿಳಿದವರು ಅವುಗಳಿಗೂ ಮದುವೆ ಮಾಡಿಸುವ ಆಚರಣೆಗಳಿವೆ ಮರಗಳ ಹಾಗೂ

ಬೆಳೆಗಳ ಸಂತಾನ ಸಮೃದ್ಧಿಗೆ ಮನುಷ್ಯರಲ್ಲಿ ಗಂಡುಹೆಣ್ಣಿನ ಸಂಭೋಗ ಅನಿವಾರ್ಯವೆಂದು ಅವರು ತಿಳಿದಿದ್ದರು. ಅದಕ್ಕಾಗಿಯೇ ಹೊಲ ತೋಟಗಳಲ್ಲಿ ರತಿಕ್ರೀಡೆಯನ್ನು ಸಾಮೂಹಿಕವಾಗಿ ಆಚರಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ನಮ್ಮ ಸಿರಿ ಜಾತ್ರೆಯನ್ನು, ಕಂಬಳದ ಕೆಲವು ಆಚರಣೆಗಳನ್ನು, ಬತ್ತಲೆ ಸೇವೆಯನ್ನು, ಕುಂಡೆಹಬ್ಬವನ್ನು ಗಮನಿಸಬೇಕಾಗುತ್ತದೆ. ಕೆಲವೆಡೆಗಳಲ್ಲಿ ಭೂತಾರಾಧನೆಯ ವಿಧಿಯಾಗಿಯೂ ಲೈಂಗಿಕ ಸಂಭಾಷಣೆ, ಸಂಭೋಗದ ಅಣಕ ಪ್ರದರ್ಶನಗಳನ್ನು ಇಂದೂ ಗಮನಿಸುವುದು ಸಾಧ್ಯ. ಬಹುಶಃ ಭಾರತೀಯ ದೇವಾಲಯಗಳ ಬಹುತೇಕ ಮೂರ್ತಿಶಿಲ್ಪಗಳಲ್ಲಿ ಲೈಂಗಿಕ ದೃಶ್ಯಗಳು, ಕಾಮಕ್ರೀಡೆಯ ಚಿತ್ರಣಗಳು ಮಹತ್ವ ಪಡೆದುಕೊಂಡಿರುವುದು ಫಲವಂತಿಕೆ (fertility)ಯ ಸಂತಾನ ಸಮೃದ್ಧಿಯ ಪರಿಕಲ್ಪನೆಯಿಂದಾಗಿ ಎನ್ನಬಹುದು.

## ಡಯಾನ ದೇವತೆಗೆ ಪಾದ್ರಿಯೊಡನೆ ಮದುವೆ

ಹಿರಿಯರ ಮತ್ತು ಸತ್ತವರ ಆತ್ಮಗಳು ಮರಗಳಿಗೆ ಜೀವ ಕೊಡುತ್ತವೆ ಎಂಬ ನಂಬಿಕೆಯಿತ್ತು. ಮರಗಳಿಗೆ ಮಳೆ ಬರಿಸುವ, ಬೆಳೆನೀಡುವ, ಬೆಳಕು ನೀಡುವ ಜನ ಜಾನುವಾರುಗಳ ಸಂತತಿ ವೃದ್ಧಿಮಾಡುವ, ಗರ್ಭಿಣಿಯರಿಗೆ ಸುಖಪ್ರಸವ ನೀಡುವ ಶಕ್ತಿಯಿದೆ ಎಂದು ನಂಬಿದ್ದ ಆದಿಮ ಜನರು ಮರಗಳನ್ನು ಪೂಜಿಸುತ್ತಿದ್ದರು ಎಂಬುದನ್ನು ಫ್ರೇಜರ್ ಅಧ್ಯಯನ ದಾಖಲಿಸಿದೆ. ಈ ಹಿನ್ನೆಲೆಯಲ್ಲೇ ಡಯಾನಾ ದೇವತೆ ಮತ್ತು ಕಾಡಿನ ರಾಜ ಎಂದು ಕರೆಸಿಕೊಳ್ಳುತ್ತಿದ್ದ ಪಾದ್ರಿ ಸಂಬಂಧವನ್ನು ವಿಶ್ಲೇಷಿಸಲಾಗಿದೆ. ಡಯಾನಾ ಪ್ರಕೃತಿ ದೇವತೆಯಾಗಿರುವುದರ ಜತೆಗೆ ಫಲಶಕ್ತಿ ದೇವತೆ, ಪ್ರಾಣಿ-ಸಸ್ಯ ಸಂತತಿ ಸಮೃದ್ಧಿ ಅಧಿದೇವತೆಯೂ ಆಗಿದ್ದಳು. ಅದಕ್ಕಾಗಿಯೇ ಆಕೆಯ ಜತೆಗಾರ ವರ್ಬಿಯಸ್ ಅಥವಾ ಆ ದೇವತೆಯ ಪ್ರತಿನಿಧಿಯಾಗಿದ್ದ ಪಾದ್ರಿಯ ಸಂಬಂಧ ಮಾಡಿ ಆ ಮೂಲಕ ಪ್ರಾಣಿಗಳಲ್ಲಿ ಮತ್ತು ಸಸ್ಯಗಳಲ್ಲಿ ಫಲಶಕ್ತಿ ಹೆಚ್ಚುವಂತೆ ಮಾಡುವ ಪದ್ಧತಿ ಜನಸಾಮಾನ್ಯವಾಗಿತ್ತು. ಇದಕ್ಕಾಗಿಯೇ ಪ್ರತಿವರ್ಷವೂ ಡಯಾನಾ ದೇವತೆಗೆ ಪಾದ್ರಿಯೊಡನೆ ಮದುವೆ ಮಾಡಿಸುವ ಆಚರಣೆಯಿರುತ್ತಿತ್ತು.

## ಅಶ್ವತ್ಥ ಮರಕ್ಕೂ ಕಹಿಬೇವಿನ ಮರಕ್ಕೂ ಮದುವೆ

ಮರಗಳನ್ನು ಪೂಜಿಸುವುದು ಪ್ರಕೃತಿ ಪೂಜೆಯ ಒಂದು ಅಂಶ. ಲಾರೆಲ್, ಡೇಲಿಯನ್, ಸ್ಟ್ರಾಬೆರಿ ಮರಗಳು ಗ್ರೀಕರಿಗೆ ಪವಿತ್ರಮರಗಳಾದರೆ, ಕ್ರೈಸ್ತರಿಗೆ ಕ್ರಿಸ್‌ಮಸ್ ಮರ, ಜಪಾನೀಯರಿಗೆ ಪರಾಕಿಮರ, ಭಾರತೀಯರಿಗೆ ಅಶ್ವತ್ಥಮರ ಪವಿತ್ರವೆನಿಸಿವೆ. ಅವುಗಳನ್ನು ಪೂಜಿಸುವ ವಿವಿಧ ಆಚರಣೆಗಳಲ್ಲಿ ಅವುಗಳಿಗೆ ಮದುವೆ ಮಾಡಿಸುವ ವಿಶಿಷ್ಟ ಆಚರಣೆಯೂ ಒಂದು. ಅಶ್ವತ್ಥ ಮರಕ್ಕೂ ಕಹಿಬೇವಿನ ಮರಕ್ಕೂ ಮದುವೆ ಮಾಡುವ ಆಚರಣೆ ಭಾರತದ ಕೆಲವು ಸಂಸ್ಕೃತಿಗಳಲ್ಲಿ ಇಂದೂ ಪ್ರಚಲಿತವಿದೆ. ಹಾಲಿನಂತಹ ರಸವನ್ನು ಸೂಸುವ ಅತ್ತಿ, ಆಲ, ಅರಳಿ, ಹಲಸು, ಹಾಳೆ ಮೊದಲಾದ ಮರಗಳು ವಿವಿಧ ಆಚರಣೆಗಳಲ್ಲಿ ಬಳಕೆಯಾಗುತ್ತಿವೆ. ಹಾಳೆಯ ಮರಕ್ಕೆ ದೆವ್ವದ ಮರ ಎನ್ನುವ ಹೆಸರೂ ಇದೆ. ದೇವಸ್ಥಾನಗಳಲ್ಲಿ ಈ ಮರಕ್ಕೆ ವಿಶೇಷ ಮಹತ್ವವಿದೆ. ಫ್ರೇಜರ ಆದಿಮ ಪರಂಪರೆಯಲ್ಲಿದ್ದ ವೃಕ್ಷಾರಾಧನೆಯ ಬಗೆಗೆ ಸಾಕಷ್ಟು ಮಾಹಿತಿಗಳನ್ನು ನೀಡಿದ್ದಾನೆ.

## ಚಿನ್ನದ ಕೊಂಬೆಯ ಮೂಲ

ಚಿನ್ನದ ಕೊಂಬೆಗೆ ಸಂಬಂಧಿಸಿದ ಪುರಾಣ, ಐತಿಹ್ಯ, ನಂಬಿಕೆ ಮತ್ತು ಸಂಪ್ರದಾಯಗಳನ್ನು ಸಂಗ್ರಹಿಸಿ ನಡಸಿರುವ ಫ್ರೇಜರನ ಚರ್ಚೆಗಳು ಮಹತ್ವವಾಗುತ್ತವೆ. ತನ್ನ ಮೇರು ಕೃತಿಗೆ ಫ್ರೇಜರ ಇಟ್ಟಿದ್ದ ಹೆಸರು ಗೋಲ್ಡನ್ ಬೋ ಎಂದರೆ ಚಿನ್ನದ ಕೊಂಬೆಯ ಮೂಲ ಏನು? ಅದರ ಅರ್ಥ ಏನು ಎನ್ನುವ ಪ್ರಮುಖ ಪ್ರಶ್ನೆಗೆ ಈ ಚರ್ಚೆಗಳಿಂದ ಸ್ಪಷ್ಟವಾದ ಉತ್ತರ ಸಿಕ್ಕಿದೆ. ಅದೇ ರೀತಿ ಡಯಾನಾ ದೇವತೆಯ ಅರ್ಚಕನಾಗುವ ವ್ಯಕ್ತಿ ಅದಾಗಲೇ ಇದ್ದ ಅರ್ಚಕನನ್ನು ಕೊಲ್ಲುವ ಮೊದಲು ಈ ಚಿನ್ನದ ಕೊಂಬೆಯನ್ನೇಕೆ ಕತ್ತರಿಸಬೇಕು? ಎನ್ನುವ ಇನ್ನೊಂದು ಪ್ರಮುಖ ಪ್ರಶ್ನೆಗೂ ತನ್ನ ಕೃತಿಯ ಕೊನೆಯ ಭಾಗದಲ್ಲಿ ಫ್ರೇಜರ್ ಉತ್ತರ ದೊರಕಿಸಿಕೊಟ್ಟಿದ್ದಾನೆ.

ಅರ್ಚಕನಾಗಬೇಕಾಗಿದ್ದವನು ಕತ್ತರಿಸಬೇಕಾಗಿದ್ದ ಕೊಂಬೆಯ ಸ್ಥಾನ ಕೆಲವು ಒಳನೋಟಗಳನ್ನು ಕೊಡುತ್ತದೆ. ಅದು ನೆಲದ ಮೇಲೂ ಇರದೆ ಆಕಾಶದಲ್ಲೂ ಇರದೆ

ಈ ಎರಡು ಸ್ತರಗಳ ನಡುವೆ ಮರದ ಮೇಲೆ ಬೆಳೆದು ಚಾಚಿಕೊಳ್ಳುತ್ತಿದ್ದ ಬಂದಳಿಕೆಯಾಗಿತ್ತು. ಬಂದಳಿಕೆ ಇರುತ್ತಿದ್ದ ಈ ಸ್ಥಿತಿಯೇ ಫ್ರೇಜರನನ್ನು ಗಂಭೀರವಾಗಿ ಚಿಂತನೆಗೆ ಹಚ್ಚಿತು. ಇದಕ್ಕೆ ಸಂಬಂಧಪಟ್ಟ ವಿಚಾರಗಳ ಕಡೆಗೆ ಫ್ರೇಜರನ ಗಮನ ಹರಿದು ಕೆಲವು ನಿರ್ಧಾರಗಳಿಗೆ ಬರುವುದು ಸಾಧ್ಯವಾಯಿತು.

ಆದಿಮ ಕಾಲದ ರಾಜನೊಬ್ಬ ಅನುಸರಿಸಬೇಕಾಗಿದ್ದ ನಿಷಿದ್ಧಗಳಲ್ಲಿ ಎರಡು ನಿಷಿದ್ಧಗಳ ವಿಶ್ಲೇಷಣೆಯಿಂದ ಫ್ರೇಜರನಿಗೆ ತಪ್ತಿಕರ ಫಲಿತಾಂಶ ಒದಗಿ ಬಂತು. ರಾಜನು ತನ್ನ ದೇಹವನ್ನು ಭೂಮಿಗೆ ಸೋಕಿಸಬಾರದು ಎನ್ನುವುದು ಮೊದಲನೆಯ ನಿಷಿದ್ಧ. ರಾಜನ ದೇಹದ ಮೇಲೆ ಸೂರ್ಯನ ಬೆಳಕು ಬೀಳಬಾರದು ಎನ್ನುವುದು ಎರಡನೆಯ ನಿಷಿದ್ಧ. ರಾಜನ ದೇಹದಲ್ಲಿ ವಿದ್ಯುತ್ ಪ್ರವಾಹದಂತಹ ಒಂದು ವಿಶೇಷ ಶಕ್ತಿ ಇರುತ್ತದೆ ಎಂಬುದು ಆದಿಮ ಜನರ ತಿಳುವಳಿಕೆ. ರಾಜನ ದೇಹ ಭೂಮಿಯನ್ನು ಸ್ಪರ್ಶಿಸಿದಾಗ ಆತನ ಶಕ್ತಿಯೆಲ್ಲ ವಿದ್ಯುತ್ತಿನಂತೆ ಹರಿದು ನಷ್ಟವಾಗಬಹುದು ಮಾತ್ರವಲ್ಲದೆ ಅದರಿಂದ ಅವನಿಗೆ ಮತ್ತು ಅವನ ಪ್ರಜೆಗಳಿಗೆ ಹಾನಿಯುಂಟಾಗಬಹುದು ಎಂಬುದರಿಂದ ರಾಜನ ದೇಹ ಭೂಮಿಯನ್ನು ಮುಟ್ಟದಂತೆ ಕೆಲವು ನಿಯಮಗಳನ್ನು ಪಾಲಿಸಬೇಕಾಗಿತ್ತು.

ರಾಜನೆಂದರೆ ಸೂರ್ಯನಿಗಿಂತಲೂ ಶ್ರೇಷ್ಠ ಎನ್ನುವ ಕಲ್ಪನೆಯಿತ್ತು. ಪ್ರತ್ಯಕ್ಷದೇವನೇ ಆಗಿರುತ್ತಿದ್ದ ರಾಜನ ಮೇಲೆ ಬೆಳಕು ಚೆಲ್ಲುವ ಯೋಗ್ಯತೆ ಸೂರ್ಯನಿಗಿಲ್ಲ ಎಂಬ ತಿಳುವಳಿಕೆಯ ಹಿನ್ನೆಲೆಯಲ್ಲಿ ಸೂರ್ಯನ ಪ್ರಕಾಶದಿಂದ ರಾಜನಿಗೆ ಕಳಂಕವುಂಟಾಗುತ್ತದೆ ಎಂಬುದು ಆಗಿನ ಕಾಲದ ಜನರ ನಂಬಿಕೆಯಾಗಿತ್ತು. ಅದಕ್ಕಾಗಿ ಸೂರ್ಯನ ಬೆಳಕು ರಾಜನ ಮೇಲೆ ಬೀಳದಂತೆ ನೋಡಿಕೊಳ್ಳುತ್ತಿದ್ದರು.

ಪ್ರಾಚೀನ ಕಾಲದಿಂದಲೂ ಓಕ್ ಮರ ಮತ್ತು ಅದರ ಮೇಲೆ ಬೆಳೆಯುವ ಬಂದಳಿಕೆಯಾದ ಮಿಸಲ್ ಟೋ ಎರಡನ್ನೂ ಪೂಜೆಮಾಡುವುದು ಪರಂಪರೆ. ಉಳಿದೆಲ್ಲ ಮರಗಳಿಗಿಂತಲೂ ಓಕ್ ಮರಕ್ಕೆ ಮಿಂಚು ಬಡಿಯುವುದು ಹೆಚ್ಚು ಎಂಬುದನ್ನು ಜನರು ತಿಳಿದಿದ್ದರು. ವೈಜ್ಞಾನಿಕವಾಗಿಯೂ ಇದು ಹೌದು ಎಂಬುದು ಆ ಬಳಿಕ ಪ್ರಕಟವಾಗಿದೆ. ಓಕ್ ಮರಕ್ಕೆ ಮಿಂಚು ಬಡಿದಾಗ ಆ ಶಕ್ತಿಯೆಲ್ಲಾ ಆ ಮರದಲ್ಲಿ ಶೇಖರವಾಗಿರುತ್ತಿತ್ತು.

ಮುಂದೆ ಬೆಂಕಿಯನ್ನು ಹೊರಸೂಸುವ ಶಕ್ತಿಯಿದೆಯೆಂದು ತಿಳಿದುಕೊಂಡರು. ಈ ಮರದಲ್ಲಿ ಎಲೆಗಳು ಉದುರಿ ಮರ ಬೋಳಾಗಿದ್ದಾಗಲೂ ಅದರ ಮೇಲೆ ಬೆಳೆಯುತ್ತಿದ್ದ ಮಿಸಲ್ ಟೋ ಹಳದಿ ಮಿಶ್ರಿತ ಹಸಿರು ಎಲೆಗಳಿಂದ ಕೂಡಿಯೇ ಇರುತ್ತಿತ್ತು. ಇದರಿಂದ ಓಕ್ ಮರದ ಆತ್ಮ ಮಿಸಲ್ ಟೋನಲ್ಲಿ ಇದೆಯೆಂದು ತಿಳಿದರು. ಇದ್ದ ನಂಬಿಕೆಯ ಪ್ರಕಾರ ಓಕ್ ಮರದ ಮೇಲಿದ್ದ ಮಿಸಲ್ ಟೋವನ್ನು ಕತ್ತರಿಸದೆ ಆ ಮರಕ್ಕೆ ಯಾವ ಬಗೆಯ ತೊಂದರೆ ಮಾಡಿದರೂ ಅದರ ಜೀವ ತೆಗೆಯಲು ಸಾಧ್ಯವಿರಲಿಲ್ಲ. ಆದುದರಿಂದ ಮಿಸೆಲ್ ಟೋವನ್ನು ಕತ್ತರಿಸಿದ ಅನಂತರ ಓಕ್ ಮರವನ್ನು ಕಡಿಯುತ್ತಿದ್ದರು. (ನೋಡಿ: ತೀ.ನಂ.ಶಂಕರನಾರಾಯಣ 1970, 87)

ಯುರೋಪಿನಲ್ಲಿ ನಡೆಯುತ್ತಿದ್ದ ಬೆಂಕಿ ಹಬ್ಬಗಳಲ್ಲಿ ಮರದ ಪ್ರತಿಮೆಗಳನ್ನು ಉತ್ಸವಾಗ್ನಿಯಲ್ಲಿ ಸುಡಲಾಗುತ್ತಿತ್ತು. ಇವು ಓಕ್ ಮರದ ಪ್ರತಿನಿಧಿಗಳಾಗಿರಬೇಕು. ಸಸ್ಯ ಶಕ್ತಿಯನ್ನು ಅದು ಸತ್ವಶಾಲಿಯಾಗಿದ್ದಾಗಲೇ ಸುಟ್ಟರೆ ಆ ಶಕ್ತಿ ಮುಂದಿನ ಸಸ್ಯಗಳಲ್ಲಿ ಸೇರಿ ಸಸ್ಯವರ್ಗ ಸಮೃದ್ಧವಾಗಿ ಇರುವುದೆಂದು ಭಾವಿಸಿ ಈ ರೀತಿ ಮಾಡಲಾಗುತ್ತಿತ್ತು. ಇದರ ಪ್ರಕಾರ ನಾರ್ವೆ ದೇಶದ ಬಾಲ್ಡರ್ ಓಕ್ ಮರದ ಪ್ರತಿನಿಧಿಯಾಗುತ್ತಾನೆ. ಬಾಲ್ಡರನ ಜೀವ ಮಿಸೆಲ್ ಟೋ ಇದ್ದಿತೆಂದು ಹೇಳಿರುವುದರಿಂದ ಬಾಲ್ಡರ್ ಮತ್ತು ಓಕ್ ಎರಡನ್ನೂ ಸಮೀಕರಿಸಬಹುದು. ಇದೇ ಹೋಲಿಕೆಯನ್ನು ಅರಿಕಿಯಾದ ಡಯಾನಾ ದೇವತೆಯ ಪೂಜಾರಿಯ ಸ್ಥಾನಕ್ಕೆ ಬರಲು ಅನುಸರಿಸಬೇಕಾಗಿದ್ದ ಕ್ರಮಕ್ಕೂ ಅನ್ವಯಿಸಬಹುದು. ಡಯಾನಾ ದೇವತೆ ಒಟ್ಟಾರೆಯಾಗಿ ಸಸ್ಯ ದೇವತೆ. ಮುಖ್ಯವಾಗಿ ಫಲಶಕ್ತಿ ದೇವತೆ. ಈ ದೇವತೆಯ ಜೊತೆಗಾರನಾದ ವರ್ಬಿಯಸ್ ಸಹ ಸಸ್ಯ ದೇವತೆ. ಆ ದೇವತೆಯ ಪ್ರತಿನಿಧಿಯಾದ ಪಾದ್ರಿಯೂ ಸಸ್ಯ ದೇವತೆ ಆಗಬೇಕು. ಸಸ್ಯ ಶಕ್ತಿ ಅದೇ ಸತ್ವದಿಂದ ಮುಂದುವರಿದು ಸಸ್ಯವರ್ಗ ಶ್ರೀಮಂತವಾಗಿರಬೇಕಾದರೆ ಅದರ ಸಂಕೇತವಾದ ಪಾದ್ರಿಯನ್ನು ಕೊಲ್ಲಬೇಕು. ಆದರೆ ಈ ಪಾದ್ರಿಯ ಅತ್ಮ ಡಯಾನಾ ದೇವತೆಯ ತೋಪಿನಲ್ಲಿ ಬೆಳೆದಿದ್ದ ಓಕ್ ಮರದ ಮೇಲಿನ ಮಿಸಲ್ ಟೋನಲ್ಲಿತ್ತು. ಈ ಮಿಸಲ್ ಟೋವನ್ನು ಕಡಿಯದ ಹೊರತು ಪಾದ್ರಿ ಸಾಯುವುದಿಲ್ಲವೆಂದು ನಂಬಿಕೆಯಿದ್ದುದರಿಂದ ಪಾದ್ರಿಯ ಉತ್ತರಾಧಿಕಾರಿಯಾಗಬೇಕಾದವನು ಅವನನ್ನು ಕೊಲ್ಲುವ ಮೊದಲು ಮಿಸಲ್ ಟೋವನ್ನು ಅನಿವಾರ್ಯವಾಗಿ ಕತ್ತರಿಸಲೇಬೇಕಾಗಿತ್ತು. (ನೋಡಿ : ತೀ.ನಂ. ಶಂಕರನಾರಾಯಣ 1970, 87-88)

## ಬಂದನಿಕೆಯ ಅರ್ಥ

ಮಿಸಲ್ ಟೋ (mistle toe) ಎನ್ನುವುದು ಮರದಲ್ಲಿ ಬೆಳೆಯುವ ಒಂದು ಪರಾವಲಂಬಿ ಸಸ್ಯ. ಅದನ್ನು ಬಂದನಿಕೆ ಎಂದು ಕರೆಯುವುದುಂಟು. ಸದಾ ಹಸುರಾಗಿಯೇ ಇರುವ ಸಸ್ಯವಿದು. ಸಾಮಾನ್ಯವಾಗಿ ಹೆಚ್ಚಿನ ಮರಗಳಲ್ಲಿ ಈ ಬಂದನಿಕೆ ಬೆಳೆಯುತ್ತದೆ. ಕೆಲವು ಬಂದನಿಕೆಗಳಲ್ಲಿ ಅತ್ಯಂತ ಆಕರ್ಷಕವಾದ ಮತ್ತು ಸುಂದರವಾದ ಹೂಗಳು ಅರಳಿ ದೀರ್ಘಕಾಲ ಬಾಡಿಹೋಗದೆ ಉಳಿಯುವುದಿದೆ. ಅದಕ್ಕೆ ಮದುಮಗಳು ಹೂ ಎನ್ನುವ ಹೆಸರಿದೆ. ತುಳುಭಾಷೆಯಲ್ಲಿ 'ಪಾಪತ್ತಿಮದಿಮಾಲ್' (ಪಾಪತ್ತಿ ಮದುಮಗಳು) ಎಂದು ಹೇಳುತ್ತಾರೆ. ಕೆಲವು ಬಂದನಿಕೆಗಳಲ್ಲಿ ಕಿರುಗಾತ್ರದ ಬಿಳಿಬಣ್ಣದ ಜಿಗುಟು ಅಥವಾ ಅಂಟು ಗುಣವಿರುವ ಹಣ್ಣು ಬೆಳೆಯುವುದಿದೆ. ಈ ಹಣ್ಣನ್ನು ಕ್ರಿಸ್‌ಮಸ್ ಅಲಂಕಾರಕ್ಕೆ ಬಳಸುವುದುಂಟು. ಸೇಬು ಮೊದಲಾದ ಮರಗಳಲ್ಲೂ ಈ ರೀತಿಯ ಬಂದನಿಕೆಗಳು ಬೆಳೆಯುತ್ತವೆ. ಕ್ರಿಸ್‌ಮಸ್ ಕಾಲದಲ್ಲಿ ಅಲಂಕಾರಕ್ಕಾಗಿ ಉಪಯೋಗಿಸುವ ಈ ಬಂದನಿಕೆಯ ಕೆಳಗೆ ನಿಂತಿರುವ ಹುಡುಗಿಯನ್ನು ಕಂಡ ಯುವಕನು ಆಕೆಯನ್ನು ಅಪ್ಪಿ ಮುತ್ತಿಟ್ಟುಕೊಳ್ಳಲು ಅನುಮತಿಯಿರುವ ಸಂಪ್ರದಾಯ (Kiss under the mistle toe)ವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸಾಮಾನ್ಯವಾಗಿ ಮರವೊಂದರಲ್ಲಿ ಬಂದನಿಕೆ ಬೆಳೆಯುವುದೆಂದರೆ ಆ ಮರದ ಸತ್ವವನ್ನು ಹೀರಿ ತಾನು ಬೆಳೆಯುವುದು. ಸಹಜವಾಗಿಯೇ ಅದು ಬೆಳೆಯುವ ಮೂಲ ಮರ ಫಲಕೊಡುವ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಹಾಗಾಗಿ ಇಂತಹ ಬಂದನಿಕೆ ಒಂದು ಮರದಲ್ಲಿ ಕಾಣಿಸಿಕೊಂಡಾಗ ಬಂದನಿಕೆಯನ್ನು ಕತ್ತರಿಸಿ ಮರವನ್ನು ಉಳಿಸುವ ಪ್ರಯತ್ನ ಮಾಡುವುದುಂಟು. ಬಂದನಿಕೆ ಬೆಳೆದ ಮರದಲ್ಲಿ ಫಲ ಬರುವುದಿಲ್ಲ ಎನ್ನುತ್ತಾರೆ. ಫ್ರೇಜರ ಉಲ್ಲೇಖಿಸಿರುವ ಓಕ್ ಮರದ ಬಂದನಿಕೆಯನ್ನು ಡಯಾನ ದೇವತೆಯ ಅರ್ಚಕನಾಗುವವನು ಕತ್ತರಿಸುವುದಕ್ಕೂ ಈ ಹಿನ್ನೆಲೆಯ ಅರ್ಥವೇ ಸಮಂಜಸವೆನಿಸುತ್ತದೆ.

## ರಾಜನನ್ನು ಕೊಲ್ಲುವ ಪರಂಪರೆ

ತಮ್ಮ ಬದುಕಿಗೆ, ಬೆಳವಣಿಗೆಗೆ ಮತ್ತು ರಕ್ಷಣೆಗೆ ಸಂಬಂಧಿಸಿ ಆದಿಮ ಜನರು ರಾಜನನ್ನು ರೂಪಿಸುತ್ತಿದ್ದರು. ಮಳೆಬೆಳೆಗಳ ಸುವ್ಯವಸ್ಥೆಗೆ ಮತ್ತು ತಮ್ಮ ಜೀವನದ ಸುಖ ಸಂತೋಷಗಳಿಗೆಲ್ಲ ರಾಜನೇ ಆಧಾರ ಎಂದು ತಿಳಿದಿದ್ದ ಜನ ಸಾಮಾನ್ಯ ಪ್ರಜೆಗಳು ರಾಜನ ಬಗೆಗೆ ವಿಲಕ್ಷಣವಾದ ಭಾವನೆಗಳನ್ನು ತಳೆದಿದ್ದರು. ಒಂದೆಡೆ ರಾಜನು ಪ್ರತ್ಯಕ್ಷ ದೇವರು ಎಂದು ಭಾವಿಸಿದ್ದರೆ ಇನ್ನೊಂದೆಡೆ ಯಾವುದೇ ದಯೆ ದಾಕ್ಷಿಣ್ಯವಿಲ್ಲದೆ ಕೊಲ್ಲುತ್ತಲೂ ಇದ್ದರು. ಫ್ರೇಜರನನ್ನು ಕಾಡುತ್ತಿದ್ದ ಬಹುಮುಖ್ಯ ಸಂಗತಿಯಿದು. ಬಲಶಾಲಿ ರಾಜನಿಂದ ಶ್ರೀಮಂತ ಮತ್ತು ಸಂಪದ್ಭರಿತ ರಾಜ್ಯ ನಿರ್ಮಾಣ ಸಾಧ್ಯ ಎನ್ನುವ ತಿಳುವಳಿಕೆಗೆ ವಿಲೋಮವಾಗಿ ದುರ್ಬಲ ಮತ್ತು ವೃದ್ಧರಾಜನಿಂದಾಗಿ ಆ ರಾಜ್ಯವೂ ದುರ್ಬಲ ಮತ್ತು ದರಿದ್ರ ಸ್ಥಿತಿಗೆ ಬರುತ್ತದೆ ಎಂಬುದನ್ನು ಪ್ರಜೆಗಳು ಬಲವಾಗಿ ನಂಬಿದ್ದರು. ಈ ಕಾರಣದಿಂದಾಗಿ ಯೌವನದಿಂದ ಕೂಡಿದ ರಾಜನು ದೇವರಿಗೆ ಸಮಾನನು. ಅವನಿಗೆ ಯೌವನ ಕಳೆದು ವೃದ್ಧಾಪ್ಯ ಪ್ರಾಪ್ತವಾಗುವುದಿದ್ದರೆ ರಾಜ್ಯದಲ್ಲೂ ಮಳೆ ಬೆಳೆ ಸಂಪತ್ತು ಕಡಿಮೆಯಾಗುವುದೆಂಬ ನಂಬಿಕೆ. ಹಾಗಾಗಿ ಆತನು ವೃದ್ಧನಾಗುವ ಮೊದಲೇ ಸತ್ತರೆ ಅವನ ಶಕ್ತಿ ಮುಂದಿನ ಉತ್ತರಾಧಿಕಾರಿಗೆ ಸಿಗುವುದೆಂದು ತಿಳಿಯುತ್ತಿದ್ದರು. ಈ ಕಾರಣಕ್ಕಾಗಿ ರಾಜನನ್ನು ವಯಸ್ಸಾಗುವ ಮೊದಲೇ ಕೊಲ್ಲುತ್ತಿದ್ದರು ಮತ್ತು ಉತ್ತರಾಧಿಕಾರಿಯೊಬ್ಬನನ್ನು ನೇಮಿಸುತ್ತಿದ್ದರು.

ಈ ದೃಷ್ಟಿಯಲ್ಲಿ ನೆಮಿಯಲ್ಲಿದ್ದ ಡಯಾನಾ ದೇವತೆಯ ಪಾದ್ರಿಯಾಗುವವನು ಏಕೆ ಹಿಂದಿನ ಪಾದ್ರಿಯನ್ನು ಕೊಂದು ಆತನ ಉತ್ತರಾಧಿಕಾರಿಯಾಗಬೇಕಾಗಿತ್ತು ಎನ್ನುವ ಪ್ರಶ್ನೆಗೆ ಫ್ರೇಜರ್ ಉತ್ತರ ಕಂಡುಕೊಂಡಹಾಗಾಯಿತು.

## ಮಾಟದ ಯುಗ ಮತ್ತು ಧರ್ಮದ ಯುಗ

ತಮ್ಮ ಬದುಕು ಎನ್ನುವುದು ಋತುಮಾನಗಳಿಗನುಗುಣವಾಗಿ ಪ್ರಕೃತಿಯಲ್ಲಾಗುವ ಬದಲಾವಣೆಯ ಮೇಲೆ ಅವಲಂಬಿಸಿದೆ ಎನ್ನುವುದನ್ನು ಆದಿಮ ಜನರು ತಿಳಿದಿದ್ದರು.

ತಮ್ಮ ಬದುಕಿಗಾಗಿ ಪ್ರಕೃತಿಯನ್ನು ನಿಯಂತ್ರಿಸಲು ಮೊದಲಾಗಿ ಈ ಜನರು ಅನುಸರಿಸಿದ್ದು ಮಾಟಮಾರ್ಗವನ್ನು. ಈ ಮಾರ್ಗ ಅಷ್ಟು ಫಲಕಾರಿಯಾಗದ ಕಾರಣ ಪ್ರಕೃತಿಯನ್ನು ಭಯ ಭಕ್ತಿ ಭಾವದಿಂದ ಒಲಿಸಿಕೊಳ್ಳಲು ಮುಂದಾದರು. ಹೀಗಾಗಿ ಮಾಟದ ಯುಗ ಉಳಿದು ಧರ್ಮದ ಯುಗ ಮೊದಲಾಯಿತು.

## ದೇವತೆಗಳ ಮದುವೆ

ದೇವತೆಗಳ ಹುಟ್ಟು, ಬೆಳವಣಿಗೆ ಮತ್ತು ಸಾವಿಗೂ ಮಳೆಬೆಳೆಗಳ ಸಮೃದ್ಧಿಗೂ ನಾಶಕ್ಕೂ ಸಂಬಂಧ ಕಲ್ಪಿಸಿಕೊಂಡಿದ್ದ ಆದಿಮ ಜನರ ನಂಬಿಕೆಯನ್ನು ಫ್ರೇಜರ್ ಅಧ್ಯಯನ ನಡೆಸಿದ್ದ. ದೇವತೆಗಳು ಹುಟ್ಟಿದಾಗ ಬೆಳೆಗಳೂ ಹುಟ್ಟುತ್ತವೆ. ದೇವತೆಗಳು ಸತ್ತಾಗ ಬೆಳೆಗಳೂ ಸಾಯುತ್ತವೆ ಎಂದು ನಂಬಿಕೊಂಡ ಈ ಜನರು ದೇವತೆಗಳಿಗೂ ಮನುಷ್ಯರಂತೆ ಹುಟ್ಟು ಸಾವಿದೆ ಎಂಬುದನ್ನು ತಿಳಿದುಕೊಂಡವರು. ಅವರ ನಂಬಿಕೆಯಂತೆ ದೇವತೆಗಳೂ ಮನುಷ್ಯರಂತೆ ಹುಟ್ಟಿ ಬೆಳೆಯುತ್ತವೆ. ಅವುಗಳೂ ಮದುವೆಯಾಗಿ ಸಂತಾನ ಪಡೆಯುತ್ತವೆ. ಕೊನೆಗೊಮ್ಮೆ ಸಾಯುತ್ತವೆ. ಆದುದರಿಂದ ದೇವತೆಗಳ ಶಕ್ತಿ ಕುಂದದಂತೆ ಮಾಟದ ಮೂಲಕ ದೇವತೆಗಳಿಗೆ ನೆರವಾಗುತ್ತಿದ್ದರು. ದೇವತೆಗಳನ್ನು ಆ ಮೂಲಕ ಬದುಕಿಸಲು ಪ್ರಯತ್ನಿಸುತ್ತಿದ್ದರು. ಇದಕ್ಕೆ ಸಂಬಂಧಿಸಿ ಕೆಲವು ವಿಧಾನ ತಂತ್ರಗಳನ್ನು ರೂಢಿಗೆ ತಂದರು. ಒಂದು ಕಾಲಘಟ್ಟದಲ್ಲಿ ಮಾಟವೆನ್ನುವುದು ಧರ್ಮದೊಂದಿಗೆ ಸೇರಿ ಒಂದಾಯಿತು. ಋತು ಬದಲಾವಣೆಯಿಂದ ಉಂಟಾಗುವ ಪರಿಣಾಮಗಳು ಪ್ರಾಣಿಗಳಿಗಿಂತಲೂ ಪ್ರಧಾನವಾಗಿ ಮರಗಿಡಗಳ ಹಾಗೂ ಬೆಳೆಗಳ ಮೇಲೆ ಉಂಟಾಗುವುದು ಎಂಬುದನ್ನು ತಿಳಿದುಕೊಂಡಿದ್ದ ಜನರು ಕೃಷಿ ಸಂಬಂಧವಾದ.ದೇವತೆಗಳ ಸಾವನ್ನು ತಪ್ಪಿಸಿದರೆ ಇಲ್ಲವೇ ಸತ್ತ ದೇವತೆಗಳನ್ನು ಬದುಕಿಸಿದರೆ ಬೆಳೆಗಳ ಸಮೃದ್ಧಿಗೆ ಅಡಚಣೆಯುಂಟಾಗದೆಂದು ಅಂತಹ ದೇವತೆಗಳನ್ನು ವಿವಿಧ ಹೆಸರುಗಳಿಂದ ಪೂಜಿಸುತ್ತಿದ್ದರು. ಅವುಗಳನ್ನು ನಿರಂತರವಾಗಿ ಉಳಿಸಿಕೊಳ್ಳಲು ಮಾಟ ವಿಧಿಗಳನ್ನು ನಡೆಸುತ್ತಿದ್ದರು.

## ದೇವತೆಗಳನ್ನು ಬದುಕಿಸುವ ಆಚರಣೆ

ಮಳೆಬೆಳೆಗಳಿಗೆ ಸಂಬಂಧಿಸಿದ ದೇವತೆಗಳಿಗಾಗಿ ನಡೆಸುತ್ತಿದ್ದ ಮಾಟ ವಿಧಿಗಳ

ಪರಂಪರೆ ಜಗತ್ತಿನ ಇತರ ಭಾಗಗಳಿಗಿಂತಲೂ ಹೆಚ್ಚಾಗಿ ಭೂಮಧ್ಯ ಸಮುದ್ರದ ಆಸುಪಾಸಿನ ದೇಶಗಳಾದ ಈಜಿಪ್ಟ್ ಮತ್ತು ಪಶ್ಚಿಮ ಏಷ್ಯಾದಲ್ಲಿ ಬಳಕೆಯಲ್ಲಿತ್ತು. ಈ ಎಲ್ಲ ದೇಶಗಳ ಜನರು ಬೆಳೆಗಳ ಆತ್ಮವನ್ನು ಎಡೋನಿಸ್ (Adonis) ಆ್ಯಟಿಸ್ (Attis) ಮತ್ತು ಒಸಿರಿಸ್ (Osiris) ಎಂಬ ಮೂರು ದೇವತೆಗಳ ರೂಪದಲ್ಲಿ ಮೂರ್ತೀಕರಿಸಿ ಅವುಗಳನ್ನು ಹುಟ್ಟಿಸುವ ಬೆಳೆಸುವ, ಅವುಗಳಿಗೆ ಮದುವೆ ಮಾಡುವ, ಅವುಗಳನ್ನು ಸಾಯಿಸಿ ಪುನರುಜ್ಜೀವಿಸುವ ಬಗೆಬಗೆಯ ಮಾಟಗಳನ್ನು ಮಾಡುತ್ತಿದ್ದರು. ಈ ರೀತಿ ಮಾಟ ಮಾಡುವ ದೇವತೆಗಳ ಹೆಸರು ಮತ್ತು ಮಾಟದ ವಿಧಾನಗಳು ಬೇರೆ ಬೇರೆ ದೇಶಗಳಲ್ಲಿ ತುಸು ವ್ಯತ್ಯಾಸಗಳೊಡನೆ ಪ್ರಚಲಿತವಿದ್ದರೂ ಅವೆಲ್ಲವುಗಳ ಮೂಲತತ್ವ ಒಂದೇ ಆಗಿತ್ತು. ಈ ಮೂರು ದೇವತೆಗಳ ಪುರಾಣ ಮತ್ತು ಆಚರಣೆಗಳ ಬಗೆಗೆ ಫ್ರೇಜರ್ ವಿವರಿಸಿದ್ದಾನೆ. ಇದರ ಜತೆಯಲ್ಲೇ ಒಸಿರಿಸ್ಸಿನ ಗ್ರೀಕ್ ಪ್ರತಿರೂಪವಾದ ಡಯೋನಿಸಿಸ್ (Dionysis) ದೇವತೆಯ ಪುರಾಣ ಮತ್ತು ಆಚರಣೆಗಳ ಚರ್ಚೆಯನ್ನು ಫ್ರೇಜರ್ ಮಾಡಿರುತ್ತಾನೆ. ಪಶ್ಚಿಮ ಏಷ್ಯಾದಲ್ಲಿ ಸಂತಾನ ಶಕ್ತಿಯ ಪ್ರತಿರೂಪವಾದ ಮಾತೃ ದೇವತೆಯ ವಿಚಾರವನ್ನು ಸ್ಪರ್ಶಿಸಿದ್ದಾನೆ. ಗ್ರೀಕ್ ಪುರಾಣದಲ್ಲಿ ಡಯೋನಿಸಿಸ್ ದೇವತೆಯಂತೆಯೇ ಡೆಮೆಟರ್ ಮತ್ತು ಪರ್ಸೆಫೋನ್ ಎಂಬ ಎರಡು ಸ್ತ್ರೀ ದೇವತೆಗಳೂ ಸಸ್ಯ ದೇವತೆಗಳಾಗಿ ರೂಪುಗೊಂಡಿರುವ ಕಥೆಗಳಿವೆ. ಆದಿಮ ಜನರ ಕೃಷಿಸಂಬಂಧ ಆಚರಣೆಗಳಲ್ಲಿ ಬರುವ ಧಾನ್ಯಮಾತೆ ಮತ್ತು ಧಾನ್ಯ ಕನ್ಯೆ ಕ್ರಮವಾಗಿ ಡೆಮೆಟರ್ ಮತ್ತು ಪರ್ಸೆಫೋನ್ ದೇವತೆಗಳ ಮೂಲ ಒಂದೇ ಆಗಿದೆ. ಎಡೊನಿಸ್,ಆ್ಯಟಿಸ್, ಒಸಿರಿಸ್ ಡಯೋನಿಸಿಸ್, ಡೆಮಿಟರ್, ಪರ್ಸೆಫೋನ್ ಮೊದಲಾದ ದೇವತೆಗಳೆಲ್ಲ ಮೂಲತಃ ಸಸ್ಯ ಶಕ್ತಿಯ ಪ್ರತೀಕಗಳು ಎಂಬುದನ್ನು ಫ್ರೇಜರ್ ಖಚಿತಪಡಿಸಿದ್ದಾನೆ.

## ಧಾನ್ಯ ಮಾತೆಯ ಆಚರಣೆಗಳು

ಫಲಶಕ್ತಿ ಮತ್ತು ಸಸ್ಯವರ್ಗದ ಸಂಬಂಧವಾದ ದೇವತೆಗಳ ಪುರಾಣಗಳಲ್ಲಿ ಮತ್ತು ಆಚರಣೆಗಳಲ್ಲಿ ಸಸ್ಯ ಶಕ್ತಿ ಮತ್ತು ಧಾನ್ಯ ಶಕ್ತಿ ಹೇಗೆ ಪ್ರಭಾವ ಬೀರಿದೆ ಎಂಬ ಕುರಿತು ಚರ್ಚೆ ನಡೆದ ಹಾಗೆ ಧಾನ್ಯ ಶಕ್ತಿಯ ಒಟ್ಟು ಸ್ವರೂಪವನ್ನು ಒಳಗೊಂಡ ಧಾನ್ಯಮಾತೆಯ ವಿವಿಧ ಸ್ವರೂಪಗಳನ್ನು ಫ್ರೇಜರ ವರ್ಣಿಸಿರುವನು. ಧಾನ್ಯ ಮಾತೆಯ ಸ್ವರೂಪ ದೇಶದಿಂದ

ದೇಶಕ್ಕೆ, ಆ ದೇಶದಲ್ಲಿ ಬೆಳೆಯುವ ಮುಖ್ಯ ಬೆಳೆಯ ಅಧಾರದ ಮೇಲೆ ಬದಲಾಗುತ್ತಾ ಹೋಗುತ್ತದೆ. ಧಾನ್ಯಮಾತೆಯ ಆಚರಣೆಗಳು ಹೋದಲ್ಲಿ ನಡೆಯುತ್ತಿದ್ದುವು. ಧಾನ್ಯವನ್ನು ಬಡಿದು ಪ್ರತ್ಯೇಕಿಸುವಾಗಲೂ ಈ ಆಚರಣೆಗಳು ನಡೆಯುತ್ತಿದ್ದುವು. ಧಾನ್ಯಮಾತೆಯ ಆಚರಣೆಗೆ ಯಾವುದೇ ಅರ್ಚಕನ ಅಗತ್ಯವಿಲ್ಲ. ಸಾಂದರ್ಭಿಕವಾಗಿ ಯಾರೂ ಮಾಡಬಹುದಾಗಿತ್ತು. ಈ ಆಚರಣೆಗೆ ನಿರ್ದಿಷ್ಟ ಸ್ಥಳ ಬೇಕಾಗಿಲ್ಲ. ಆಚರಣೆಯೆಂದರೆ ಪೂಜೆಯಲ್ಲ. ಕೇವಲ ಮಾಟ ಮಾತ್ರ. ಈ ಆಚರಣೆಗಳು ಆತ್ಮಕ್ಕೆ ಸಂಬಂಧಿಸಿದ್ದು ಹೊರತು ದೇವತೆಗಳಿಗಲ್ಲ.

ಧಾನ್ಯಮಾತೆ ಹೊಲದಲ್ಲೇ ನೆಲೆಸಿರುತ್ತ ಬೆಳೆಯನ್ನು ಕೊಯ್ಯುತ್ತಿದ್ದಂತೆಯೇ ಪೈರಿನಿಂದ ಪೈರಿಗೆ ಅದು ಓಡುತ್ತದೆ. ಕೊನೆಯ ಪೈರಿನ ಕೊನೆಯ ಕಂತೆಯಲ್ಲಿ ಅಥವಾ ಕೊನೆಯ ಕಂತೆ ಕಟ್ಟಿದ ವ್ಯಕ್ತಿಯಲ್ಲಿ ಅದಿರಬಹುದು. ಇಂತಹ ಧಾನ್ಯ ಮಾತೆಯನ್ನು ಹೊರಹೋಗಲು ಬಿಡದೆ ಹೊಲದಲ್ಲೇ ನೆಲೆಸುವಂತೆ ಮಾಡಿದರೆ ಮುಂದಿನ ವರ್ಷದ ಬೆಳೆ ಚೆನ್ನಾಗಿ ಬರುತ್ತದೆ ಎನ್ನುವುದು ನಂಬಿಕೆ. ಸುಗ್ಗಿಯ ಹೊಲದಲ್ಲಿ ಧಾನ್ಯಮಾತೆಗೆ ಸಂಬಂಧಿಸಿದ ಆಚರಣೆಗಳು ನಡೆಯುತ್ತವೆ. ದೇಶದಿಂದ ದೇಶಕ್ಕೆ ಈ ಆಚರಣೆ ಬದಲಾಗಬಹುದಾದರೂ ಮೂಲಭೂತವಾದ ಉದ್ದೇಶ ಒಂದೇ ಆಗಿದೆ. ಧಾನ್ಯ ಮಾತೆ ನೆಲೆಸಿರಬಹುದಾದ ಕೊನೆಯ ಕಂತೆ ಕಟ್ಟುವ ವ್ಯಕ್ತಿಯನ್ನು ಗೇಲಿಮಾಡುವ, ಹೊಡೆಯುವ ಕೆಲವೊಮ್ಮೆ ಸಾಯಿಸಿಹಾಕುವ ಆಚರಣೆಗಳೂ ಇದ್ದುವು. ಇದರಿಂದಾಗಿ ಧಾನ್ಯಮಾತೆ ಹೊಲದಲ್ಲೇ ನೆಲೆಸುವುದೆಂಬ ನಂಬಿಕೆ. ಪೈರನ್ನು ಕೊಯ್ಯುವ, ಕಣದಲ್ಲಿ ಹೊಡೆಯುವ ಇಂತಹ ಆಚರಣೆಗಳಿಗೆ ಸಂಬಂಧಿಸಿದ ಅನೇಕ ಹಾಡುಗಳು ಬಳಕೆಯಲ್ಲಿದ್ದುವು. ಈ ಹಾಡುಗಳು ಹೆಚ್ಚಾಗಿ ದುರಂತ ಬದುಕನ್ನು ವರ್ಣಿಸುತ್ತವೆ. ಫ್ರೇಜರ್ ಇಂತಹ ಹಾಡುಗಳ ಕುರಿತು ಅಧ್ಯಯನ ನಡೆಸಿದ್ದಾನೆ.

## ಸಸ್ಯದೇವತೆ ಮತ್ತು ಬಲಿ ಅರ್ಪಣೆ

ಹೊಲದಲ್ಲಿ ಬೆಳೆ ಹುಲುಸಾಗಿ ಬರಬೇಕು ಎನ್ನುವ ಉದ್ದೇಶದಿಂದ ನಡೆಸುತ್ತಿದ್ದ ಆಚರಣೆಗಳಲ್ಲಿ ನರಬಲಿ ಕೊಡುತ್ತಿದ್ದ ಸಂಪ್ರದಾಯ ಒಂದಾಗಿದೆ. ಹೀಗೆ ಬಲಿ ಕೊಟ್ಟ

ವ್ಯಕ್ತಿಯ ಮಾಂಸದ. ಚೂರನ್ನು ಪ್ರತಿ ಊರಿಗೂ ಹಂಚಲಾಗುತ್ತಿತ್ತು. ಹೀಗೆ ದೊರೆತ ಮಾಂಸದ ಚೂರನ್ನು ಪ್ರತಿ ಮನೆಯ ಹಿತ್ತಿಲಲ್ಲೂ ಹೂಳಲಾಗುತ್ತಿತ್ತು. ಇದರಿಂದ ಆಯಾ ಹೊಲದಲ್ಲಿ ಬೆಳೆ ಹೆಚ್ಚುತ್ತದೆ ಎನ್ನುವುದು ನಂಬಿಕೆ. ಕಾಲ ಸಂದಂತೆ ನರಬಲಿಯ ಬದಲು ಪ್ರಾಣಿಬಲಿ ಆರಂಭವಾಯಿತು. ಮುಂದಿನ ಕಾಲಘಟ್ಟಗಳಲ್ಲಿ ನಾಗರಿಕತೆ ಬೆಳೆದಂತೆ ಪ್ರಾಣಿ ಬಲಿಯ ಸ್ಥಾನವನ್ನು ಸಸ್ಯಗಳು ಪಡೆದವು. ಮೊದಲ ಫಲವನ್ನು ಸಸ್ಯದೇವತೆಗೆ ಅರ್ಪಿಸುವ ಪದ್ಧತಿಯಿತ್ತು. ಹೀಗೆ ಅರ್ಪಿಸಿದ ಬಳಿಕ ಕುಟುಂಬದವರು ಆಹಾರ ಸೇವಿಸುತ್ತಿದ್ದರು. ಸಸ್ಯ ದೇವತೆಯನ್ನು ತೃಪ್ತಿಪಡಿಸಿದ ಕೃತಜ್ಞತಾಭಾವ ಮತ್ತು ಮೊದಲ ಫಲದಲ್ಲಿ ಸಸ್ಯದೇವತೆಯ ಸತ್ವ ಹೆಚ್ಚಾಗಿರುವುದರಿಂದ ಆ ಶಕ್ತಿ ತಮಗೂ ಬರುವುದೆಂಬ ನಂಬಿಕೆಗಳು ಬಲಿ ಅರ್ಪಣೆಯ ಆಚರಣೆಯಲಿದ್ದುವು. ಫ್ರೇಜರ ಇದನ್ನು ದಾಖಲಿಸಿದ್ದಾನೆ.

## ಪ್ರಾಣಿಗಳ ಪೂಜೆ

ಸಸ್ಯಗಳನ್ನು ಪೂಜಿಸುತ್ತಿದ್ದಂತೆ ಪ್ರಾಣಿಗಳನ್ನೂ ಆದಿಮ ಜನರು ಪೂಜಿಸುತ್ತಿದ್ದರು. ಪ್ರಾಣಿಗಳ ವಿವಿಧ ಅಂಗಭಾಗಗಳ ಸೇವನೆಯಿಂದ ಪ್ರಾಣಿಗಳ ಶಕ್ತಿ ತಮಗೆ ಬರುವುದೆಂಬ ನಂಬಿಕೆಯನ್ನು ಫ್ರೇಜರ ಗುರುತಿಸಿದ್ದಾನೆ. ಎಮ್ಮೆಯಂತಹ ತೀರ ಮಂದಗತಿಯ ಪ್ರಾಣಿಯ ಮಾಂಸವನ್ನು ಮಾತ್ರ ಸೇವಿಸುತ್ತಿರಲಿಲ್ಲ. ಮೊಲದ ಪುಕ್ಕಲುತನದ ಸ್ವಭಾವದಿಂದಾಗಿ ಅದರ ಮಾಂಸವನ್ನು ತಿನ್ನುತ್ತಿರಲಿಲ್ಲ. ಆದರೆ ಶಕ್ತಿ ಸಾಹಸಗಳಿಗೆ ಹೆಸರಾದ ಸಿಂಹದ ಮಾಂಸ ತಿಂದರೆ ತಮಗೂ ಆ ಗುಣ ಬಂದೀತೆಂದು ನಂಬಿದ್ದರು. ಪ್ರತಿಪಕ್ಷದ ನಾಯಕನೊಬ್ಬ ಬಹು ಧೈರ್ಯದಿಂದ ಹೋರಾಡಿ ಮಡಿದಾಗಲೂ ಇದೇ ತತ್ವ ಅನ್ವಯವಾಗುತ್ತಿತ್ತು ಸತ್ತಾತನ ಮಾಂಸ ತಿಂದರೆ ತಮಗೂ ಆತನ ಧೈರ್ಯ ಶೌರ್ಯ ಪ್ರಾಪ್ತವಾಗುವುದೆಂಬುದು ಅವರ ತಿಳುವಳಿಕೆಯಾಗಿತ್ತು. ಆದಿಮ ಜನರು ಪ್ರಾಣಿಗಳ ಬಗೆಗೆ ಎರಡು ರೀತಿಯ ಮನೋಭಾವ ತಳೆದಿದ್ದರು. ಪ್ರಾಣಿಗಳನ್ನು ಪೂಜಿಸುವುದರಿಂದ ಅವುಗಳ ಮಾಂಸ ತಿನ್ನಬಾರದು ಎನ್ನುವುದು ಮೊದಲನೆಯದು. ಹಾಗಾಗಿ ಅವನ್ನು ಕೊಲ್ಲುತ್ತಿರಲಿಲ್ಲ. ಪ್ರಾಣಿಗಳನ್ನು ಕೊಲ್ಲುತ್ತಾರೆ ಮತ್ತು ಅವುಗಳ ಮಾಂಸ ತಿನ್ನುತ್ತಾರೆ ಎನ್ನುವುದು ಎರಡನೆಯದು. ಪ್ರಾಣಿಗಳು ತಮಗೆ ತೊಂದರೆ ಮಾಡಬಹುದೆಂಬ ಕಾರಣದಿಂದಾಗಿ ಅವನ್ನು ಪೂಜಿಸುತ್ತಿದ್ದರು. ಒಟ್ಟಿನಲ್ಲಿ ಅವುಗಳಿಂದ ಪ್ರಯೋಜನ ಪಡೆದುಕೊಳ್ಳುವುದು

ಮತ್ತು ಅವಗಳಿಂದಾಗಬಹುದಾದ ತೊಂದರೆಗಳನ್ನು ತಪ್ಪಿಸಿಕೊಳ್ಳುವುದು ಅವುಗಳನ್ನು ಪೂಜಿಸುವ ಮೂಲ ಉದ್ದೇಶವಾಗಿತ್ತು. ಬಹುಶಃ ನಾಗಾರಾಧನೆಯ ಮೂಲ ಕಲ್ಪನೆ ಈ ಹಿನ್ನೆಲೆಯದು. ತಮ್ಮ ಧಾನ್ಯ ಶಕ್ತಿಯ ಸಂಕೇತಗಳಾಗಿದ್ದ ದೇವತೆಗಳನ್ನು ಪ್ರಾಣಿಗಳ ರೂಪದಲ್ಲಿ ಪೂಜಿಸುತ್ತಿದ್ದರು. ಡಯೋನಿಸ್ ದೇವತೆಯನ್ನು ಮೇಕೆ ಅಥವಾ ಹೋರಿಯ ರೂಪದಲ್ಲಿ, ಎಡನಿಸ್ ಮತ್ತು ಅಟ್ಟೆಸ್ ದೇವತೆಗಳನ್ನು ಹಂದಿಯ ರೂಪದಲ್ಲಿ, ವರ್ಬಿಸಿಯಸ್ಸನ್ನು ಕುದುರೆ ರೂಪದಲ್ಲಿ ಪೂಜಿಸಲಾಗುತ್ತಿತ್ತು. ಧಾನ್ಯ ದೇವತೆ ಬೆಕ್ಕು, ಮೊಲ, ಇಲಿ, ಕರಡಿ, ಕತ್ತೆ, ಕುರಿ, ನರಿ ಮೊದಲಾದ ಪ್ರಾಣಿಗಳ ರೂಪದಲ್ಲಿ ಹೊಲದಿಂದ ಹೊರಹೋಗುವುದೆಂಬ ಕಲ್ಪನೆಯಿಂದ ಅವನ್ನು ಕೊಲ್ಲುತ್ತಿದ್ದರು. ಇದರಿಂದ ಧಾನ್ಯದೇವತೆ ಹೊಲದಲ್ಲೇ ಉಳಿಯುವುದು ಎನ್ನುವುದು ನಂಬಿಕೆಯಾಗಿತ್ತು.

## ಪಾಪಪಶು ಮತ್ತು ಪೀಡೆ ಪರಿಹಾರ

ತಮಗೆ ಬರುವ ಕಾಯಿಲೆಯನ್ನು ಅಥವಾ ತಟ್ಟಿದ ಪಾಪವನ್ನು ಬೇರೊಂದು ವಸ್ತುವಿಗೆ ಅಥವಾ ವ್ಯಕ್ತಿಗೆ ಹೊರಿಸಿ ಅದರಿಂದ ಪಾರಾಗುತ್ತಿದ್ದುದು ಆದಿಮ ಜನರ ಒಂದು ಸಂಪ್ರದಾಯ. ಈ ಜನರು ಹೇಗೆ ತಮ್ಮ ಪಾಪಗಳನ್ನು ಪಾಪಪಶು (Scape goat)ವಿನ ಮೇಲೆ ಹೊರಿಸುತ್ತಿದ್ದರು. ಈ ಸಂಗತಿಯನ್ನು ಫ್ರೇಜರ ದಾಖಲಿಸಿದ್ದಾನೆ. ಯಾರಿಗಾದರೂ ಖಾಯಿಲೆಯಾದಾಗ ಅಲ್ಲಿನ ವೈದ್ಯ ಒಂದು ಮರದ ಪ್ರತಿಮೆಯನ್ನು ಮಾಡಿ ಅದನ್ನು ರೋಗಿಯ ಮೈಮೇಲೆ ನಿವ್ವಾಳಿಸಿ ದಾರಿಯಲ್ಲಿ ಎಸೆಯುತ್ತಿದ್ದರು. ಪಾಪ ಪಶು ವಸ್ತುವಾಗಬಹುದು ಅಥವಾ ಪ್ರಾಣಿಯೂ ಆಗಬಹುದು. ಮನುಷ್ಯನೂ ಆಗಬಹುದು. ಮೂರ್ ಜನಾಂಗದಲ್ಲಿ ಯಾರಿಗಾದರೂ ತಲೆನೋವು ಬಂದರೆ ಒಂದು ಕುರಿಯನ್ನು ಹಿಡಿದು ಅದನ್ನು ನೆಲಕ್ಕೆ ಬೀಳುವವರೆಗೂ ಹೊಡೆದು ತನ್ನ ತಲೆನೋವು ವರ್ಗಾವಣೆಯಾಗುವಂತೆ ಮಾಡುತ್ತಿದ್ದರು. ದಕ್ಷಿಣ ಭಾರತದಲ್ಲಿ ರಾಜನೊಬ್ಬ ಸಾಯುವ ಗಳಿಗೆಯಲ್ಲಿದ್ದಾಗ ಬ್ರಾಹ್ಮಣನೋರ್ವನಿಗೆ ಹೇಳಿ ಅವನಿಗೆ ಸಂಭಾವನೆ ಕೊಟ್ಟು ತನ್ನ ಪಾಪವನ್ನು ದೂರಕ್ಕೆ ಒಯ್ದು ಪಾಪ ಪರಿಹಾರ ಮಾಡಲು ನೇಮಿಸುತ್ತಿದ್ದರು. ಆತ ಎಲ್ಲ ಪಾಪ ಹೊರುವ ಮಾತುಕೊಟ್ಟು ರಾಜ್ಯದಿಂದ ಹೊರ ಹೋಗಬೇಕಾಗಿತ್ತು. ಮತ್ತೆ ಆತ ರಾಜ್ಯಕ್ಕೆ ಮರಳುವಂತಿರಲಿಲ್ಲ. ಸಾಮೂಹಿಕ ಖಾಯಿಲೆ ಬಂದಾಗಲೂ ಪಾಪಪಶು

ಬಳಕೆಯಾಗುತ್ತಿತ್ತು. ಕಾಲರಾ ಅಥವಾ ಪ್ಲೇಗ್ ಮೊದಲಾದ ರೋಗಗಳು ಬಂದಾಗ ಮರದ ಪ್ರತಿಮೆ ಮಾಡಿ ನಡುರಾತ್ರಿ ಅದನ್ನು ಪಕ್ಕದ ಊರಿಗೆ ದಾಟಿಸುತ್ತಿದ್ದರು. ಆ ಊರಿನವರು ಮತ್ತೆ ಮುಂದಕ್ಕೆ ದಾಟಿಸುತ್ತಿದ್ದರು. ಸಾಂಕ್ರಾಮಿಕ ರೋಗಗಳು ಬಂದಾಗ ಮನೆಗಳ ಬಾಗಿಲು ಹಾಕಿ ಮುಂದಿನ ಬಾಗಿಲು ಮಾತ್ರ ತೆರೆದಿಟ್ಟು ಗಟ್ಟಿಯಾಗಿ ಕೂಗಿ ಗಂಟೆ ಬಡಿದು ತಮ್ಮಟೆ ಬಾರಿಸಿ ಮಾರಿ ಓಡಿಸುತ್ತಿದ್ದರು. ಮಾರಿ ಓಡಿಸಿ ಬಾಗಿಲು ಭದ್ರಪಡಿಸುತ್ತಿದ್ದರು. ಹೀಗೆ ಎಳೆಂಟು ದಿನ ಬಾಗಿಲೇ ತೆರೆಯುತ್ತಿರಲಿಲ್ಲ. ಆಗಲೂ ಮಾರಿ ತೊಲಗದಿದ್ದಾಗ ಜನರೇ ಊರನ್ನು ಕೆಲವು ಕಾಲ ತೊರೆಯುತ್ತಿದ್ದರು. ಕೆಲವೊಮ್ಮೆ ದೋಣಿಯ ಮೂಲಕವೂ ಮಾರಿಯನ್ನು ಕಳುಹಿಸಿಕೊಡುತ್ತಿದ್ದರು. ಹೀಗೆ ಪೀಡೆ ತೊಲಗಿಸಿ ಆದ ಬಳಿಕ ಊರವರು ಸೇರಿಕೊಂಡು ಸಾಮೂಹಿಕ ವಿನೋದ ಕೂಟ ಏರ್ಪಡಿಸುತ್ತಿದ್ದರು. ಇಂತಹ ಸಂದರ್ಭ ಯಾರೂ ಮನಬಂದಂತೆ ವರ್ತಿಸಬಹುದಿತ್ತು. ಇಂತಹ ವಿಚಾರಗಳನ್ನೆಲ್ಲಾ ಬಹಳಷ್ಟು ವಿವರವಾಗಿ ಫ್ರೇಜರ್ ದಾಖಲಿಸಿದ್ದಾನೆ.

ಇಂದೂ ಶಿವರಾತ್ರಿಯ ಸಮಯಗಳಲ್ಲಿ ಕಳ್ಳತನ, ನೆರೆಕರೆಯವರನ್ನು ಪೀಡಿಸುವುದು, ಅವರ ಮನೆಗಳಿಗೆ ಕಲ್ಲೆಸೆಯುವುದು ಮೊದಲಾದ ಪದ್ಧತಿಗಳು ಉಳಿದುಕೊಂಡಿವೆ. ರಾಜನನ್ನು ಕೊಲ್ಲುತ್ತಿದ್ದ ಸಂಪ್ರದಾಯವೂ ಪಾಪಪಶುವಿನ ಹಿನ್ನೆಲೆಯುಳ್ಳದ್ದಾಗಿತ್ತು. ಹಾಗಾಗಿ ರಾಜ ಸತ್ತಾಗ ದುಃಖಪಡುವುದಕ್ಕಿಂತ ಹೆಚ್ಚು ಸಂತೋಷಪಡುತ್ತಿದ್ದರು. ಈ ಪರಂಪರೆ ಅರಿಕಿಯಾದ ರಾಜ ನೆಮಿಯಲ್ಲಿ ಅರ್ಚಕನನ್ನು ಕೊಲ್ಲುತ್ತಿದ್ದ ಸಂಬಂಧಕ್ಕೂ ಅರ್ಥ ಕೊಡುತ್ತದೆ. ಫ್ರೇಜರ ಪ್ರಾಚೀನ ಗ್ರೀಕ್ ಮತ್ತು ರೋಮ್‌ಗಳಲ್ಲಿದ್ದ ಪಾಪಪಶು, ಬಲಿಯ ವಿಧಾನಗಳನ್ನು ಚರ್ಚಿಸಿರುತ್ತಾನೆ.

## ಹೊಸ ಚಿಂತನೆಗಳಿಗೆ ದಾರಿ

ಫ್ರೇಜರನ ಗೋಲ್ಡನ್ ಬೋ ಅನೇಕ ಹೊಸ ಚಿಂತನೆಗಳಿಗೆ ದಾರಿ ಮಾಡಿಕೊಟ್ಟಿದೆ. ಅದುವರೆಗೆ ಚರ್ಚೆಯಾಗಿರದ ಜಾಗತಿಕ ಅಥವಾ ವಿಶ್ವಪರಂಪರೆಯ ಹಲವು ಸಂಗತಿಗಳ ಕುರಿತ ಅಧ್ಯಯನಗಳು ನಡೆದವು. ಫ್ರೇಜರ ಪ್ರತಿಪಾದಿಸಿರುವ ಮಾಟ, ನಿಷಿದ್ಧ, ಪಾಪಪಶು ಫಲವಂತಿಕೆಯ ಪೌರಾಣಿಕ ದೇವತೆಗಳು, ನರಬಲಿ, ಪ್ರಾಣಿಬಲಿ, ಇನ್ನೂ ಹಲವು ವಿಲಕ್ಷಣವಾದ

ಆಚರಣೆಗಳು ವ್ಯಾಪಕವಾದ ಮತ್ತು ಆಳವಾದ ಅಧ್ಯಯನ ವಿಶ್ಲೇಷಣೆಗಳಿಗೆ ಒಳಗಾದುವು. ಈ ಅಧ್ಯಯನಗಳು ಅನೇಕ ಸೂಕ್ಷ್ಮ ಮತ್ತು ನಿಗೂಢ ಅಂಶಗಳನ್ನು ಬಯಲುಗೊಳಿಸುವ ಒಳನೋಟಗಳನ್ನು ತೋರಿಸಿಕೊಟ್ಟುವು.

## ಫ್ರೇಜರನ ಪ್ರತಿಪಾದನೆಗಳ ಮರು ವಿಮರ್ಶೆ

ಇಷ್ಟಾದರೂ ಆಧುನಿಕ ಸಾಂಸ್ಕೃತಿಕ ಮಾನವ ಶಾಸ್ತ್ರಜ್ಞರು ಫ್ರೇಜರನ ಪ್ರತಿಪಾದನೆಗಳನ್ನು ಮತ್ತು ಪ್ರತಿಪಾದನೆಯ ವಿಧಾನಗಳನ್ನು ಮೂಲಭೂತವಾಗಿ ಪ್ರಶ್ನಿಸದೆ ಉಳಿಯಲಿಲ್ಲ. ತನ್ನ ಅನೇಕ ವಾದಗಳನ್ನು ಸಮರ್ಥಿಸಿಕೊಳ್ಳಲು ಬಳಸಿಕೊಂಡಿರುವ ಸಾಮಗ್ರಿಗಳೇ ಆಧಾರರಹಿತವಾದುವುಗಳು ಮತ್ತು ಹೆಚ್ಚಿನವು ಅವಾಸ್ತವ ಹಾಗೂ ಭ್ರಾಮಕ ತಳಹದಿಯವು. ಅವೆಲ್ಲವೂ ಅಧ್ಯಯನಕಾರನ ಪ್ರತ್ಯಕ್ಷ ಅನುಭವಗಳಾಗಿರದೆ ಪರೋಕ್ಷ ಮಾಹಿತಿಗಳಾಗಿರುತ್ತವೆ. ಕ್ರೈಸ್ತ ಮಿಶನರಿಗಳಾಗಲಿ, ಪ್ರವಾಸಿಗರಾಗಲೀ ನಿರೂಪಿಸಿ ದಾಖಲಿಸಿರುವ ವಿಷಯಗಳೇ ಫ್ರೇಜರನಿಗೆ ಅಧಾರವಾಗಿದ್ದುವು. ಈ ನಿರೂಪಣೆಗಳು ವಸ್ತು ನಿಷ್ಠ ಮತ್ತು ಮತ್ತು ಅಧಿಕೃತ ಎನ್ನುವಂತಿಲ್ಲ ಎನ್ನುವುದೇ ಪ್ರಧಾನವಾದ ಆರೋಪ. ಆದಿಮ ಜನರ ಪರಂಪರೆಗಳ ಅಧ್ಯಯನಕ್ಕೆ ಆ ಜನರ ಭಾಷೆಯ ಪರಿಚಯ ಇರಬೇಕಾಗುತ್ತದೆ. ಪ್ರವಾಸಿಗರಿಗೆ ಹಾಗೂ ಕ್ರೈಸ್ತ ಮಿಶನರಿಗಳಿಗೆ ಈ ಭಾಷೆಗಳ ಪರಿಚಯವಿತ್ತು ಎನ್ನುವ ಖಾತ್ರಿ ಇಲ್ಲ. ಆಧುನಿಕ ಸಾಂಸ್ಕೃತಿಕ ಮಾನವ ಶಾಸ್ತ್ರಜ್ಞರು ಯಾವುದೇ ಜನಾಂಗದ ಪರಂಪರೆಯ ಬಗೆಗೆ ಅಧ್ಯಯನಕ್ಕೆ ಹೊರಡುವ ಮೊದಲು ಆ ಜನಾಂಗದ ಭಾಷೆಯನ್ನು ಕಲಿತು ಮುಂದುವರಿಯುತ್ತಾರೆ. ಕೊನೆಯ ಪಕ್ಷ ಓರ್ವ ದುಭಾಷಿಯನ್ನಾದರೂ ಗೊತ್ತುಪಡಿಸಿಕೊಳ್ಳುತ್ತಾರೆ. ಇಂತಹ ವಿಧಾನದಲ್ಲಿ ಸಮಗ್ರ ಕ್ಷೇತ್ರಕಾರ್ಯ ಮತ್ತು ದಾಖಲೀಕರಣ ಮೊದಲ ಕೆಲಸವಾಗುತ್ತದೆ. ಸರ್ವಸಂಗ್ರಹದ ಬಳಿಕ ಸಮಷ್ಟಿ ಆಧಾರದ ಮೇಲೆ ತಮ್ಮ ವಾದಗಳನ್ನು ಪ್ರತಿಪಾದಿಸಲು ಪ್ರಮೇಯಗಳನ್ನು ಹುಟ್ಟುಹಾಕುತ್ತಾರೆ. ಭಾರತದ ಅನೇಕ ಬುಡಕಟ್ಟು ಜನರ ಕುರಿತು ವೆರಿಯರ್ ಎಲ್ವಿನ್ ನಡೆಸಿರುವ ಅಧ್ಯಯನವಾಗಲಿ, ಟ್ರೋಬ್ರಿಯಾಂಡ್ ದ್ವೀಪ ಹಾಗೂ ಇತರೆಡೆಗಳಲ್ಲಿ ಬ್ರಾನಿಸ್ಲಾ ಮ್ಯಾಲಿನೋಸ್ಕಿ ನಡೆಸಿರುವ ಅಧ್ಯಯನವಾಗಲಿ ಈ ಉದ್ದೇಶ ಮತ್ತು ದೃಷ್ಟಿಕೋನಗಳ ಹಿನ್ನೆಲೆಯವು. ಇಂತಹ ಅಧ್ಯಯನ ಮಾದರಿಗಳನ್ನು ಗಮನಿಸಿದಾಗ

ಫ್ರೇಜರನು ಅನುಸರಿಸಿದ್ದ ಅಧ್ಯಯನ ವಿಧಾನ ಅಷ್ಟು ವೈಜ್ಞಾನಿಕವಾಗಿಲ್ಲ ಎನ್ನುವ ಹಾಗಿಲ್ಲ (ನೋಡಿ : ಥಿಯೋಡೊರ್ ಗ್ಯಾಸ್ಟರ್, 1959)

ಆದಿಮ ಜನರಿಗೆ ಮತ್ತು ಜನಪದರಿಗೆ ಫ್ರೇಜರ ಸ್ಪಷ್ಟವಾಗಿ ವ್ಯತ್ಯಾಸವನ್ನು ಗುರುತಿಸಿದ್ದರೂ ಆದಿಮ ಜನರಿಗೆ ಮತ್ತು ಅನಾಗರಿಕರೆನ್ನುವ ಜನಾಂಗಗಳಿಗೆ ಯಾವುದೇ ವ್ಯತ್ಯಾಸವನ್ನು ಕಲ್ಪಿಸಿಲ್ಲ. ಈ ಕಾರಣದಿಂದಾಗಿ ಫ್ರೇಜರನ ಉದಾಹರಣೆಗಳು ಅನೇಕ ಬಾರಿ ಸಮಂಜಸವಾಗಿರದೆ ತಪ್ಪು ಅಭಿಪ್ರಾಯಗಳಿಗೆ ಎಡೆಮಾಡಿಕೊಡುತ್ತವೆ. ಆದಿಮ ಜನರಲ್ಲಿ ಕೂಡ ವಿವಿಧ ಪರಂಪರೆಗಳ ಸ್ತರಗಳನ್ನು ಗುರುತಿಸುವುದು ಸಾಧ್ಯ. ಆದರೆ ಫ್ರೇಜರ ಆದಿಮ ಜನರೆಲ್ಲರನ್ನೂ ಒಂದೇ ಮಟ್ಟದ ಅಳತೆಗೋಲಿಗೆ ಸೀಮಿತಗೊಳಿಸಿರುವುದು ಇನ್ನೊಂದು ಕೊರತೆ. ಥಿಯೋಡರ್ ಗ್ಯಾಸ್ಟರ್ (1959, 18) ಪ್ರಕಾರ ಫ್ರೇಜರ್ ಭ್ರಮಿಸಿದ್ದ ಆರುಂಟ ಜನಾಂಗದವರು ಆದಿಮ ಜನರಲ್ಲಿ ಪ್ರಾಚೀನರಾದರೆ ವಿಲ್‌ಹೆಲ್ಮ್ ಸ್ಮಿತ್ಥ್ ಅಧ್ಯಯನ ತಿಳಿಸುವಂತೆ ಅವರು ಆದಿಮ ಜನರಲ್ಲೆ ಸಾಕಷ್ಟು ಮುಂದುವರಿದವರಾಗಿರುತ್ತಾರೆ.

ಪ್ರಚಲಿತವಾಗಿದ್ದ ಜನಪದ ಸಂಪ್ರದಾಯಗಳ ಮತ್ತು ನಂಬಿಕೆಗಳ ಬಗೆಗೆ ಫ್ರೇಜರ ಹೊಂದಿದ್ದ ಅಭಿಪ್ರಾಯವನ್ನು ಅನೇಕ ವಿದ್ವಾಂಸರು ಒಪ್ಪಿಕೊಂಡಿಲ್ಲ. ಈ ಜನಪದ ಸಂಪ್ರದಾಯಗ್ಗಳು ಮತ್ತು ನಂಬಿಕೆಗಳು ಎನ್ನುವುದು ಆದಿಮ ಜನರ ಬಳುವಳಿ ಮತ್ತು ಪಳೆಯುಳಿಕೆಗಳು ಎಂದಿದ್ದರೂ ಅವೆಲ್ಲವೂ ಹಾಗೆ ಬಂದುವುಗಳು ಎನ್ನುವಂತಿಲ್ಲ. ಅವುಗಳಲ್ಲಿ ಎಷ್ಟೋ ಅಂಶಗಳು ಆಮೇಲೆ ಹೊಸದಾಗಿ ರೂಢಿಗೆ ಬಂದು ಪರಂಪರೆಗೆ ಸೇರ್ಪಡೆಗೊಂಡವು ಎಂಬುದನ್ನು ಮರೆಯುವಂತಿಲ್ಲ. ಈ ಅಂಶವನ್ನು ಫ್ರೇಜರ ಗಮನಿಸದೆ ಅವೆಲ್ಲವೂ ಆದಿಮ ಜನರ ಪರಂಪರೆಯ ಪಳೆಯುಳಿಕೆಗಳೆಂದು ಪ್ರತಿಪಾದನೆ ಮಾಡಿರುವುದು ಸರಿಯೆನಿಸುವುದಿಲ್ಲ. (ಥಿಯೋಡರ್ ಗ್ಯಾಸ್ಟರ್ 1959, 19). ಹೀಗಾಗಿ ಗೋಲ್ಡನ್ ಬೋದಲ್ಲಿ ಪ್ರತಿಪಾದಿಸಿರುವ ಎಲ್ಲ ವಿಷಯಗಳ ಕ್ಷೇತ್ರಗಳಲ್ಲೂ ಮುಂದೆ ಸಾಕಷ್ಟು ಅಧ್ಯಯನಗಳು ನಡೆಯುವ ಸಾಧ್ಯತೆಗಳನ್ನು ಫ್ರೇಜರ್ ತೋರಿಸಿಕೊಟ್ಟಿರುವುದಂತೂ ಅತ್ಯಂತ ಮಹತ್ವವಾದ ಕೊಡುಗೆಯೆನ್ನಬೇಕು. ಹಾಗೆಂದು ಫ್ರೇಜರನ ಅಂದಿನ ಪ್ರಮುಖ ವಿಷಯಗಳೆಲ್ಲವೂ ಇಂದು ತೀರ ಹಳೆಯವೆನಿಸಿಕೊಂಡಿವೆ. ಆದಿಮ ಕಾಲದ ಮಾಟಕಲೆ

ಮತ್ತು ಆದಿಮ ಜನರ ಧರ್ಮ ಇವುಗಳ ರಾಚನಿಕ ಸ್ವರೂಪ, ಇವುಗಳಿಗಾಗಿರುವ ಸಂಬಂಧಗಳು, ಅಂತರಗಳು, ಮಾಟಕಲೆ ಮತ್ತು ವಿಜ್ಞಾನ ಇವುಗಳಿಗಿರುವ ಸಂಬಂಧ ವ್ಯತ್ಯಾಸಗಳು ಮೊದಲಾದ ವಿಚಾರಗಳಲ್ಲಿ ಫ್ರೇಜರನ ಅಧ್ಯಯನದ ಬಳಿಕ ಅನೇಕ ಅಧ್ಯಯನ ಗ್ರಂಥಗಳೇ ಹೊರಬಂದುವು. ಈ ಗ್ರಂಥಗಳಲ್ಲೂ ವಿವಿಧ ವಿದ್ವಾಂಸರು ಏಕಾಭಿಪ್ರಾಯ ಹೊಂದಿರುವುದು ಸಹಜವಾಗಿಯೇ ಸಾಧ್ಯವಿಲ್ಲ. ಅಪೇಕ್ಷಣೀಯವೂ ಅಲ್ಲ. ಆದರೆ ಮ್ಯಾರೆಟ್, ಹ್ಯೂಬರ್ಟ್, ಡರ್ಕ್‌ಹೀಮ್, ಲೆವಿಬ್ರೂಲ್ಹ್ , ಇವಾನ್ಸ್ ಪ್ರಿಚರ್ಡ್ ಮೊದಲಾದವರ ಅಧ್ಯಯನ ಸಾರಗಳನ್ನು ಕ್ರೋಢೀಕರಿಸಿ ಪ್ರತಿಯೊಬ್ಬ ವಿದ್ವಾಂಸರ ಇತಿಮಿತಿಗಳನ್ನೂ ಕೊರತೆಗಳನ್ನೂ ಎತ್ತಿತೋರಿಸುವ ಕೆಲಸವನ್ನು ಪ್ರಸಿದ್ಧ ಸಾಂಸ್ಕೃತಿಕ ಮಾನವಶಾಸ್ತ್ರಜ್ಞ ಮ್ಯಾಲಿನೋಸ್ಕಿ ಸಮರ್ಥವಾಗಿ ಮಾಡಿರುವುದಲ್ಲದೆ ಉಳಿದವರಿಗಿಂತ ಹೆಚ್ಚು ಮೌಲಿಕವಾದ ವಾದವನ್ನು ಪ್ರತಿಪಾದಿಸಿರುವುದನ್ನು ಗಮನಿಸಬೇಕು. (ಹೆಚ್ಚಿನ ವಿವರಗಳಿಗೆ ನೋಡಿ ಮಾಲಿನೋಸ್ಕಿ, 1948).

ಆದಿಮ ಜನರ ಮಾಟಕಲೆಯ ಕುರಿತ ಫ್ರೇಜರನ ವಿವರಣೆಗೆ ಅದರದ್ದೇ ಆದ ಮಿತಿ ಇದೆ. ಒಂದು ಅರ್ಥದಲ್ಲಿ ಅದು ಬೌದ್ಧಿಕ ನೆಲೆಯ ವಿವರಣೆ. ಈ ವಿವರಣೆಯಿಂದ ಮಾಟವಿದ್ಯೆಯ ಸಮಗ್ರ ಪರಿಕಲ್ಪನೆ ಉಂಟಾಗದು. ಮಾಟದ ಬಗೆಗೆ ಜನರು ಏನು ಉದ್ದೇಶವಿರಿಸಿಕೊಂಡಿದ್ದಾರೆ ಎನ್ನುವ ಕಡೆಗೆ ಫ್ರೇಜರ ಹೆಚ್ಚು ಗಮನ ಕೊಟ್ಟಿರುವನಾದರೂ ಮಾಟವಿದ್ಯೆಯ ಪ್ರಕ್ರಿಯೆಗಳ ಬಗೆಗೆ ಅಷ್ಟಾಗಿ ಗಮನ ಹರಿಸಲಿಲ್ಲ. ಫ್ರೇಜರನ ಮೇಲಿರುವ ವಿದ್ವಾಂಸರ ಆರೋಪಗಳಲ್ಲಿ ಇದೂ ಒಂದು. ಮಾಟಕಲೆಯಲ್ಲಿ ಎರಡು ವಿಧಗಳನ್ನು ಗುರುತಿಸಲಾಗಿದೆಯಾದರೂ ಅವುಗಳ ಬಗೆಗೆ ಕೊಡುವ ಉದಾಹರಣೆಗಳು ಮಾಟಕ್ಕೆ ಸಂಬಂಧಿಸಿರದೆ ಅವು ಪ್ರಾರ್ಥನಾವಿಧಿಗಳಾಗಿರುತ್ತವೆ. ಒಟ್ಟಿನಲ್ಲಿ ಮಾಟದ ಕುರಿತಾಗಿ ಬಾಹ್ಯಸ್ವರೂಪವನ್ನು ಫ್ರೇಜರ ಸಮರ್ಥವಾಗಿ ಚಿತ್ರಿಸಿರುವನಾದರೂ ಆ ಸಂಬಂಧವಾದ ಮೂಲನೆಲೆಯ ಕಡೆಗೆ ಗಮನ ಕೊಟ್ಟಿಹಾಗಿಲ್ಲ.

ಮಾಟದ ಕ್ಷೇತ್ರದಲ್ಲಿ ಆಲೋಚನೆಗೆ ಬೆಲೆಯಿರದೆ ಭಾವುಕ ಮನಸ್ಸಿನ ಮೇಲೆಯೇ ಅದರ ಪರಿಣಾಮ ಹೆಚ್ಚು. ವಿಜ್ಞಾನದಂತೆ ಅದು ಪ್ರತ್ಯಕ್ಷ ಫಲಿತಾಂಶಗಳನ್ನು ಅಲ್ಲೋ ಇಲ್ಲೋ ಕಾಕತಾಳೀಯವಾಗಿ ಅಷ್ಟೇ ಕೊಡಬಲ್ಲುದು. ಈ ನಿಟ್ಟಿನಲ್ಲಿ ಮಾಟ ಒಂದು

ತೋರಿಕೆ ವಿಜ್ಞಾನ (Pseudo science) ಎಂದು ಹೇಳಿರುವ ಫ್ರೇಜರನ ಅಭಿಪ್ರಾಯವನ್ನು ಮ್ಯಾಲಿನೋಸ್ಕಿ ಒಪ್ಪಿಕೊಂಡ ಹಾಗಿದೆ. ಸಮಾಜದ ಒಳಿತಿಗಾಗಿಯೇ ರಾಜನೊಬ್ಬ ಮಾಟಗಳನ್ನು ಮಾಡುತ್ತಿರಲಿಲ್ಲ. ಕೆಲವೊಮ್ಮೆ ತನ್ನ ವೈಯಕ್ತಿಕ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಮಾಟ ನಡೆಸುತ್ತಿದ್ದ ಸಂದರ್ಭಗಳಿದ್ದುವು. ಆದರೆ ಈ ವ್ಯತ್ಯಾಸವನ್ನು ಫ್ರೇಜರ ಗಮನಿಸಿದಂತಿಲ್ಲ. ಫ್ರೇಜರ ಪ್ರತಿಪಾದಿಸಿದ್ದ ಸೋಂಕು ಮಾಟದ ಬಗೆಗೂ ಫ್ರೇಜರನ ದೃಷ್ಟಿಕೋನಕ್ಕಿಂತ ಭಿನ್ನವಾಗಿ ಆದರೆ ಹೆಚ್ಚು ಅರ್ಥಪೂರ್ಣವಾಗಿ ವಿವರಿಸಿರುವ ವಿದ್ವಾಂಸರಿದ್ದಾರೆ. ಜೊತೆಗೆ ಫ್ರೇಜರ ವಿವರಿಸಿರುವ ಆದಿಮ ಜನರ ರಾಜನ ಕಲ್ಪನೆಯ ಬಗೆಗೂ ಭಿನ್ನಾಭಿಪ್ರಾಯಗಳಿವೆ. (ನೋಡಿ:ಥಿಯೋಡೋರ್ ಗ್ಯಾಸ್ಟರ್ 1959,16-18)

ಫ್ರೇಜರ ಹೇಳಿರುವ ನಿಷಿದ್ಧಗಳು ಯಾವಾಗಲೂ ಒಂದು ಆಚರಣೆ ಇಲ್ಲವೆ ಸಾಮಾಜಿಕ ನಿಷೇಧಗಳೇ ಆಗಿರಬೇಕಾಗಿಲ್ಲ. ವ್ಯಕ್ತಿಯ ಇಷ್ಟಾನಿಷ್ಟಗಳ ಮೇಲೆ ನಿರ್ಧಾರವಾಗಿರುವ ಸಂದರ್ಭಗಳು ಇವೆ. ಅದರೆ ಫ್ರೇಜರನ ಗಮನ ಈ ಕಡೆಗೆ ಹರಿದಹಾಗಿಲ್ಲ.

ಫ್ರೇಜರ ಗುರುತಿಸಿರುವ ಸಸ್ಯಶಕ್ತಿಯ ದೇವತೆಗಳೂ ಅಷ್ಟೇ ಸೀಮಿತವಾದುದಲ್ಲ. ಎಲ್ಲ ವಸ್ತುಗಳಿಗೂ ಚೇತನ ನೀಡುವ ಮೂರ್ತರೂಪಗಳಾಗಿ ಈ ದೇವತೆಗಳಿರುತ್ತವೆ. ಓಸಿರಿಸ್ಸಿನ ಪೂಜೆ ಫ್ರೇಜರ ಹೇಳುವಷ್ಟು ಪ್ರಾಚೀನವೂ ಅಲ್ಲ. ಮೂಲಭೂತವೂ ಅಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯ. ಅರಿಕಿಯಾದ ಡಯಾನಾ ದೇವತೆಯ ಅರ್ಚಕಸ್ಥಾನಕ್ಕೆ ಬರಲು ಮಾಡಬೇಕಾಗಿದ್ದ ಆಚರಣೆಗೆ ಸಂಬಂಧಿಸಿದಂತೆ ಫ್ರೇಜರನ ಪ್ರತಿಪಾದನೆಯನ್ನು ವಿದ್ವಾಂಸರು ಸಾರಾಸಗಟಾಗಿ ತ್ಯಜಿಸಿದ್ದಾರೆ. ಏನಿಸ್ ಹಿಡಿದ ಚಿನ್ನದ ಕೊಂಬೆಗೂ ಮಿಸೆಲ್ ಟೋಗೂ ಯಾವುದೇ ಸಂಬಂಧವಿಲ್ಲ ಮತ್ತು ಅದು ಎಲ್ಲ ಪೂಜಾಗೃಹಗಳಲ್ಲಿಯೂ ಉಪಯೋಗವಾಗುವ ಸಾಮಾನ್ಯ ಕೊಂಬೆಯಾಗಿರುವುದರಿಂದ ಈ ದೃಷ್ಟಿಯಲ್ಲಿ ಕೃತಿಗೆ ನೀಡಿರುವ ಗೋಲ್ಡನ್ ಬೋ ಹೆಸರು ಸಮಂಜಸವಾದ್ದಲ್ಲ ಎನ್ನುವುದು ವಿದ್ವಾಂಸರ ಪ್ರಬಲವಾದ ಆರೋಪ.

ಇಷ್ಟಾಗಿಯೂ ಫ್ರೇಜರನ ಗೋಲ್ಡನ್ ಬೋ ಆದಿಮ ಜನರ ಕುರಿತು ವ್ಯಾಖ್ಯಾನಿಸಿದ ಮೊದಲ ಗ್ರಂಥ ಎನ್ನುವುದನ್ನು ಮರೆಯುವ ಹಾಗಿಲ್ಲ. ಲಭ್ಯ ಮಾಹಿತಿ ಮೂಲಗಳ ವ್ಯವಸ್ಥಿತ ಜೋಡಣೆ ಮತ್ತು ವಿಶ್ಲೇಷಣೆ ಇದನ್ನು ಉತ್ಕೃಷ್ಟಗೊಳಿಸಿದೆ.

## ಫ್ರೇಜರ ಮತ್ತು ಮ್ಯಾಲಿನೊಸ್ಕಿ

ಲಿವರ್ಪೂಲ್ ವಿಶ್ವವಿದ್ಯಾನಿಲಯದಲ್ಲಿ ಸರ್ ಜೇಮ್ಸ್ ಫ್ರೇಜರನ ಗೌರವಾರ್ಥ 1925ನೆಯ ನವಂಬರ್ ತಿಂಗಳಲ್ಲಿ ನಡೆದ ಸಮಾರಂಭದಲ್ಲಿ ಆಧುನಿಕ ಮಾನವ ಶಾಸ್ತ್ರಜ್ಞರಲ್ಲಿ ಪ್ರಮುಖನಾದ ಬ್ರಾನಿಸ್ಲಾ ಮ್ಯಾಲಿನೋಸ್ಕಿ (1948, 93 - 148) ನೀಡಿದ ಉಪನ್ಯಾಸ್ ಕೆಲವು ಮುಖ್ಯ ಭಾಗಗಳನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆನಿಸುತ್ತದೆ.

ಒಂದು ವೇಳೆ ಗತವನ್ನು ವರ್ತಮಾನಕ್ಕೆ ತರಿಸುವ ಶಕ್ತಿಯೊಂದು ನನಗೆ ಇರುತ್ತಿದ್ದರೆ ನಿಮ್ಮೆಲ್ಲರನ್ನೂ 30 ವರ್ಷಗಳ ಹಿಂದೆ ಕರೆದೊಯ್ಯುತಿದ್ದೆ. ಕ್ರಾಕೋ (Cracow)ದ ಸ್ಲಾವರ ವಿಶ್ವವಿದ್ಯಾನಿಲಯ ನಗರವನ್ನು ತೋರಿಸುತ್ತಿದ್ದೆ. ಕ್ರಾಕೋ ಎನ್ನುವುದು ಪೂರ್ವ ಯೂರೋಪಿನ ಅತ್ಯಂತ ಪ್ರಾಚೀನ ವಿಶ್ವವಿದ್ಯಾಲಯವಿರುವ ಪೋಲಾಂಡಿನ ಹಳೆಯ ರಾಜಧಾನಿ. ಆಗ ಅಲ್ಲಿನ ಮಧ್ಯಕಾಲೀನ ಕಾಲೇಜು ಕಟ್ಟಡದಿಂದ ಹೊರಹೋಗುತ್ತಿರುವ ವಿದ್ಯಾರ್ಥಿಯೊಬ್ಬನನ್ನು ತೋರಿಸುತ್ತಿದ್ದೆ. ಸಹಜವಾಗಿಯೂ ಆತ ತನ್ನ ಭಾರವಾದ ಮನಸ್ಸಿಗೆ ಒಂದಿಷ್ಟಾದರೂ ಸಮಾಧಾನ ತಂದುಕೊಡುವ ಮತ್ತು ಈಗಾಗಲೇ ಖ್ಯಾತವಾದ ಚಿನ್ನದ ಅಕ್ಷರಗಳಿಂದ ಕಂಗೊಳಿಸುತ್ತಿರುವ ಅತ್ಯಂತ ಆಕರ್ಷಕ ವಿನ್ಯಾಸದ ಚಿನ್ನದ ಕೊಂಬೆಯ ಸಂಕೇತವಿರುವ ಮೂರು ಹಸುರು ಸಂಪುಟಗಳನ್ನು ತೋಳುಗಳಲ್ಲೇರಿಸಿಕೊಂಡು ಹಾಗೂ ಅವನ್ನು ಪ್ರೀತಿಯಿಂದ ಎದೆಗವಚಿಕೊಂಡು ಹೆಜ್ಜೆ ಹಾಕುತ್ತಿರುವ ವಿದ್ಯಾರ್ಥಿ.

ನನ್ನ ದೈಹಿಕ ಅನಾರೋಗ್ಯದ ಕಾರಣ ನಾನು ಕೈಗೊಂಡಿದ್ದ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳ ಸಂಶೋಧನೆಯನ್ನು ಸ್ವಲ್ಪ ಸಮಯ ಅನಿವಾರ್ಯವಾಗಿಯೇ ಬದಿಗಿರಿಸಬೇಕಾಗಿ ಬಂತು. ಆದರೆ ನನಗೆ ಅತ್ಯಂತ ಇಷ್ಟವಿರುವ ಜಾದುಗಾರಿಕೆಯ ಹವ್ಯಾಸವನ್ನು ಮುಂದುವರಿಸುವ ಅನುಮತಿ ಸಿಕ್ಕಿತ್ತು. ಮೊತ್ತ ಮೊದಲು ಇಂಗ್ಲಿಷಿನ

ಶ್ರೇಷ್ಠ ಕೃತಿಯೊಂದನ್ನು ಅದರ ಮೂಲದಲ್ಲೇ ಓದಿ ಮುಗಿಸಬೇಕೆಂದು ನಾನು ತೀರ್ಮಾನಿಸಿದೆ. ಬಹುಶಃ ನನ್ನನ್ನು ಭವಿಷ್ಯತ್ತಿನ ಕಡೆಗೆ ನೋಡಲು ಮತ್ತು ಹಿಂದಿನ ಈ ಸಮಾರಂಭದ ಸಂದರ್ಭದ ಅವಕಾಶವನ್ನು ಮಾಡಿಕೊಡುತ್ತಿದ್ದಲ್ಲಿ ನನ್ನ ಮಾನಸಿಕ ದುಗುಡ ಸ್ವಲ್ಪಮಟ್ಟಿಗಾದರೂ ಕಡಿಮೆಯಾಗುತ್ತಿತ್ತು. ಇಂತಹ ಅದ್ವಿತೀಯ ಪ್ರೇಕ್ಷಕ ಶ್ರೋತೃಗಳ ಮುಂದೆ ಸರ್ ಜೇಮ್ಸ್ ಫ್ರೇಜರನ ಹೆಸರಿನಲ್ಲಿ ಗೋಲ್ಡನ್ ಬೋದ ಭಾಷೆಯಲ್ಲೇ ಉಪನ್ಯಾಸ ನೀಡುವ ಅವಕಾಶ ದೊರೆತಿರುವುದು ಅತ್ಯಂತ ಅಭಿಮಾನದ ಸಂಗತಿಯಾಗಿದೆ.

ಫ್ರೇಜರನ ಮಹೋನ್ನತ ಕೃತಿಯನ್ನು ಓದಲು ಎತ್ತಿಕೊಂಡಾಗಲೇ ನಾನು ಪೂರ್ಣವಾಗಿ ಅದರಲ್ಲಿ ಲೀನವಾಗಿ ಹೋದೆ. ಅದರಿಂದ ಹೊರಬರಲು ನನಗೆ ಸಾಧ್ಯವಾಗಲೇ ಇಲ್ಲ. ಫ್ರೇಜರನಿಂದ ನಿರೂಪಿಸಲ್ಪಟ್ಟ ಮಾನವ ಶಾಸ್ತ್ರವೆನ್ನುವುದು ಒಂದು ಪ್ರಮುಖವಾದ ವಿಜ್ಞಾನ ಮಾತ್ರವಲ್ಲದೆ ಇದಕ್ಕೆ ಸರಿ ಮಿಗಿಲೆನಿಸುವ ಅಧ್ಯಯನವೇ ಬೇರೊಂದು ಇಲ್ಲವೆನ್ನಬಹುದು. ಈ ಕಾರಣಕ್ಕಾಗಿಯೇ ನಾನು ಫ್ರೇಜರನ ಮಾನವ ಶಾಸ್ತ್ರದ ಅಧ್ಯಯನ ಕಾರ್ಯದಲ್ಲಿ ನನ್ನನ್ನು ತೊಡಗಿಸಿಕೊಳ್ಳಲು ಬದ್ಧನಾದೆ.

'ಗೋಲ್ಡನ್ ಬೋ ಕುಲಲಾಂಛನದ ವಾರ್ಷಿಕೋತ್ಸವದ ಆಚರಣೆಯ ನೆಪದಲ್ಲಿ ನಾವೆಲ್ಲರೂ ಇಲ್ಲಿ ಸಮಾವೇಶಗೊಂಡಿದ್ದೇವೆ. ಮಾನವಕುಲಶಾಸ್ತ್ರ ಸಂಘಟನೆಯನ್ನು ಹಾಗೂ ಮಾನವ ಸಂಪನ್ಮೂಲವನ್ನು ನವೀಕರಿಸಿ ಬಲಪಡಿಸಿಕೊಳ್ಳಲು ಈ ಕ್ಷೇತ್ರದ ಬಗೆಗೆ ನಮಗಿರುವ ಆಸಕ್ತಿ, ಪ್ರೀತಿ, ಕಾಳಜಿಗಳ ಸಂಕೇತವಾಗಿಯೂ ಈ ಸಮಾವೇಶಕ್ಕೆ ಒಂದು ಮಹತ್ವವಿದೆ. ಈ ಮಹಾ ವಿದ್ವಾಂಸನಿಗೆ ನಿಮ್ಮೆಲ್ಲರ ಪರವಾಗಿ ನಾನು ಅತ್ಯಂತ ಆದರದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.'

'ಇವೆಲ್ಲವುಗಳಲ್ಲೂ ನನ್ನ ಕೆಲಸ ಅತ್ಯಂತ ಸಂತೋಷದಾಯಕವಾದ್ದು ಮತ್ತು ಸುಲಭದ್ದು. ಸದಾ ನನ್ನ ಮಾರ್ಗದರ್ಶಕನೆಂದು ಭಾವಿಸಿಕೊಂಡಿದ್ದ ವ್ಯಕ್ತಿಗೆ ಗೌರವ ಸಲ್ಲಿಸುವ ಸಂದರ್ಭವಿದೆಂದುಕೊಂಡಿದ್ದೇನೆ. ಆದರೆ ಅದೇ ಕಾಲಕ್ಕೆ ನನಗೆ ತೀರ ಕಷ್ಟದ ಕೆಲಸವೂ ಇದಾಗಿ ಪರಿಣಮಿಸಿದೆ. ಈ ವ್ಯಕ್ತಿಯಿಂದ ಬಹಳಷ್ಟು ಪಡೆದ ಬಳಿಕವೂ ಅದಕ್ಕೆ ಪ್ರತಿಯಾಗಿ ನೀಡಲು ನನ್ನಲ್ಲಿ ಏನೂ ಇಲ್ಲವೆನ್ನುವ ಅಳುಕೂ ಒಂದೆಡೆ ಇದೆ.

ಹೀಗಿದ್ದರೂ ಈ ಎಲ್ಲ ಗೊಂದಲಗಳಿಂದಲೂ ಬಿಡುಗಡೆ ಹೊಂದಿ, ಮಾನಸಿಕ ಸಮತೋಲನವನ್ನು ಉಳಿಸಿಕೊಂಡು ನಾನಿಲ್ಲಿ ಮಾತನಾಡಬೇಕಾಗಿದೆ. ಹೀಗೆ ನಾನು ಮಾತನಾಡುವಾಗಲೂ ನಮ್ಮಲ್ಲನೇಕರಿಗೆ ಫ್ರೇಜರ ಹೇಗೋ ಹಾಗೆಯೇ ಫ್ರೇಜರನಿಂದ ಸ್ಫೂರ್ತಿ ಪಡೆದವರು ಅಥವಾ ಆತನ ಬದುಕಿನುದ್ದಕ್ಕೂ ಪ್ರಾಣಸ್ನೇಹಿತರಾಗಿದ್ದವರು ಯಾರಾದರೂ ನನ್ನ ನಾಲಗೆಯ ಮೂಲಕ ಮಾತನಾಡುವ ಹಾಗಾಗಲಿ ಎಂದು ಹಾರೈಸುತ್ತಿದ್ದೇನೆ. ನಾನು ತಿಳಿಸಿದ ಅವರೆಲ್ಲರೂ ಫ್ರೇಜರನನ್ನು ವರ್ಣಿಸುವ ಹಾಗೆ ನಾನೀಗ ಆತನ ಬಗೆಗೆ ಹೇಳುವುದು ಅದನ್ನೇ ಆಗಿದೆ'

'ಫ್ರೇಜರನೆಂದರೆ ಆದಿಮಾನವನ ಓರ್ವ ಸಮಕಾಲೀನ ಪ್ರತಿನಿಧಿ. ಯಾರ ಆಲೋಚನೆ ಸಂವೇದನೆಗಳ ಜೀವನಾಡಿಯನ್ನು ಎಲ್ಲೆಡೆಯೂ ತನ್ನ ಬರವಣಿಗೆಯ ಮೂಲಕ ಹರಿಸಿರುತ್ತಾನೋ ಅಂತಹ ಜನರ ಹರಿಕಾರ ಇನ್ನೊಂದು ರೀತಿಯಲ್ಲಿ ಹೇಳುವುದಿದ್ದರೆ ನಾನು ನನ್ನದೇ ಆದ ಸಿದ್ಧಾಂತಗಳನ್ನು ಮುಂದಿಡಲು ಹೋಗದೆ ಮಾನವ ಶಾಸ್ತ್ರಕ್ಕೆ ಸಂಬಂಧಿಸಿ ನಾನು ವಾಯುವ್ಯ ಮಲೆಯೇಶ್ಯಾದಲ್ಲಿ ನಡೆಸಿದ ಕ್ಷೇತ್ರಾಧ್ಯಯನದ ಕೆಲವು ಫಲಿತಾಂಶಗಳನ್ನು ನಿಮ್ಮಲ್ಲಿ ಹಂಚಿಕೊಳ್ಳಲು ಬಯಸುತ್ತಿದ್ದೇನೆ. ಫ್ರೇಜರ ನೇರವಾಗಿ ಹೆಚ್ಚು ಗಮನ ನೀಡದ ಒಂದು ವಿಚಾರದತ್ತ ನನ್ನ ಮಾತುಗಳನ್ನು ಸೀಮಿತಗೊಳಿಸಿ ಮಾತನಾಡಬಯಸುತೇನೆ. ಆದರೆ ಈ ವಿಷಯದ ಮೇಲೆ ಫ್ರೇಜರನ ಪ್ರಭಾವ ಸಾಕಷ್ಟು ಕೆಲಸ ಮಾಡಿದೆ. ಎನ್ನುವುದನ್ನು ಬಹಿರಂಗಪಡಿಸುತ್ತಲೂ ಇದ್ದೇನೆ.'

ಬದುಕಿನಲ್ಲಿ ಪುರಾಣದ ಪಾತ್ರ, ಪುರಾಣಗಳ ಮೂಲ, ಹುಟ್ಟು ಸಾವಿನ, ಜೀವನಾವರ್ತಗಳ ಪುರಾಣಗಳು, ಮಾಂತ್ರಿಕತೆಯ ಪುರಾಣಗಳು ಈ ಕುರಿತು ಮ್ಯಾಲಿನೋಸ್ಕಿ ಮಲಯೇಶ್ಯಾ ಸಂಸ್ಕೃತಿಯ ಅಧ್ಯಯನ ಸಮೀಕ್ಷೆ ನಡೆಸಿ ಫ್ರೇಜರನ ಸಿದ್ಧಾಂತಗಳ ಪರಿಶೀಲನೆ ಮತ್ತು ಪ್ರತಿಪಾದನೆಗಳ ನೆಲೆಯಲ್ಲಿ ತನ್ನ ವಾದಗಳನ್ನು ಬೆಳೆಸಿದ್ದಾನೆ. (ನೋಡಿ : ಅದೇ, ಪು. 96 - 148)

"ಮಾಟವೆನ್ನುವುದು ಅನೇಕ ದೃಷ್ಟಿಗಳಿಂದಲೂ ಬಹುಮುಖ್ಯವಾದ್ದು. ವಾಸ್ತವದ ಬಗೆಗೆ ಆದಿಮಾನವನ ಅತ್ಯಂತ ನಿಗೂಢವಾದ ತೋರಿಕೆಗಳು ವರ್ತನೆಗಳು

ಮಾಂತ್ರಿಕತೆಯಲ್ಲಿ ವ್ಯಕ್ತವಾಗಿವೆ. ಇಂದಿನ ಮಾನವ ಕುಲಶಾಸ್ತ್ರಜ್ಞರು ಎದುರಿಸುತ್ತಿರುವ ಬಹು ಮುಖ್ಯವಾದ ವಾದ ವಿವಾದಗಳ ಸಮಸ್ಯೆಗಳು ಈ ಸಂಬಂಧದವುಗಳು. ಹೀಗಿದ್ದರೂ ಇಂತಹ ಅಧ್ಯಯನಕ್ಕೆ ಫ್ರೇಜರ ಹುಟ್ಟುಹಾಕಿದ ಮಾಟವಿದ್ಯೆಗೆ ಸಂಬಂಧಿಸಿದ ಸಿದ್ಧಾಂತವೇ ನಾಂದಿಯಾಯಿತು."

ಮಾಟ ಎನ್ನುವುದು ವಿಜ್ಞಾನದ ಹೊರಚಿಪ್ಪು. ಅದಕ್ಕೆ ಯಾವತ್ತೂ ಮಾನವ ಪ್ರವೃತ್ತಿಗಳ, ವೃತ್ತಿಕಾರ್ಯಗಳ ಅಗತ್ಯಗಳೊಂದಿಗೆ ನಿಕಟವಾಗಿ ಬೆಸೆದುಕೊಂಡಿರುವ ನಿರ್ದಿಷ್ಟ ಗುರಿಯಿರುತ್ತದೆ. ಮಾಟ ಕಲೆಯೆನ್ನುವುದು ಇಂತಹ ವ್ಯಾವಹಾರಿಕ ಗುರಿಸಾಧನೆಗಳ ಈಡೇರಿಕೆಯನ್ನು ಒಳಗೊಂಡ ಪ್ರಕ್ರಿಯೆ. ಇತರ ಕಲೆ ಮತ್ತು ವೃತ್ತಿಗಳ ಹಾಗೆ ಇದೂ ಸಿದ್ಧಾಂತಗಳ ಹಿನ್ನೆಲೆಯಲ್ಲೇ ಚಾಲನೆ ಪಡೆಯುತ್ತಿರುತ್ತದೆ. ನಿರ್ದಿಷ್ಟ ಪರಿಣಾಮವೊಂದಕ್ಕೆ ಸಂಬಂಧಿಸಿದಂತೆ ಕ್ರಿಯೆಯ ಸ್ವಭಾವವು ಕೆಲವು ನಿಯಮಗಳ ಒಂದು ವ್ಯವಸ್ಥೆಯ ನಿರ್ದೇಶನದಂತೆ ನಿಯಂತ್ರಿಸಲ್ಪಡುತ್ತದೆ. ಹೀಗೆ ಮಾಟ ಮತ್ತು ವಿಜ್ಞಾನ ಅನೇಕ ಸಾಮ್ಯಗಳನ್ನು ಹೊಂದಿವೆ. ಫ್ರೇಜರ ಹೇಳುವ ಹಾಗೆ ಸಾಧಾರಣ ಮಟ್ಟಿಗೆ ಮಾಟ ಎನ್ನುವುದು ಒಂದು ಮಿಥ್ಯ ವಿಜ್ಞಾನ (Psuedo Science) ಆತನ ಪ್ರಕಾರ ಪುರಾಣ ಕೂಡ ಒಂದು ಮಿಥ್ಯ ವಿಜ್ಞಾನವೇ ಆಗಿದೆ. ಐತಿಹ್ಯವನ್ನು ಆತ ಮಿಥ್ಯ ಚರಿತ್ರೆಯೆಂದು ಕರೆದಿದ್ದಾನೆ.

'ಈ ಎಲ್ಲ ನನ್ನ ಲೋಚನೆಗಳ ಹಕ್ಕುಗಳಾಗಲಿ, ಪ್ರಯೋಜನಗಳಾಗಲಿ ನನ್ನದಾಗಿರದೆ ಮತ್ತೆ ಫ್ರೇಜರನಿಗೇ ಸಲ್ಲುತ್ತವೆ. ಆತನ ಗೋಲ್ಡನ್ ಬೋದಲ್ಲಿ ಆಚರಣೆ ಮತ್ತು ಸಾಮಾಜಿಕ ಕಾರ್ಯಗಳಿಗೆ ಸಂಬಂಧಿಸಿದ ಪುರಾಣದ ಸಿದ್ಧಾಂತವು ಒಳಗೊಂಡಿದೆ. ಇದಕ್ಕೆ ನನ್ನದೇ ಆದ ಉಪಯುಕ್ತವೆನಿಸಬಹುದಾದ ಕಿರು ಕಾಣಿಕೆಯೊಂದನ್ನು ನೀಡಬಯಸುತ್ತಿದ್ದೇನೆ. ಆ ಮೂಲಕ ನನ್ನ ಕ್ಷೇತ್ರೀಯ ಅಧ್ಯಯನದ ಫಲಿತಾಂಶಗಳನ್ನು ಪರಿಶೀಲಿಸಿ ಪ್ರತಿಪಾದಿಸಲು ಮತ್ತು ದಾಖಲೆಗೊಳಿಸಲು ಸಾಧ್ಯವಾಗಬಹುದು. ಕೃಷಿ ಕಾರ್ಯಗಳಿಗೆ ಸಂಬಂಧಿಸಿದ ಫಲವಂತಿಕೆಯ ಆಚರಣೆಗಳ ಫ್ರೇಜರನ ಸಿದ್ಧಾಂತವೇ ಇದಾಗಿದೆ. ಆತನ ಅಧ್ಯಯನದ ಕೇಂದ್ರಭಾಗವು ಅಡೋನಿಸ್, ಅಟ್ಟಿಸ್, ಒಸಿರಿಸ್, ಧಾನ್ಯದೇವತೆಗಳು, ವನದೇವತೆಗಳಿಗೆ ಸಂಬಂಧಿಸಿದ ವರ್ಣನೆಗೆ ಮೀಸಲಾಗಿದೆ. ಆದಿಮ ಜನರ ನಂಬಿಕೆಯ ಮಾತು ಮತ್ತು

ಕ್ರಿಯೆಗಳ ನಡುವಣ ನಿಕಟ ಸಂಬಂಧವನ್ನು ಸ್ಥಾಪಿಸಿದವನು ಫ್ರೇಜರ. ಕಥೆಯಂತಹ ಮೌಖಿಕ ಸಾಹಿತ್ಯದ ಮಾತುಗಳು ಮತ್ತು ಅವುಗಳ ಪಠಣ ಹಾಗೂ ಆಚರಣೆಯ ಕ್ರಿಯೆಗಳು ಮತ್ತು ಅವುಗಳಿಗೆ ಸಂಬಂಧಿಸಿ ನಡೆಸುವ ಉತ್ಸವ ಇವು ಬಹು ಮಹತ್ವದ ಎರಡು ಸಂಗತಿಗಳು ಎನ್ನುವುದನ್ನು ಆತ ಪ್ರತಿಪಾದಿಸಿರುತ್ತಾನೆ.

## ಕೊನೆ ಟಿಪ್ಪಣಿಗಳು

1. Magic – ಈ ಪಾರಿಭಾಷಿಕವನ್ನು ನಾನು ಮಾಟ, ಮಾಂತ್ರಿಕತೆ, ಮಾಟಕಲೆ, ಮಾಟವಿದ್ಯೆ, ಪವಾಡ ಎಂಬ ಅರ್ಥಗಳಲ್ಲಿ ಸಾಂದರ್ಭಿಕವಾಗಿ ಬಳಸಿಕೊಂಡಿದ್ದೇನೆ.

2. Primitive - ಇದನ್ನು ಆದಿಮ, ಆದಿಮಹಂತ, ಆದಿಮಕಾಲದ ಜನರು ಮೊದಲಾದ ಅರ್ಥದಲ್ಲಿ ಬಳಸಿಕೊಂಡಿದ್ದೇನೆ.

3. Priest - ಪದಕ್ಕೆ ಅರ್ಚಕ, ಪಾತ್ರಿ, ಪಾದ್ರಿ, ಪೂಜಾರಿ, ಪುರೋಹಿತ ಇತ್ಯಾದಿ ಪರ್ಯಾಯ ವಾಚಕಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

4. Taboo - ಇದನ್ನು ನಿಷಿದ್ಧ, ವಿಧಿನಿಷೇಧ ಎಂಬೆಲ್ಲ ಹೆಸರುಗಳಲ್ಲಿ ಬಳಸಿಕೊಳ್ಳಲಾಗಿದೆ.

5. ಫ್ರೇಜರನ ಗೌರವಾರ್ಥ ಮಾಲಿನೋಸ್ಕಿ ಮಾಡಿರುವ ಭಾಷಣವನ್ನು Myth in Primitive Psychology dedication to Sir James Frazer ಎಂಬುದಾಗಿ ಅರ್ಪಣೆ ಮಾಡಿರುವುದನ್ನು ಗಮನಿಸಬೇಕು. " The claims and merits, however, are not mine but are due once more to sir James Frazer. The Golden Bough contains the theory of the ritual and sociological function of myth, to which I have been able to make but a small contribution in that I could test, prove, and document in my field work. This theory is implied in Frazer's treatment of magic in his mas

terly exposition of the great importance of agricultural rites, in the central place which the cults of vegetation and fertility occupy in the volumes of Adonis, Attis, Osiris and in there on the spirits of 'the corn and of the wild' (Bronislaw Malinowski, 1948, 147.)

# ಅನುಬಂಧ

1. "When I first put my pen to paper to write 'Golden Bough' I had no conception of the magnitude of the voyage on which I was embarking" - Frazer J.G. After math - introduction.

2. Such as it is, with all its short comings, I now submit Golden Bough in its completed form to the judgement of my contemporaries and perhaps to posterity"- Frazer J.G. After math - Introduction.

3. 'Frazers' Golden Bough,the great codex of primitive magic,shows clearly that animism is not the only,nor even the dominating belief in primitive culture. Early man seeks above all to control the course of nature for practical ends, and he does it directly, by its and spell,compelling wind and whether, animals and eropes to obey his will. Only much later,finding the limitations of his magical might, does he in fear or hope,in supplication or defiances appeal to higher beings, that is, to demons, ancestor- spirits or gods. . . . . . . Religion, the confession of human importance in certain matters, lifts man above the magical level, and later on maintains its independence side by side with science, to which magic has to succumb"- Mallinowski (1948,19).

## ಪರಾಮರ್ಶನ ಸಾಹಿತ್ಯ


1. ಅರ್ಲ್ ಸ್ಪೆನ್ಸರ್ 1997, ಉದಯವಾಣಿ. ಸೆಪ್ಟೆಂಬರ್ 14ರ ಸಂಚಿಕೆ. ಸಂಪಾದಕರು : ಟಿ. ಸತೀಶ ಯು. ಪೈ. ಮಣಿಪಾಲ - 576119.

2. ಮಂಗಳ ಚಿ.ನಾ, 1994, ಮಾತೃಪೂಜೆ
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ. ವಿದ್ಯಾರಣ್ಯ, ಕಮಲಾಪುರ 583221

3. ಶಂಕರನಾರಾಯಣ ತೀ.ನಂ. (ಡಾ), 1970. ಜಾನಪದ ಮೈಲಿಕಲ್ಲುಗಳು
ತೀ.ನಂ.ಶ್ರೀ. ಪ್ರಕಾಶನ, ಮೈಸೂರು - 570009.

4. ಶಂಕರನಾರಾಯಣ ತೀ.ನಂ.(ಡಾ), 1973
ಗೋಲ್ಡನ್ ಬೋ ಕನ್ನಡ ವಿಶ್ವಕೋಶ ಸಂಪುಟ ಆರು.
ಸಂಪಾದಕರು : ಡಾ. ಹಾ.ಮಾ.ನಾಯಕ, ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿ.ವಿ. ಮೈಸೂರು -570006.

5. ಸೈಪಂಗಲ್ಲು ಎಸ್ಸೆನ್‌ಭಟ್, 1997. ಹೀಗೊಂದು ಸಂಸ್ಕಾರ,
ಉದಯವಾಣಿ ಸೆಪ್ಟೆಂಬರ್ 3ರ ಸಂಚಿಕೆ.
ಸಂಪಾದಕರು : ಟಿ. ಸತೀಶ ಯು.ಪೈ, ಮಣಿಪಾಲ - 576119.

6. Frazer, Sir James George 1890.
The Golden Bough : A Study in Comparative Religion, London, Mecmillan.

7. Frazer, Sir James George 1891.
The Golden Bough : The Roots of Religion and Folklore with 100 Illustrations, Gown Publishers, INC, London.

8. Frazer, Sir James George 1922.
The Golden Bough : A Study in Magic and Religion
Great Briton.

9. Malinowski Bronislaw 1948.
Magic, Science and Religion and other Essays.
Double day Anchor Books
Double day Company INC.
Garden City New York

10. Theodore, Gaster (Ed), 1959
The New Golden Bough, London

11. Tylore, Edward B, 1871
Primitive Culture - New York